
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17
ಸಂಚಿಕೆ 27

ರೂ. 2.00
2 ಜುಲೈ 1995



ನರಸಿಂಹರಾಯರ ಬಡಾಯಿಗೆ ಮತ್ತೊಂದು ಸವಾಲೊಡ್ಡಿದ

ಟೆಲಿಕಾಂ ನೌಕರರ ದೇಶವ್ಯಾಪಿ ಮುಷ್ಕರ

ದೂರದರ್ಶನ, ಆಕಾಶವಾಣಿಗಳು ನರಸಿಂಹರಾಯರ ಸರಕಾರ ನಾಲ್ಕು ವರ್ಷಗಳನ್ನು "ಸರ್ವಸಮ್ಮತಿ"ಯಿಂದ ಪೂರೈಸಿದ "ಮಹತ್ಸಾಧನೆ"ಯ ತುತ್ತೂರಿ ಊದುತ್ತಿದ್ದಂತೆ 4.7 ಲಕ್ಷ ಟೆಲಿಕಾಂ ಕಾರ್ಮಿಕರ ಅನಿರ್ದಿಷ್ಟ ಕಾಲದ ಮುಷ್ಕರ ಈ ಬಗ್ಗೆ ಅಳಿದುಳಿದಿದ್ದ ಸಂಶಯವನ್ನೂ ದೂರ ಮಾಡಿದೆಯೆನ್ನಬಹುದು. ಎಸ್ಮಾ ಕರಾಳ ಇತ್ಯಾದಿ ಶಾಸನಗಳ ಬಳಕೆ, ಬೆದರಿಕೆಗಳು "ಸರ್ವಸಮ್ಮತಿ"ಯ ಸಾಧನಗಳಲ್ಲವಲ್ಲ, ಅವು ಭಿನ್ನಾಭಿಪ್ರಾಯವನ್ನು ದಮನ ಮಾಡಲಿರುವ ಸಾಧನಗಳು.

ಸಾಮಾನ್ಯವಾಗಿ ನೌಕರರು, ಕಾರ್ಮಿಕರು ಅದೂ ವಿಶೇಷವಾಗಿ ಸಾರ್ವಜನಿಕ ಸೇವೆಯ ವಲಯದ ನೌಕರರು ಮುಷ್ಕರಕ್ಕಿಳಿದಾಗ ಇವರೆಲ್ಲಾ ಕೇವಲ ತಮ್ಮ ಸಂಬಳ ಹೆಚ್ಚಿಸಿಕೊಳ್ಳಲು ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಾರೆ ಎಂದ ಬಂಡವಾಳಶಾಹಿಗಳ ಹತೋಟಿಯಲ್ಲಿರುವ ಪತ್ರಿಕೆಗಳು ಬೊಬ್ಬೆ ಹಾಕುವುದು ಸಾಮಾನ್ಯ.ಆದರೆ ಈ ಬಾರಿಯ ಟೆಲಿಕಾಂ ಮುಷ್ಕರ ಟೆಲಿಕಾಂ ನೌಕರರ ಯಾವುದೇ ಹಣಕಾಸು ಬೇಡಿಕೆಯ ಮೇಲಲ್ಲ. ಅದು ಇಡೀ ದೇಶದ ಪ್ರಗತಿಪರರನ್ನು ಚಿಂತೆಗೀಡು ಮಾಡಿರುವ ಯಾವುದೇ ಲಂಗುಲಗಾಮಿಲ್ಲದ, ದೇಶದ ಭದ್ರತೆಯ ಕಾಳಜಿಯೇ ಇಲ್ಲದ ಖಾಸಗೀಕರಣವನ್ನು ವಿರೋಧಿಸಿ ನಡೆದಿರುವ ಒಂದು ದೇಶಪ್ರೇಮಿ ಹೋರಾಟ. ಆದರೂ ನೌಕರರಿಗೆ ದೇಶಪ್ರೇಮದ, ಸಮಾಜ ಪ್ರೇಮದ ಉಪದೇಶ ನೀಡಲು ಸದಾ ತುದಿಗಾಲಲ್ಲ ನಿಂತಿರುವ ಬಂಡವಾಳಶಾಹಿಗಳ ಹತೋಟಿಯ ಪತ್ರಿಕೆಗಳು ಈ ಬಾರಿಯೂ ಅದೇ ರೀತಿ ಬೊಬ್ಬೆ ಹಾಕಿವೆ. ಕನ್ನಡದ ಒಂದು ದೈನಿಕವಂತೂ ನೌಕರರು ದೇಶದ "ಭರಾಟೆಯಿಂದ ನಡೆಯುತ್ತಿರುವ ಆರ್ಥಿಕ ಉದಾರೀಕರಣಕ್ಕೆ ವಿರೋಧವಾಗಿದ್ದಾರೆ ಎಂದರ್ಥವೇ?" ಎಂಬ ಬಾಲಿಶ ಪ್ರಶ್ನೆ ಹಾಕಿದೆ. ಉದಾರೀಕರಣವನ್ನು ವಿರೋಧಿಸುವುದು ಕೂಡಾ ಕಾನೂನುಬಾಹಿರವಾಗಿದೆಯೇನು? ತಮಾಷೆಯೆಂದರೆ ಇದೇ ಪತ್ರಿಕೆ ಮರುದಿನ "ಉದಾರೀಕರಣ ಬಡವರ ಜೀವನ ಮಟ್ಟವನ್ನು ಸುಧಾರಿಸಿಲ್ಲ" ಎಂದಿದೆ!

ದೇಶದ ಎಡ, ಪ್ರಗತಿಪರ ಶಕ್ತಿಗಳು ಕಳೆದ ನಾಲ್ಕು ವರ್ಷಗಳಿಂದ ಇದೇ ಮುನ್ನೆಚ್ಚರಿಕೆ ಕೊಡುತ್ತಾ ಬಂದಿವೆ. ಕಾರ್ಮಿಕ ಸಂಘಗಳು, ಇತರ ಸಾಮೂಹಿಕ ಸಂಘಟನೆಗಳು ಈ ಬಗ್ಗೆ ತಮ್ಮ ಬಲವಾದ ಹಾಗೂ ಐಕ್ಯ ಪ್ರತಿಭಟನೆಗಳನ್ನು ಆಗಾಗ ವ್ಯಕ್ತಪಡಿಸಿವೆ. ಟೆಲಿಕಾಂ ನೌಕರರ ಮುಷ್ಕರ ಮತ್ತೊಮ್ಮೆ ಈ ಪ್ರಶ್ನೆಯತ್ತ ದೇಶದ ಗಮನ ಸೆಳೆದಿದೆ. "ಉದಾರೀಕರಣ"ದಿಂದ ಪ್ರಯೋಜನವಾಗಿರುವುದು ಒಂದು ಅತೀ ಸಣ್ಣ ವಿಭಾಗಕ್ಕೆ ಮಾತ್ರ, ಆ ವಿಭಾಗದ ಜನ ಈಗ ಜಾಗತಿಕ ಮಟ್ಟ ತಲುಪಿರಬಹುದು. ಆದರೆ ದೇಶದ ಬಹುಪಾಲು ಜನರ ಗತಿ? ಇದೇ ರೀತಿ ನರಸಿಂಹರಾವ್ ಸರಕಾರದ ಟೆಲಿಕಾಂ ನೀತಿ ಕೂಡಾ ಹಿಡಿಯಷ್ಟು ಮೇಲ್ವರ್ಗದ ಜನಗಳಿಗೆ ಅತ್ಯಾಧುನಿಕ ಸಂಪರ್ಕ ಸೌಲಭ್ಯ ಒದಗಿಸಬಹುದು, ಆದರೆ ಅದಕ್ಕೆ ವಿಪರೀತ ಬೆಲೆ ತೆರಲು ಸಾಧ್ಯವಿಲ್ಲದ ಬಹುಪಾಲು ಜನರಿಗೆ ಇಂತಹ ಸೌಲಭ್ಯಗಳಿಂದ ಏನು ಪ್ರಯೋಜನ, ಅದಕ್ಕಿಂತ ಕಡಿಮೆ ಖರ್ಚಿನಲ್ಲಿ ದೂರಸಂಪರ್ಕ ಇಲಾಖೆಯಿಂದಲೇ ಉತ್ತಮ ಸೇವಾ ಸೌಲಭ್ಯ ಒದಗಿಸಲು ಸಾಧ್ಯ -ಅದಕ್ಕೆ ಪರ್ಯಾಯ ನೀಡಲು ಸಾಧ್ಯ. ಟೆಲಿಕಾಂ ನೌಕರರ ಮುಷ್ಕರ, ಈ ಮುಷ್ಕರದ ವೇಳೆ ಅವರು ತೋರಿರುವ ಐಕ್ಯತೆ ಈ ಅಂಶಗಳತ್ತ ದೇಶದ ಪ್ರಗತಿಪರರ ಗಮನ ಸೆಳೆದಿದೆ. ಬಂಡವಾಳಶಾಹಿಗಳ ಹಿಡಿತದ ಪತ್ರಿಕೆಗಳಿಗೆ ಅದು ಕಾಣದಿದ್ದರೆ ಅದು ಸ್ವಾಭಾವಿಕ.

ಟೆಲಿಕಾಂ ನೌಕರರ ಈ ಮುಷ್ಕರ ಇನ್ನೊಂದು ಅಂಶದತ್ತಲೂ ಗಮನ ಸೆಳೆದಿದೆ. ಅದೆಂದರೆ ಸರಕಾರ ತನ್ನದೇ ಟೆಲಿಕಾಂ ನೀತಿಯನ್ನು ತಾನೇ ಉಲ್ಲಂಘಿಸುತ್ತಿದೆ. ಉದಾರೀಕರಣದ ವಾತಾವರಣದಲ್ಲಿ ಬ್ಯಾಂಕ್-ಶೇರು ಹಗರಣ ದೇಶದ ಆರ್ಥಿಕವನ್ನು ತತ್ತರಿಸುವಂತೆ ಮಾಡಿದ ಮೇಲೆ ಜನರ ಗಮನಕ್ಕೆ ಬಂತು. ಆದರೆ ಅಂತಹುದೇ ಇನ್ನೊಂದು ಹಗರಣ ಕಣ್ಣೆದುರೇ ಬೆಳೆಯುತ್ತಿರುವುದರತ್ತ ಟೆಲಿಕಾಂ ನೌಕರರ ಮುಷ್ಕರ ಗಮನ ಸೆಳೆದಿದೆ. ನೌಕರರು ಸಾಮಾಜಿಕ ಕರ್ತವ್ಯಗಳ ಬಗ್ಗೆ ಸದಾ ಉಪದೇಶ ನೀಡುವುದು ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸುವವರಿಗೆ ಇದು ಕಾಣದಿರುವುದು ದುರದೃಷ್ಟವೆನ್ನೋಣವೇ ಅಥವಾ ಕೇವಲ ಅವರ ಸಹಜ ವರ್ಗಗುಣವೆನ್ನೋಣವೇ?

"ತಪ್ಪು ಸಂಕೇತ"

ಈ ಸಮಯದಲ್ಲಿ ಟೆಲಿಕಾಂ ನೌಕರರ ಮುಷ್ಕರ ವಿದೇಶೀ ಬಂಡವಾಳ ಹೂಡಿಕೆದಾರರಿಗೆ ತಪ್ಪು ಸಂಕೇತ ನೀಡುತ್ತಿದೆ ಎಂದು ದೂರಸಂಪರ್ಕ ಮಂತ್ರಿಗಳು ವಿಲವಿಲ ಒದ್ದಾಡಿದ್ದಾರೆ. ಎನ್ರೋನ್ ವಿದ್ಯುಚ್ಛಕ್ತಿ ಯೋಜನೆಯ ತೆರೆಮರೆಯಲ್ಲಿ ನಡೆಯುತ್ತಿರುವ ಸಂಗತಿಗಳ ಬಗ್ಗೆ ಸಾರ್ವಜನಿಕ ಪ್ರತಿಭಟನೆ ಬಂದಾಗಲೂ ನರಸಿಂಹರಾವ್ ಸರಕಾರದ ಮಂತ್ರಿಗಳು, ವಕ್ತಾರರು ಇದೇ ರೀತಿ ಒದ್ದಾಟ ವ್ಯಕ್ತಪಡಿಸಿದ್ದರು- ತಪ್ಪು ಸಂದೇಶ ನೀಡಿದಂತಾಗುತ್ತದೆ ಎಂದು.

ಹೌದು.ಎನ್ರೋನ್ ಯೋಜನೆಯ ವಿರೋಧಿಗಳು ಕೂಡಾ ತಪ್ಪು ಸಂದೇಶ ಜಗತ್ತಿಗೆ ಹೋಗದಿರಲೆಂದೇ ತಮ್ಮ ಪ್ರತಿಭಟನೆಯನ್ನು ಮುಂದುವರಿಸಿದ್ದಾರೆ. ಟೆಲಿಕಾಂ ನೌಕರರು ಕೂಡಾ ತಪ್ಪು ಸಂದೇಶ ಹೋಗದಿರಲೆಂದು ಅನಿರ್ದಿಷ್ಟ ಕಾಲದ ಮುಷ್ಕರದ ಅಸ್ತ್ರ ಬಳಸಿದ್ದಾರೆ - ಭಾರತದಲ್ಲಿ ವಿದೇಶೀಯರು ಲಾಭ ದೋಚಲು ಏನು ಬೇಕಾದರೂ ಮಾಡಬಹುದು, ಅದರ ಮರೆಯಲ್ಲಿ ನಮ್ಮ ಆಳುವ ಜನ ಏನು ಬೇಕಾದರೂ ದೋಚಿಕೊಳ್ಳಬಹುದು ಎಂಬ ತಪ್ಪು ಸಂದೇಶ ಹೋಗದಿರಲಿ ಎಂದು. ಇದರಿಂದ ತತ್ತರಿಸಿರುವ "ಸರ್ವಸಮ್ಮತಿ"ಯ ಮುಖವಾಡ ಹೊತ್ತ ಸರಕಾರ ದಮನಕ್ಕಿಳಿಯಿತು.

ದೂರಸಂಪರ್ಕ ನೌಕರರ ಮುಷ್ಕರಕ್ಕೆ ಸಿಪಿಐ(ಎಂ) ಬೆಂಬಲ

ಟೆಲಿಫೋನ್ ಸೇವೆಯ ಖಾಸಗೀಕರಣವನ್ನು ವಿರೋಧಿಸಿ 5 ಲಕ್ಷ ಟೆಲಿಕಾಂ ನೌಕರರು ದೇಶಾದ್ಯಂತ ಪ್ರಾರಂಭಿಸಿರುವ ನ್ಯಾಯಯುತ ಮುಷ್ಕರಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಸಂಪೂರ್ಣ ಬೆಂಬಲ ನೀಡಿದೆ. ಟೆಲಿಕಾಂನ ಖಾಸಗೀಕರಣ ದೇಶಕ್ಕೂ ಬಾಧಕವಾಗಿದೆ. ಅದರಿಂದಾಗಿ ನಿರುದ್ಯೋಗ ಸಮಸ್ಯೆ ಉಂಟಾಗುತ್ತದೆ. ಈಗ ನೌಕರಿಯಲ್ಲಿರುವ ಲಕ್ಷಾವಧಿ ನೌಕರರ ಸೇವೆಯ ಭದ್ರತೆಗೂ ಅಪಾಯ ಉಂಟಾಗಿರುವುದರಿಂದ ಸರಕಾರ ತನ್ನ ನೀತಿಯನ್ನು ಕೈಬಿಡಬೇಕೆಂದು ಯೂನಿಯನ್ನಿನ ಪ್ರತಿನಿಧಿಗಳು ಕಳೆದ ಕೆಲವು ತಿಂಗಳುಗಳಿಂದಲೂ ಚರ್ಚಿಸುತ್ತಲೇ ಬಂದಿದ್ದಾರೆ. ಸಂಪಿನ ನೋಟೀಸನ್ನೂ ಕೊಟ್ಟಿದ್ದಾರೆ. ಇದು ಕಾಯಿದೆಬದ್ಧವಾದ ಮುಷ್ಕರ ಇದ್ದರೂ ಕೂಡಾ ಸರಕಾರ ಈ ಮುಷ್ಕರವನ್ನು ಪ್ರತಿಬಂಧಿಸಿರುವುದನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ. ನೌಕರರ ಐಕ್ಯ ಹೋರಾಟವನ್ನು ಮುರಿಯುವ ದುರುದ್ದೇಶದಿಂದ ನೌಕರರಲ್ಲಿ ಭೀತಿ ಉಂಟು ಮಾಡುವ ಸಲುವಾಗಿ ಎಸ್ಮಾ ಸಶಸ್ತ್ರ ಸೈನಿಕರ ಡ್ಯೂಟಿ ಆಕ್ಟ್ ಹಾಗೆಯೇ ಮತ್ತಿನ್ನಿತರ ಕಾರ್ಮಿಕ ವಿರೋಧಿ ಪ್ರಜಾಪ್ರಭುತ್ವ ವಿರೋಧಿ, ಮೂಲಭೂತ ಹಕ್ಕುಗಳ ವಿರೋಧಿಯಾದ ಕಾನೂನುಗಳನ್ನು ಉಪಯೋಗಿಸುವಂತೆ ಆದೇಶ ನೀಡಿರುವುದನ್ನು ಸಿಪಿಐ(ಎಂ) ಪ್ರಜಾಪ್ರಭುತ್ವ ವಿರೋಧಿ ಕ್ರಮವೆಂದು ಆರೋಪಿಸಿದೆ.

ದೇಶದ ಸಾರ್ವಭೌಮತ್ವದ, ನೌಕರರ ನೌಕರಿ ಭದ್ರತೆಯ ಮಹತ್ವದ ಪ್ರಶ್ನೆಗಳು ಟೆಲಿಕಾಂ ನೌಕರರ ಮುಷ್ಕರದಲ್ಲಿ ಇರುವುದರಿಂದ ಪಕ್ಷದ ಎಲ್ಲಾ ಘಟಕಗಳು, ಪ್ರಜಾಪ್ರಭುತ್ವವಾದಿ ಶಕ್ತಗಳು ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ ನ್ಯಾಯಯುತವಾದ ಮುಷ್ಕರ ಯಶಸ್ವಿಯಾಗುವಂತೆ ಸರ್ವ ರೀತಿಯ ಬೆಂಬಲ ನೀಡಿಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.

ಒಂದು ಮಹತ್ವಪೂರ್ಣ ಪ್ರತಿಭಟನೆ -ಪೊಲಿಟ್ ಬ್ಯೂರೋ


ಟೆಲಿಕಾಂ ನೌಕರರ ಮೂರು ರಾಷ್ಟ್ರೀಯ ಸಂಘಟನೆಗಳ ಕರೆಯ ಮೇರೆಗೆ ಜೂನ್ 19ರಿಂದ ಆರಂಭವಾದ ದೇಶವ್ಯಾಪಿ ಮುಷ್ಕರ ಸರಕಾರೀ ವಲಯದಲ್ಲಿ ದೂರಸಂಪರ್ಕ ಇಲಾಖೆಯನ್ನು ಕಳಚಿ ಹಾಕುವ ಪ್ರಯತ್ನಗಳ ವಿರುದ್ಧ ಹಾಗೂ ಮೂಲಭೂತ ದೂರಸಂಪರ್ಕ ಸೇವೆಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಪ್ರವೇಶದ ವಿರುದ್ಧ ಒಂದು ಮಹತ್ವಪೂರ್ಣ ಪ್ರತಿಭಟನೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ನರಸಿಂಹರಾವ್ ಸರಕಾರ ನಾಚಿಕೆಯಿಲ್ಲದೆ ವಿದೇಶೀ ಬಂಡವಾಳವನ್ನು ತೃಪ್ತಿಗೊಳಿಸಲು ಹೆಣಗುತ್ತಿರುವುದನ್ನು ಕಂಡು ಆತಂಕಿತರಾದ ನಾಗರಿಕರೆಲ್ಲರ ಸಂಪೂರ್ಣ ಬೆಂಬಲಕ್ಕೆ ಅರ್ಹವಾದ ಪ್ರತಿಭಟನೆಯಿದು ಎಂದಿದೆ.

ದಮನ ಕ್ರಮಗಳಿಂದ ಮುಷ್ಕರವನ್ನು ದಮನ ಮಾಡುವ ಕೇಂದ್ರ ಸರಕಾರದ ಪ್ರಯತ್ನವನ್ನು ಪೊಲಿಟ್ ಬ್ಯೂರೋ ಖಂಡಿಸಿದೆ. ಕೇಂದ್ರ ಸರಕಾರ ಹೇಳಿದಂತೆ ಮಧ್ಯಪ್ರದೇಶ, ದಿಲ್ಲಿ, ಚಂಡೀಗಢ ಹಾಗೂ ಚಂಡೀಗಢದ ಸರಕಾರಗಳು ಎಸ್ಮಾ ಬಳಸಿವೆ. ಪಶ್ಚಿಮ ಬಂಗಾಳ, ತ್ರಿಪುರಾ ಎಡರಂಗ ಸರಕಾರಗಳು ಎಸ್ಮಾ ಬಳಸಲು ನಿರಾಕರಿಸಿವೆ.

ಟೆಲಿಕಾಂ ನೌಕರರಿಗೆ ಸಂಪೂರ್ಣ ಬೆಂಬಲ, ಸೌಹಾರ್ದ ನೀಡಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಎಲ್ಲಾ ಘಟಕಗಳಿಗೆ ಹಾಗೂ ಪ್ರಜಾಪ್ರಭುತ್ವವಾದಿ ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡಿದೆ.

ವಾರದ ವ್ಯಂಗ ಚಿತ್ರ

ಇಕನಾಮಿಕ್ಸ್ ಟೈಮ್ಸ್‌ನಲ್ಲಿ ಉನ್ನಿ



ವರ್ತಮಾನ

ಏಕೆ ಈ ದುಬಾರಿಯ, ತರಾತುರಿಯ ಖಯಾಲಿ? ಸಂಸದೀಯ ಸ್ಥಾಯಿ ಸಮಿತಿಯ ಪ್ರಶ್ನೆ

ನೈವೇಲಿ ಲಿಗ್ನೈಟ್ ಕಾರ್ಪೋರೇಶನ್‌ನ 210 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ 'ಝಿರೋ ಯೂನಿಟ್ ಪ್ರಾಜೆಕ್ಟ್' ಎಂಬ ಯೋಜನೆಗೆ ಸರಕಾರ ಮಾರ್ಚ್ 1989ರಲ್ಲಿ ಅನುಮತಿ ನೀಡಿತು. ನಂತರ 32 ತಿಂಗಳ ಕಾಲ ಈ ಯೋಜನೆಗೆ ಯಂತ್ರ ಸಾಮಗ್ರಿಗಳನ್ನು ಪೂರೈಸುವವರೊಡನೆ 'ಮಾತುಕತೆ'ಗಳಲ್ಲೇ ಕಳೆಯಿತು. ಬೇರೇನೂ ಆಗಲಿಲ್ಲ.

ಅಕ್ಟೋಬರ್ 23, 1991. ಅಮೇರಿಕಾದ ಸಂಸತ್ತಿನ ಸದಸ್ಯರೊಬ್ಬರ ಕಾಗದ ಪ್ರಧಾನಮಂತ್ರಿಗಳಿಗೆ - ಶರದ್ ಟಾಕ್ ಎಂಬ ಅನಿವಾಸಿ ಭಾರತೀಯ ಭಾರತದಲ್ಲಿ ಬಂಡವಾಳ ತೊಡಗಿಸಬೇಕೆಂದಿದ್ದಾನೆ, ಅವಕಾಶ ಕೊಡಿ ಎಂದು. ಎರಡು ದಿನಗಳ ನಂತರ ಅಮೇರಿಕಾದ ರಾಯಭಾರ ಕಛೇರಿಯಿಂದ ನೈವೇಲಿ ಲಿಗ್ನೈಟ್ ಕಾರ್ಪೋರೇಶನ್‌ನ ಅಧ್ಯಕ್ಷರಿಗೆ ಒಂದು ಶಿಫಾರಸು ಪತ್ರ - ನಿಮ್ಮ ಯೋಜನೆಗೆ ಈತ ಬಂಡವಾಳ ತೊಡಗಿಸುತ್ತಾನೆ, ಅವಕಾಶ ಕೊಡಿ!

ಎರಡೂವರೆ ವರ್ಷ ತೆಪ್ಪಗಿದ್ದ ನೈವೇಲಿ ಲಿಗ್ನೈಟ್ ಕಾರ್ಪೋರೇಶನ್‌ನ ಆಡಳಿತ ಮಂಡಳಿ ಇದ್ದಕ್ಕಿದ್ದಂತೆ ಚುರುಕಾಯಿತು. ನವಂಬರ್ 26ರಂದು ಖಾಸಗೀ ಬಂಡವಾಳ ಹೂಡಿಕೆದಾರನಿಂದ ಪತ್ರ ಬಂತು. ಮರುದಿನವೇ ನೈವೇಲಿ ಲಿಗ್ನೈಟ್ ಕಾರ್ಪೋರೇಶನ್‌ದ ನಿರ್ದೇಶಕ ಮಂಡಳಿ ಸಭೆ ಸೇರಿ ತಕ್ಷಣ ಈ ಪ್ರಸ್ತಾಪವನ್ನು ಸ್ವೀಕರಿಸಬೇಕೆಂದು ಶಿಫಾರಸು ಮಾಡಿ ಕಲ್ಲಿದ್ದಲು ಇಲಾಖೆಗೆ ಪತ್ರ ಹೋಯಿತು.

ಈಗ ಈ ಯೋಜನೆಯನ್ನೂ ಖಾಸಗಿ ರಂಗದಲ್ಲಿ ಸ್ಥಾಪಿಸಲಾಗುತ್ತಿದೆ. ಎಸ್.ಟಿ.-ಸಿ.ಎಂ.ಎಸ್. ಇಲೆಕ್ಟ್ರಿಕ್ ಕಂಪೆನಿ ಎಂಬ ಈ ಕಂಪನಿ ವಹಿಸಿಕೊಂಡಿರುವ ಯೋಜನೆಯ ವೆಚ್ಚ ಈಗ 1325 ಕೋಟಿ ರೂ. ಎರಡೂವರೆ ವರ್ಷಗಳ ಹಿಂದೆ ನೈವೇಲಿ ಲಿಗ್ನೈಟ್ ಕಾರ್ಪೋರೇಶನ್‌ನ ಅಂದಾಜು 397 ಕೋಟಿ ರೂ. ಈಗಿನ ಬೆಲೆಗಳಲ್ಲಿ ಅದು 767 ಕೋಟಿ ರೂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇತ್ತು. ಆದರೂ ಏಕೆ ಈ ಸಾರ್ವಜನಿಕ ವಲಯದ ಯೋಜನೆಯನ್ನು ಖಾಸಗೀ ವಲಯಕ್ಕೆ ಅಷ್ಟೊಂದು ತರಾತುರಿಯಿಂದ ನೀಡಿದ್ದು?

ಇದು ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಂಸದೀಯ ಸ್ಥಾಯೀ ಸಮಿತಿಯ 26ನೇ ವರದಿ ಹಾಕಿರುವ ಪ್ರಶ್ನೆ. ಸರಕಾರದ ಬಳಿ ಇದಕ್ಕೆ ಉತ್ತರವಿದೆಯೇ? ಸಾರ್ವಜನಿಕ ವಲಯದಲ್ಲಿ ಪ್ರತಿ ಮೆಗಾವಾಟ್ ವಿದ್ಯುತ್ತಿಗೆ 1.89 ಕೋಟಿ ರೂ. ಖರ್ಚಾಗುತ್ತಿದ್ದರೆ ಈಗ ಖಾಸಗಿಯವರಿಗೆ ನೀಡಿ ಪ್ರತಿ ಮೆಗಾವಾಟ್ ವಿದ್ಯುತ್ತಿಗೆ 5.3 ಕೋಟಿ ರೂ. ತೆರಬೇಕು. ಅಲ್ಲದೆ ಈ ಖಾಸಗೀ ಕಂಪೆನಿಗೆ ವಿದ್ಯುತ್ ಉತ್ಪಾದನೆಯ ಅನುಭವ ಏನೇನೂ ಇಲ್ಲ! ಏಕೆ? ಈ ಬಗ್ಗೆ ತನಿಖೆ ನಡೆಯಬೇಕು ಎಂದು ಸಂಸತ್ತಿನ ಸ್ಥಾಯೀ ಸಮಿತಿ ಆಗ್ರಹಪಡಿಸಿದೆ.

ಮತ್ತೊಂದು ತಮಾಷೆ

ಇದೇ ರೀತಿ ಅರುಣಾಚಲ ಪ್ರದೇಶದಲ್ಲಿ 600 ಮೆಗಾವಾಟ್ ಕಮೆಂಗ್ ಜಲ ವಿದ್ಯುತ್ ಯೋಜನೆಯನ್ನು ಖಾಸಗಿಯವರಿಗೆ ಹಸ್ತಾಂತರಿಸುವುದರ ಬಗ್ಗೆಯೂ ಸಮಿತಿ ಆತಂಕ ವ್ಯಕ್ತಪಡಿಸಿದೆ. ಇದನ್ನು ನಾರ್ತ್ ಈಸ್ಟರ್ನ್ ಇಲೆಕ್ಟ್ರಿಕ್ ಪವರ್ ಕಾರ್ಪೋರೇಶನ್ ಒಂದು ಕೇಂದ್ರೀಯ ಯೋಜನೆಯಾಗಿ ಸ್ಥಾಪಿಸುವ ಯೋಜನೆಯಿತ್ತು. ಅದಕ್ಕೆ ಅಗತ್ಯ ಹಣವನ್ನೂ ಎತ್ತಿಡಲಾಗಿತ್ತು. ಇನ್ನೂ ತಮಾಷೆಯೆಂದರೆ ಒಂದು ಖಾಸಗೀ ಕಂಪೆನಿಯೊಡನೆ ಅರುಣಾಚಲ ಪ್ರದೇಶ ರಾಜ್ಯ ಸರಕಾರ ಈ ಯೋಜನೆಯ ಬಗ್ಗೆ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿ ಎರಡು ವರ್ಷಗಳು ದಾಟಿ ಹೋಗಿದ್ದರೂ ಇದುವರೆಗೂ ಈ ಯೋಜನೆಯ ಜ್ಯಾರಿಯಲ್ಲಿ ಗಮನಾರ್ಹ ಪ್ರಗತಿಯೇನೂ ಆಗಿಲ್ಲ. ಆದ್ದರಿಂದ ಈಗಲಾದರೂ ವಿದ್ಯುಚ್ಛಕ್ತಿ ಸಚಿವಾಲಯ ರಾಜ್ಯ ಸರಕಾರದೊಡನೆ ಈ ವಿಷಯವನ್ನು ಗಂಭೀರವಾಗಿ ಚರ್ಚಿಸಿ ಇದನ್ನು ಕೇಂದ್ರೀಯ ವಲಯದಲ್ಲಿ ಆರಂಭಿಸಬೇಕೆಂದು ಸ್ಥಾಯೀ ಸಮಿತಿ ಹೇಳಿದೆ.

ಇದೇ ಪ್ರದೇಶದಲ್ಲಿ ಇನ್ನೊಂದು ಸರಕಾರೀ ವಲಯದ ಕಾರ್ಬಿ ಲಾಂಗ್ಪಿ ಯೋಜನೆಯನ್ನು ಜಂಟಿ ವಲಯಕ್ಕೆ ವರ್ಗಾಯಿಸಲಾಗಿದೆ. ಸರಕಾರೀ ವಲಯದಲ್ಲಿ ಶೇ. 50ರಷ್ಟು ಯೋಜನೆ ಪೂರ್ಣಗೊಂಡಿರುವಾಗ ಯಾವ ಶರತ್ತಿನ ಮೇಲೆ ಹೇಗೆ ಇದನ್ನು ವರ್ಗಾಯಿಸಲಾಯಿತು ಎಂದು ಸಂಸದೀಯ ಸ್ಥಾಯೀ ಸಮಿತಿ ಸ್ಪಷ್ಟೀಕರಣ ಕೇಳಿದೆ.

ಖಾಸಗೀ ವಲಯದಲ್ಲಿ ವಿದ್ಯುತ್ ಯೋಜನೆ ಖರ್ಚು ಅತೀ ಹೆಚ್ಚು

ಖಾಸಗೀ ವಲಯದ ವಿದ್ಯುತ್ ಯೋಜನೆಗಳಲ್ಲಿ ತಲಾ ಮೆಗಾವಾಟ್ ಖರ್ಚು ಬಿ.ಹೆಚ್.ಇ.ಎಲ್. ಸೂಚಿಸಿದ ಖರ್ಚಿಗಿಂತ ಬಹಳ ಹೆಚ್ಚಿದೆ.ಆದ್ದರಿಂದ ಸರಕಾರ ಈ ಖರ್ಚನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಸದೀಯ ಸ್ಥಾಯೀ ಸಮಿತಿ ಹೇಳಿದೆ.

ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ(CEA) ಅನುಮೋದನೆ ನೀಡಿರುವ ನಾಲ್ಕು ಅನಿಲ ಆಧಾರಿತ ಯೋಜನೆಗಳಲ್ಲಿ ಎನ್ರೋನ್‌ನ ಖರ್ಚು(ಮೆಗಾವಾಟ್‌ಗೆ 4.19 ಕೋಟಿ ರೂ.)ಅತೀ ಹೆಚ್ಚು. ಉಳಿದ ಮೂರು ಯೋಜನೆಗಳ ಖರ್ಚು 3.52 ಕೋಟಿ ರೂಗಳಿಂದ 3.74 ಕೋಟಿ ರೂಗಳವರೆಗಿದೆ. ಮೂರು ಕಲ್ಲಿದ್ದಲು ಆಧಾರಿತ ಯೋಜನೆಗಳಲ್ಲಿ ವಿಶಾಖಪಟ್ಟಣಂ ಯೋಜನೆ ಅತೀ ವೆಚ್ಚದಾಯಕ ಮೆಗಾವಾಟಿಗೆ 5.82 ಕೋಟಿ ರೂ. ಉಳಿದೆರಡು ಯೋಜನೆಗಳ ವೆಚ್ಚ ಇಬ್ ವ್ಯಾಲಿ 4.82 ಕೋಟಿ ರೂ. ಹಾಗೂ ಮಂಗಳೂರಿನ(ಕೊಜೆಂಟ್ರಿಕ್ಸ್) ಯೋಜನೆಗೆ 5.08 ಕೋಟಿ ರೂ.

ಬಿ.ಹೆಚ್.ಇ.ಎಲ್. ಲೆಕ್ಕಾಚಾರದ ಪ್ರಕಾರಅದು ಉತ್ಪಾದಿಸಿದ ಯಂತ್ರೋಪಕರಣಗಳನ್ನು ಬಳಸಿದರೆ ಈ ವೆಚ್ಚ 3.6 ಕೋಟಿ-4.3. ಕೋಟಿರೂ.ಗಳಾಗುತ್ತದಷ್ಟೇ ಆದರೂ ಸರಕಾರ ಖಾಸಗಿಯವರಗೆ ಮೊರೆ ಹೋಗುತ್ತಿದೆ ಏಕೆ?

ಬಿ.ಎಸ್.ಪಿ. ನುಡಿಮುತ್ತುಗಳು

- 10.3.94: ಬಿಜೆಪಿ ಮನುವಾದಿಗಳ ಪಕ್ಷ -ಕಾನ್ಶಿರಾಮ್
- 25.3.94: ಕಲ್ಯಾಣ್ ಸಿಂಗ್‌ರ ರಾಜ್ಯಭಾರದಲ್ಲಿ ಅತೀ ಹೆಚ್ಚು ಅನ್ಯಾಯವಾದದ್ದು ಬಹುಜನರ ಮೇಲೆ. ಕೇವಲ ಅಲಹಾಬಾದ್ ಜಿಲ್ಲೆಯೊಂದರಲ್ಲೇ ದಲಿತರು ಮತ್ತು ಹಿಂದುಳಿದವರ ಮೇಲೆ ಅತ್ಯಾಚಾರದ 467 ಘಟನೆಗಳು ನಡೆದವು - ಕಾನ್ಶಿರಾಮ್
- 3.5.95 : ಬಾಬ್ರಿ ಮಸೀದಿ ಧ್ವಂಸ ಮಾಡಿದ ಬಿಜೆಪಿ ದಲಿತ, ಹಿಂದುಳಿದವರು, ಅಲ್ಪಸಂಖ್ಯಾತರ ಶತ್ರು - ಕಾನ್ಶಿರಾಮ್
- 8.5.95 : ನಾನು ಚಮಾರ್ರ ಮಂತ್ರಿಯಾದ್ದರಿಂದ ಬನಾರಸ್ ನಲ್ಲಾದ ಕೊಲೆಗಳ ಆರೋಪವನ್ನು ಬಿಜೆಪಿ ಮುಖಂಡರು ನನ್ನ ತಲೆಗೆ ಹಚ್ಚುತ್ತಿದ್ದಾರೆ - ದೀನಾನಾಥ್ ಭಾಸ್ಕರ್(ಆಗ ಬಿ.ಎಸ್.ಪಿ. ಮಂತ್ರಿ)
- 21.5.95: ಬಿ.ಎಸ್.ಪಿ. ಮಹಿಳಾ ಮುಖಂಡರಾದ ಸಮತಾ ದೇವಿಯ ಅಪಹರಣದಲ್ಲಿ ಬಿಜೆಪಿಯವರು ಶಾಮೀಲಾಗಿದ್ದಾರೆ. - ಲಾಲ್ ಬಹಾದೂರ್ ಪಟೇಲ್(ಆಗ ಬಿ.ಎಸ್.ಪಿ. ಮಂತ್ರಿ)
- 23.5.95: ಬಿಜೆಪಿ ಮುಸಲ್ಮಾನರ ಕಡುವೈರಿ -ಕಾನ್ಶಿರಾಮ್

ಬಿಜೆಪಿ ಉವಾಚ

- 17.12.93: ಇಡೀ ಬಿ.ಎಸ್.ಪಿ. ಗೂಂಡಾಗಳ, ದುಷ್ಟರ ಪಕ್ಷ -ಕೇಸರೀನಾಥ್ ತ್ರಿಪಾಠಿ(ಮಾಜಿ ವಿಧಾನಸಭಾಧ್ಯಕ್ಷ)
- 28.7.94: ಮುಲಾಯಂ ಸಿಂಗ್ ಕಾನ್ಶಿರಾಮ್‌ರ ಬಾಲಬಡುಕನ ಸ್ಥಿತಿಯಲ್ಲಿದ್ದಾರೆ. - ಎಲ್.ಕೆ.ಅಡ್ವಾಣಿ
- 6.5.95 : ಬಿ.ಎಸ್.ಪಿ. ನಿರುತ್ತೇಜಿತ ಜನಗಳ ಪಕ್ಷ - ಕಲ್ ರಾಜ್ ಮಿಶ್ರಾ, ಬಿಜೆಪಿಯ ರಾಜ್ಯ ಅಧ್ಯಕ್ಷರು
- 6.5.95 : ಆರು ಜನರ ಕೊಲೆಯಲ್ಲಿ ಶಾಮೀಲಾಗಿರುವ ಗ್ರಾಮ ವಿಕಾಸ ಮಂತ್ರಿ ದೀನಾನಾಥ್ ಭಾಸ್ಕರನ್ನು ತಕ್ಷಣ ಬಂಧಿಸಬೇಕು - ಕಲ್ಯಾಣ್ ಸಿಂಗ್
- 19.5.95: ಬೆದರಿಕೆ, ಅತ್ಯಾಚಾರ, ಕೊಲೆ ಹಾಗೂ ನ್ಯಾಯಬಾಹೀರವಾಗಿ ವಶಪಡಿಸಿಕೊಳ್ಳುವುದು ಬಿ.ಎಸ್.ಪಿ. ಮುಖಂಡರು ನಡೆಸಿಕೊಂಡು ಬಂದಿರುವ ಕೆಲಸ - ಕಲ್‌ರಾಜ್ ಮಿಶ್ರಾ
- 29.5.95: ಕಾನ್ಶಿರಾಮ್ ನನ್ನ ಕೊಲೆ ಮಾಡಬಯಸುತ್ತಾರೆ -ಬಿಜೆಪಿ ಸಂಸದ್ ಸದಸ್ಯ ವೀರೇಂದ್ರ ಸಿಂಗ್ ಲೋಕಸಭಾಧ್ಯಕ್ಷರಿಗೆ ನೀಡಿದ ಪತ್ರದಲ್ಲಿ

ಕೃಪೆ: 'ಹಿಂದೂಸ್ತಾನ್' ದೈನಿಕ 4.6.95

"ಜೈರಾಮ್ - ಜೈ ಭೀಮ್" ಜತೆಗಿರಲು ಸಾಧ್ಯವಿಲ್ಲ ಎನ್ನುತ್ತಾರೆ ದ.ಸಂ.ಸ. ನಾಯಕರು

ಹಿಂದಿನ ವಿಧಾನಸಭಾ ಚುನಾವಣೆಗಳ ಮೊದಲು ಬಿ.ಎಸ್.ಪಿ. ಜತೆ ಸೇರಿದ ದಲಿತ ಸಂಘರ್ಷ ಸಮಿತಿಯ ಮುಖಂಡರು ಉತ್ತರ ಪ್ರದೇಶದಲ್ಲಿ ಬಿಜೆಪಿ ಬೆಂಬಲದಿಂದ ಬಿ.ಎಸ್.ಪಿ. ಅಧಿಕಾರಕ್ಕೆ ಬಂದಿರುವುದನ್ನು ಖಂಡಿಸಿ ಬಿ.ಎಸ್.ಪಿ.ಯೊಂದಿಗೆ ಎಲ್ಲಾ ಸಂಬಂಧಗಳನ್ನು ಕಡಿದುಕೊಳ್ಳಲು ನಿರ್ಧರಿಸಿದ್ದಾರೆ. ಕಾನ್ಶಿರಾಮ್ ಇಂತಹ ರಾಜಕೀಯ ನಿಲುವು ತಳೆಯಬಹುದೆಂದು ತಾವೆಂದೂ ಎಣಿಸಿರಲಿಲ್ಲ ಎಂದು ಅವರು ಹೇಳಿದ್ದಾರೆ. ದಲಿತ ಆಂದೋಲನ, ಬ್ರಾಹ್ಮಣ ವ್ಯವಸ್ಥೆಯ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುತ್ತಾ ಕಾನ್ಶಿರಾಮ್ ಉತ್ತರಪ್ರದೇಶದಲ್ಲಿ ಸರಕಾರ ರಚನೆಯಿಂದ ತನ್ನನ್ನು ತಾನೇ ಬಯಲಿಗೆಳೆದುಕೊಂಡಿದ್ದಾರೆ ಎಂದೂ ಹೇಳಿದ್ದಾರೆ. ಬಿ.ಎಸ್.ಪಿ.ಗೆ ಸೇರಿದ ದಲಿತ ಸಂಘರ್ಷ ಸಮಿತಿ ಸದಸ್ಯರೆಲ್ಲಾ ಬಿ.ಎಸ್.ಪಿ. ಬಿಟ್ಟು ವಾಪಸು ಬರಬೇಕೆಂದು ಕರೆ ನೀಡಿದ್ದಾರೆ. "ನಮಗೊಂದೇ ತೃಪ್ತಿಯ ಸಂಗತಿಯೆಂದರೆ ವಿಳಂಬವಾಗುವ ಮೊದಲೇ ಕಾನ್ಶಿರಾಮ್ ರವರ ಖೋಟಾ ಪ್ರಗತಿಶೀಲತೆ ಹಾಗೂ ನಿಜ ಬಣ್ಣ ತಿಳಿಯಿತು" ಎಂದೂ ದ.ಸಂ.ಸ. ಮುಖಂಡರು ಹೇಳಿರುವುದಾಗಿ 'ಟೈಮ್ಸ್ ಆಫ್ ಇಂಡಿಯಾ"(ಜೂನ್ 15, 1995) ವರದಿ ಮಾಡಿದೆ.

ಆದರೆ ದಲಿತರಲ್ಲಿ ಬಹುಪಾಲು ಇರುವ ಕೃಷಿ ಕೂಲಿಕಾರರನ್ನು ಬಾಧಿಸುವ ಕನಿಷ್ಟ ಕೂಲಿಗೆ ಕೇಂದ್ರ ಶಾಸನ, ಭೂಹೀನರಿಗೆ ಭೂಮಿ, ಭೂ ಸುಧಾರಣೆಯ ಬೇಡಿಕೆಗಳನ್ನು ಎತ್ತದೆ ಕೇವಲ ಮೀಸಲಾತಿ ಪ್ರಶ್ನೆ ಎತ್ತುವ ಪಕ್ಷದ ಮುಖಂಡರ ನಿಜ ಬಣ್ಣ ಹಿಂದೆಯೇ ಅರಿವಿಗೆ ಬರಬೇಕಿತ್ತಲ್ಲವೇ? ಹೋಗಲಿ, ಸಂಸತ್ತಿಗೆ ಒಬ್ಬ ಕೈಗಾರಿಕೋದ್ಯಮಿಯನ್ನು ಬಿ.ಎಸ್.ಪಿಯ ಅಭ್ಯರ್ಥಿಯಾಗಿ ನಿಲ್ಲಿಸಿದಾಗಲೂ ಅರಿವಿಗೆ ಬರಬಹುದಾಗಿತ್ತು ಎಂಬ ಅಭಿಪ್ರಾಯ ಬಂದರೆ ತಪ್ಪೇನಲ್ಲ.

ಸಿಪಿಐ(ಎಂ) ಹಿಂದೆಯೇ ಸ್ಪಷ್ಟವಾಗಿ ಹೇಳಿರುವಂತೆ, ಇತ್ತೀಚೆಗೆ ಕೂಡಾ ೧೫ನೇ ಮಹಾಧಿವೇಶನ ರಾಜಕೀಯ ನಿರ್ಣಯದಲ್ಲಿ "ದಲಿತ ಮತ್ತು ಹಿಂದುಳಿದ ಜಾತಿಗಳು ಸಾಮಾಜಿಕ ನ್ಯಾಯಕ್ಕಾಗಿ, ಹೆಚ್ಚೆಚ್ಚು ಎದ್ದು ನಿಲ್ಲುವುದನ್ನು, ಜಾತಿ ದಮನದ ವಿರುದ್ಧ ಬಂಡೇಳುತ್ತಿರುವುದನ್ನು ಕಾಣುತ್ತಿದ್ದೇವೆ. ಸಮಾಜದ ಅತ್ಯಂತ ದಮನಕ್ಕೊಳಗಾದ ವಿಭಾಗಗಳ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ಈ ಜಾಗೃತಿಯಲ್ಲಿ ಪ್ರಜಾಪ್ರಭುತ್ವ ಅಂಶ ಇದೆ. ಇದು ಸ್ವಲ್ಪಮಟ್ಟಿಗೆ ಹೆಚ್ಚುತ್ತಿರುವ ಕೋಮುವಾದದ ಸಂಕುಚಿತತೆಯನ್ನು ಎದುರಿಸಲು ನೆರವಾಗಿದೆ" ಅದೇ ವೇಳೆಗೆ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಉದ್ಯೋಗದ ಮೀಸಲಾತಿ ಹಾಗೂ ಜಾತಿ ಆಧಾರದಲ್ಲಿ ಓಟು ಬ್ಯಾಂಕುಗಳನ್ನು ಶೇಖರಿಸುವುದಕ್ಕಷ್ಟೇ ಸುಂಕುಚಿತಗೊಳಿಸಲಾಗಿದೆ ಎಂದು ಉತ್ತರಪ್ರದೇಶದ ಉದಾಹರಣೆ ನೀಡುತ್ತಾ ಜಾತಿಯ ಹೆಸರಿನಲ್ಲಿ ಕೆಲಸ ಮಾಡುವ ಪಕ್ಷಗಳಿಗೆ ಈ ಜನವಿಭಾಗಗಳ ಹಿತಾಸಕ್ತಿಗಳಿಗಿಂತ ಅಧಿಕಾರದಲ್ಲುಳಿಯಲು ಅದನ್ನು ಬಳಸುವುದಷ್ಟೇ ಬೇಕಾಗಿದೆ ಎಂದೂ ಗಮನಿಸಿತ್ತು.

ಅಧಿಕಾರ ಪೀಠ ಗಿಟ್ಟಿಸಲು ಧರ್ಮದ ದುರುಪಯೋಗ ಮಾಡುವ ಪಕ್ಷದೊಂದಿಗೆ ದಲಿತರ ಜಾಗೃತಿಯ ದುರುಪಯೋಗ ಪಡಿಸಿಕೊಳ್ಳಲು ಹೊರಟ ಪಕ್ಷ ಕೈ ಮಿಲಾಯಿಸಿದೆ. ಎಂದು ದಲಿತರ ಸಮಸ್ಯೆಗಳ ಅರಿವು ಇರುವವರು ಗಮನಿಸದಿರಲು ಸಾಧ್ಯವಿಲ್ಲ.



ನಾನು ಭ್ರಷ್ಟ ಕಾನೂನ ವಿರೋಧಿಸಬೇಕೋ ಅಥವಾ ತಿದ್ದುಪಡಿ ಮಾಡಬೇಕೋ?

ಇದು ಈಗ ಕೇವಲ ಇತಿಹಾಸವೇ?

ಸ್ವತಂತ್ರ ಭಾರತದ ಕರಾಳ ಅಧ್ಯಾಯಗಳಲ್ಲಿ ಒಂದಾದ ತುರ್ತು ಪರಿಸ್ಥಿತಿ ಹೇರಿ ಈ ಜೂನ್ 26ಕ್ಕೆ ಎರಡು ದಶಕಗಳು ಪೂರ್ಣಗೊಂಡಿವೆ. ಸ್ವತಂತ್ರ ಭಾರತದ ಆಳರಸರು ಹಿಡಿದ ದಾರಿಯ ಪರಿಣಾಮವಾಗಿ ಆಳಗೊಂಡ ಬಿಕ್ಕಟ್ಟಿನ ಒಂದು ದ್ಯೋತಕ ಅದಾಗಿತ್ತು. ಈಗ ಅದೇ ಬಂಡವಾಳಶಾಹಿ ದಾರಿಯನ್ನು ಇನ್ನಷ್ಟು ಉಗ್ರವಾಗಿ ಮುಂದುವರೆಸುತ್ತಿರುವ ಸಂದರ್ಭದಲ್ಲಿ ಆ ಕರಾಳ ಅಧ್ಯಾಯದ ಒಂದು ನೆನಪು-ಪ್ರಖ್ಯಾತ ವ್ಯಂಗ್ಯಚಿತ್ರಕಾರ ಅಬು ಅಬ್ರಹಾಂರವರ ಎರಡು ವ್ಯಂಗ್ಯ ಚಿತ್ರಗಳ ಮೂಲಕ.

ಮೊದಲನೆಯದ್ದು ತುರ್ತ ಪರಿಸ್ಥಿತಿಯತ್ತ ಸಾಗುತ್ತಿದ್ದ ದಿನಗಳದ್ದು. ಎರಡನೆಯದ್ದು ತುರ್ತು ಪರಿಸ್ಥಿತಿ ಹೇರಿದ ಎರಡು ದಿನಗಳ ನಂತರದ್ದು. ಆ ಅವಧಿಯಲ್ಲಿ ಈ ವ್ಯಂಗ್ಯ ಚಿತ್ರಕಾರರ ಕಾರ್ಟೂನುಗಳಲ್ಲಿ ಸೆನ್ಸಾರ್ ಮಾಡಲಾಯಿತು.

ಕೃಪೆ: ಅಬು ಅಬ್ರಹಾಂರವರ

Games of Emergency

ಪ್ರಕಟಣೆ : 1977



ವಿದ್ಯುಚ್ಛಕ್ತಿ ಉತ್ಪಾದನೆ: ಕರ್ನಾಟಕದಲ್ಲೂ ಎನ್ರೋನ್ ದಾರಿ ಬೇಡ

ಎನ್.ಕೆ. ಉಪಾಧ್ಯಾಯ

ಜುಲೈ 7 ರಂದು ಬೆಂಗಳೂರಿನಲ್ಲಿ ನಡೆಯಲಿರುವ ವಿದ್ಯುತ್ ಕುರಿತು ರಾಜ್ಯಮಟ್ಟದ ಸಮಾವೇಶದ ಸಂದರ್ಭದಲ್ಲಿ ರಾಜ್ಯದ ವಿದ್ಯುತ್ ಯೋಜನೆಗಳ ಹಾಗೂ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡುವ ಲೇಖನ.

ಹಳೇ ಮೈಸೂರಿನ ಹೆಸರಾಂತ ಇಂಜಿನಿಯರಾದ ಸರ್ ಎಂ.ವಿ. ವಿಶ್ವೇಶ್ವರಯ್ಯನವರು 1902ರಲ್ಲಿ ಶಿವನಸಮುದ್ರದಲ್ಲಿ ನಿರ್ಮಿಸಿದ ಜಲ ವಿದ್ಯುತ್ ಉತ್ಪಾದಿಸುವ (ಹೈಡ್ರೋ ಇಲೆಕ್ಟ್ರಿಕ್) ಕೇಂದ್ರ ಏಶಿಯಾ ಖಂಡದಲ್ಲಿಯೇ ಪ್ರಪ್ರಥಮವೆಂದು ನೆನೆಸಿಕೊಂಡರೆ ಕನ್ನಡಿಗರಿಗಾಗಬೇಕಾದ ಆನಂದ ಅಷ್ಟಿಷ್ಟಲ್ಲ ಅಲ್ಲವೇ? ಇದಕ್ಕೆ ಪೂರಕವಾಗಿ ಮತ್ತೊಂದು ಆಶ್ಚರ್ಯಕರ ಸಂಗತಿಯೇನೆಂದರೆ ಶಿವನಸಮುದ್ರದಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಕೋಲಾರ ಚಿನ್ನದ ಗಣಿಗೆ ಪೂರೈಸುವ ಸಲುವಾಗಿ ಇಡೀ ಜಗತ್ತಿನಲ್ಲಿಯೇ ಅತಿ ಉದ್ದವಾದ ವಿದ್ಯುತ್ ಪೂರೈಕೆ ತಂತಿಯನ್ನು ಹಾಕಿರುವುದು ಶಿವನಸಮುದ್ರ ಕೆಜಿಎಫ್ ನಡುವೆ. ಇದರ ಉದ್ದ 147 ಕಿ.ಮೀ. ಈ ರೀತಿ ವಿದ್ಯುತ್ ಉತ್ಪಾದನೆಯಲ್ಲಿ ಹೆಸರು ಗಳಿಸಿದ್ದರೂ ಈಗ ಕರ್ನಾಟಕ ರಾಜ್ಯ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಗೆ ವಿದ್ಯುತ್ ಅಭಾವವನ್ನು ಎದುರಿಸುವಂತಾಗಿದೆ. ಕಳೆದ ಕೆಲವು ವರ್ಷಗಳಿಂದ ವಿದ್ಯುತ್ ಉತ್ಪಾದನೆಗೆ ಹಲವಾರು ಯೋಜನೆಗಳನ್ನು ನಿಯೋಜಿಸಿದ್ದರೂ ಕೂಡಾ ಅವುಗಳೆಲ್ಲಾ ಒಂದಲ್ಲೊಂದು ಸಮಸ್ಯೆಗೊಳಪಟ್ಟಿವೆ. ಅವುಗಳಲ್ಲಿ ಕೆಲವು ಸಂಪೂರ್ಣ ನಿಲ್ಲಿಸಲ್ಪಟ್ಟಿವೆ. ಕೆಲವು ಆಮೆ ಗತಿಯಲ್ಲೇ ಸಾಗಿವೆ. ನೀರಾವರಿ ಕುರಿತು ಸರಕಾರ ಯಾವ ರೀತಿಯಲ್ಲಿ ನೀರಸ ಧೋರಣೆ ಅನುಸರಿಸುತ್ತಿತ್ತೋ, ವಿದ್ಯುತ್ ವಿಷಯದಲ್ಲಿಯೂ ಅದರ ಧೋರಣೆಯಲ್ಲಿ ಯಾವುದೇ ಬದಲಾವಣೆ ಕಂಡು ಬರುತ್ತಿಲ್ಲ. ತಾವು ಈಗಾಗಲೇ ಕೈಗೊಂಡಿರುವ ಯೋಜನೆಗಳನ್ನು ತುರ್ತಾಗಿ ಮುಕ್ತಾಯಗೊಳಿಸುವ ಸಾಧ್ಯತೆಗಳಿದ್ದರೂ ಕೂಡಾ ಹಿಂದಿನ ಕಾಂಗ್ರೆಸ್ ಸರಕಾರ ಈಗಿನ ಜನತಾದಳ ಸರ್ಕಾರ ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯಿಂದ ಪ್ರೇರಿತರಾಗಿ ಖಾಸಗಿ ಕಂಪನಿಗಳ ಅದರಲ್ಲೂ ವಿದೇಶೀ ಗುತ್ತೇದಾರಿಗಳ ಸಹಭಾಗಿತ್ವದಿಂದ ಈಗ ತನ್ನಲ್ಲಿರುವ 3230.68 ಮೆಗಾವಾಟ್ ಉತ್ಪಾದನೆಯ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನ ನಡೆಸಿದೆ. 1996-97ರರೊಳಗೆ ಖಾಸಗೀ ಕಂಪೆನಿಗಳ ಶಕ್ತಿಯನ್ನು ಹೆಚ್ಚಿಸಿಕೊಂಡು, ಎಂಟನೇ ಪಂಚವಾರ್ಷಿಕ ಯೋಜನೆಯು ಕೊನೆಗೊಳ್ಳುವಾಗ 'ರಾಜ್ಯದಲ್ಲಿ 5295 ಮೆಗಾವಾಟ್ ವಿದ್ಯುತ್ ಉತ್ಪಾದನಾ ಶಕ್ತಿ ಸಾಧಿಸಬಹುದೆಂಬ ಆಶಯವನ್ನು ಮೊನ್ನಿನ ಬಜೆಟ್ಟಿನಲ್ಲಿ ಪ್ರಕಟಿಸಲಾಗಿದೆ.

ಹಿಂದಿನ ಮುಖ್ಯಮಂತ್ರಿ ಬಂಗಾರಪ್ಪನವರು ಹತ್ತು ವಿದೇಶಿ ಕಂಪೆನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದರಂತೆ. ಅವುಗಳ ಪೈಕಿ ಮೂರು ನಿರ್ದಿಷ್ಟ ರೂಪತಾಳಿ, ಒಂದು ಮಾತ್ರ ಮೂರ್ತ ಸ್ವರೂಪ ತಾಳಿದಂತಿದೆ. 1000 ಮೆಗಾವಾಟ್ ವಿದ್ಯುತ್ ಉತ್ಪಾದಿಸುವುದಾಗಿ ಮಂಗಳೂರಿನಲ್ಲಿ ಸ್ಥಾಪನೆಯಾಗಲಿರುವ ಅಮೇರಿಕನ್ ಕೊಜೆಂಟ್ರಿಕ್ಸ್ ಕಂಪೆನಿಯ ಯೋಜನೆಯೇ ಅದಾಗಿದೆ. ಕೇಂದ್ರ ಸರ್ಕಾರ ಅದಕ್ಕಿನ್ನು ಒಪ್ಪಿಗೆ ನೀಡಿಲ್ಲ. ಜುಲೈ ಕೊನೆಯೊಳಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡದಿದ್ದರೆ ಈ ಕಂಪೆನಿಯೊಂದಿಗಿನ ಒಪ್ಪಂದವನ್ನು ರದ್ದುಪಡಿಸುವ ಬೆದರಿಕೆಯನ್ನು ದೇವೇಗೌಡರು ಒಡ್ಡಿದ್ದಾರೆ. ಇದಲ್ಲದೆ ಇನ್ನೂ ಎರಡು ಯೋಜನೆಗಳು ವಿಚಾರದ ಹಂತದಲ್ಲಿವೆ. ಒಂದು ಬಿಜಾಪುರ ಜಿಲ್ಲೆಯ ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ, ನಾರಾಯಣಪುರ ಮತ್ತು ವಿಜಯನಗರ ಉಕ್ಕು ಕಾರ್ಖಾನೆಯ ಸ್ಥಳ ತೋರಣಗಲ್‌ನಲ್ಲಿ. ಇಲ್ಲಿ ಎರಡು ಹಂತಗಳಲ್ಲಿ 900 ಮೆಗವಾಟ್ ವಿದ್ಯುತ್ ಶಕ್ತಿ ಉತ್ಪಾದನೆ ಮಾಡಲು ಯೋಜನೆಯನ್ನು ದಿ ಏಷ್ಯನ್ ಪವರ್ ಕಂಪೆನಿ ಹೊಂದಿದೆ. ಹಾಗೆಯೇ ಹೊಕ್ ಇಂಟರ್ ನ್ಯಾಷನಲ್ ಎಂಬ ಕಂಪೆನಿಗಳ ಒಕ್ಕೂಟ ಹೊಸಪೇಟೆಯಲ್ಲಿ ರೂ. 1800 ಕೋಟಿ ರೂ ಖರ್ಚಿನಿಂದ 500 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆ ಹಾಕಿದೆ.

1948ರಿಂದಲೇ

ಪಂಡಿತ್ ಜವಾಹರಲಾಲ್ ನೆಹರೂರವರು ತಾವು ಪ್ರಧಾನ ಮಂತ್ರಿಯಾಗಿದ್ದಾಗ ಸೋವಿಯೆತ್ ದೇಶಕ್ಕೆ ಸಂದರ್ಶನ ನೀಡಿ ಬಂದ ನಂತರ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಕಂಡು ಭಾರತ ದೇಶದಲ್ಲಿಯೂ ಸರಕಾರಿ ರಂಗದಲ್ಲಿಯೇ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂಬ ನಿರ್ಣಯದ ಪ್ರಕಾರ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಇತರ ಕೈಗಾರಿಕೆಗಳ ಜೊತೆಯಲ್ಲಿಯೇ ವಿದ್ಯುತ್ ಉತ್ಪಾದನೆಯನ್ನು ಸಾರ್ವಜನಿಕ ಕ್ಷೇತ್ರಕ್ಕೆ ಸಂಪೂರ್ಣ ಅಳವಡಿಸಿ, ಖಾಸಗಿ ವಿದ್ಯುತ್ ಉತ್ಪಾದನೆಯನ್ನೆಲ್ಲ ಸರಕಾರವೇ ವಹಿಸಿಕೊಂಡು ತನ್ನ ಆಡಳಿತೆಯಡಿಯಲ್ಲಿಯೇ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ, ವಿಸ್ತರಿಸುವ ಕ್ರಮ ಕೈಗೊಂಡಿತು. ಕರ್ನಾಟಕದಲ್ಲಂತೂ ಸ್ವಾತಂತ್ರ್ಯ ಸಿಕ್ಕ ಮರು ವರ್ಷದಲ್ಲಿ ಅಂದರೆ 1948ರಿಂದಲೇ ನೀರಿನಿಂದ ವಿದ್ಯುತ್ ಉತ್ಪಾದಿಸುವ (ಹೈಡ್ರೋ ಪವರ್) ಕಾರ್ಯ ಪ್ರಾರಂಭವಾಯಿತು. ಶರಾವತಿ ಯೋಜನೆಯ ಪ್ರಥಮ ಹಂತದ ಮಹಾತ್ಮಾ ಗಾಂಧಿ ಹೈಡ್ರೋ ಇಲೆಕ್ಟ್ರಿಕ್ ಸ್ಟೇಷನ್ 1948ರಲ್ಲಿ ಜೋಗ್ ಫಾಲ್ಸ್ ನಲ್ಲಿ ಪ್ರಾರಂಭವಾಯಿತು. 1965ರಲ್ಲಿ ಶರಾವತಿ ಉತ್ಪಾದನಾ ಕೇಂದ್ರವೂ 1979ರಲ್ಲಿ ಅದರ ಹತ್ತಿರದಲ್ಲಿಯೇ ಲಿಂಗನಮಕ್ಕಿ ಡ್ಯಾಮ್‌ನ ವಿದ್ಯುತ್ ಉತ್ಪಾದನೆಯೂ ಪ್ರಾರಂಭವಾಯಿತು.

ಕೆ.ಪಿ.ಸಿ. ಸ್ಥಾಪನೆ

ವಿದ್ಯುತ್ ಉತ್ಪಾದನೆಗೆ ಸಹಾಯ ಮಾಡುವ ದೃಷ್ಟಿಯಿಂದ ಕರ್ನಾಟಕ ಸರಕಾರ 1970ರಲ್ಲಿ ಕರ್ನಾಟಕ ವಿದ್ಯುತ್ ನಿಗಮ ಸ್ಥಾಪನೆ ಮಾಡಿತು. (ಕೆ.ಪಿ.ಸಿ.). ಪ್ರಥಮ ಹಂತದ ಪ್ರಯತ್ನವಾಗಿ ಈ

ಪುಟ 8ಕ್ಕೆ

ಕರ್ನಾಟಕ ಸುದ್ದಿ ಸಮಾಚಾರ

ಎನ್.ಜಿ.ಇ.ಎಫ್., ಕೆ.ಎಸ್.ಆರ್.ಟಿ.ಸಿ. ಖಾಸಗೀಕರಣ ಬೇಡ

ಎಂದು ಜನತಾದಳದ ಕಾರ್ಮಿಕ ವಿಭಾಗದ ಅಧ್ಯಕ್ಷ ಡಿ.ಎಸ್.ಶ್ರೀಕಂಠ ಮೂರ್ತಿ ಪಕ್ಷದ ಮುಖಂಡರನ್ನು ಆಗ್ರಹಪಡಿಸಿರುವುದಾಗಿ ವರದಿಯಾಗಿದೆ. ಜನತಾದಳ ವಿಧಾನಸಭಾ ಚುನಾವಣೆಗಳ ವೇಳೆಗೆ ಪ್ರಕಟಿಸಿದ ಚುನಾವಣಾ ಪ್ರಣಾಳಿಕೆಯನ್ನು ನೆನಪಿಸಿಕೊಳ್ಳಬೇಕು, ಪಕ್ಷ ಅಧಿಕಾರಕ್ಕೆ ಬಂದಿರುವುದು ರೈತರ, ಕಾರ್ಮಿಕರ ಬೆಂಬಲದಿಂದ, ಆದ್ದರಿಂದ ಪಕ್ಷದ ಕಾರ್ಯಕ್ರಮಗಳನ್ನು ಜ್ಯಾರಿಗೆ ತರಲು ಜನಗಳ ವಿಶ್ವಾಸ ಗಳಿಸಬೇಕು ಎಂದು ಅವರು ಶಿವಮೊಗ್ಗದಲ್ಲಿ ಜೂನ್ ೧೯ರಂದು ಪತ್ರಿಕಾ ಸಮ್ಮೇಳನವೊಂದರಲ್ಲಿ ಹೇಳಿದ್ದಾರಂತೆ. ಎನ್.ಜಿ.ಇ.ಎಫ್, ಕೆ.ಎಸ್.ಆರ್.ಟಿ.ಸಿ ಮತ್ತಿತರ ಉದ್ದಿಮೆಗಳು ನಷ್ಟ ಮಾಡುತ್ತಿವೆ ಎಂಬ ನೆಪವೊಡ್ಡಿ ಖಾಸಗೀಕರಿಸುವ ಪ್ರಯತ್ನವನ್ನು ಕಾರ್ಮಿಕರು ಬಲವಾಗಿ ವಿರೋಧಿಸುವುದಾಗಿ ಅವರು ಹೇಳಿದ್ದಾರಂತೆ. ದುರಾಡಳಿತದಿಂದಾದ ನಷ್ಟಕ್ಕೆ ಕಾರ್ಮಿಕರನ್ನು, ನೌಕರರನ್ನು ಅತ್ಯಂತ ಕೀಳು ರೀತಿಯಲ್ಲಿ ದೂಷಿಸುವುದು ಸರಿಯಲ್ಲ ಎಂದೂ ಅವರು ಹೇಳಿದ್ದಾರಂತೆ. ಸಂತೋಷದ ಸುದ್ದಿ.

****

ವಸತಿ ಮಂತ್ರಿ ಬಸವರಾಜ ರಾಯರೆಡ್ಡಿ ಜನತಾದಳ ಸರಕಾರ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಹತ್ತು ಲಕ್ಷ ಕುಟುಂಬಗಳಿಗೆ ನೆಲೆ ಕಲ್ಪಿಸುವುದಾಗಿ ಹೇಳಿದ್ದಾರೆ. ಒಂದು ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಇಪ್ಪತ್ತು ಲಕ್ಷ ಕುಟುಂಬಗಳ ತಲೆಯ ಮೇಲೊಂದು ಸೂರಿಲ್ಲ, ಬಟಾ ಬಯಲು ಇದೆ. ಇದರಲ್ಲಿ ಅರ್ಧದಷ್ಟು ಕುಟುಂಬಗಳಿಗಾದರೂ ವಸತಿ ಒದಗಿಸುವ ಯೋಜನೆಯನ್ನು ಖಾಸಗಿಯವರಿಗೆ ವಹಿಸುವುದಿಲ್ಲ ಎಂದು ಹೇಳಿರುವುದು ಇನ್ನೂ ಸೋಜಿಗದ ಸಂತಸ ತಂದಿರುವ ಸಂಗತಿ.

ಏಕೆಂದರೆ "ಬಡ ವಿಭಾಗಗಳಿಗೆ ಯಾವುದೇ ಸೌಲಭ್ಯ ಕಲ್ಪಿಸಲು ಅಗಾಧ ಹಣ ಬೇಕು, ಅದು ಸರಕಾರದ ಬಳಿಯಿಲ್ಲ, ಆದ್ದರಿಂದ ಖಾಸಗಿಯವರಿಗೆ ವಹಿಸಿಕೊಟ್ಟರೆ, ಅವರು ದಕ್ಷತೆಯಿಂದ ನಿರ್ವಹಿಸುತ್ತಾರೆ" ಎಂಬುದು ಉದಾರೀಕರಣದ ತತ್ವಶಾಸ್ತ್ರ. ದೇವೇಗೌಡರ ಸರಕಾರ ಕೂಡಾ ಅದೇ ತತ್ವಶಾಸ್ತ್ರ ನಂಬಿದೆ ಎಂದು ಬಲವಾದ ಗುಮಾನಿ ರಾಜ್ಯದ ದುಡಿಯುವ ಜನಗಳಿಗೆ ಅವರ ಮಾತು-ಕೃತಿಗಳಿಂದ ಬಂದಿತ್ತು.

ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ ಶಿವಸೇನೆ-ಬಿಜೆಪಿ ಸರಕಾರ ಮುಂಬೈಯಲ್ಲಿ ಖಾಸಗಿ ಬಿಲ್ಡರುಗಳಿಗೆ ಬಹುಮಹಡಿ ಕಟ್ಟಡದ ನಿಯಮಗಳನ್ನು ಸಡಿಲಿಸಿ ಇನ್ನಷ್ಟು ಲಾಭ ಮಾಡಲು ಅವಕಾಶ ನೀಡಿ ಆದರ ಲಾಭದ ಒಂದಂಶದಲ್ಲಿ ಮುಂಬೈಯ ೨೦ ಲಕ್ಷ ಕೊಳಗೇರಿ ನಿವಾಸಿಗಳಿಗೆ ಪುಕ್ಕಟೆ ಅಥವಾ ಕಮ್ಮಿ ದರದಲ್ಲಿ ವಸತಿ ಒದಗಿಸುವ ಯೋಜನೆ ಹಾಕಬೇಕೆಂದು ಬಾಳಾಠಾಕ್ರೆ ಹೇಳಿದ್ದಾರಂತೆ. ಈ ಯೋಜನೆಗೆ ಮುಂಬೈಯ ಖಾಸಗೀ ಬಿಲ್ಡರುಗಳಿಂದ ಇನ್ನೂ ಸೂಕ್ತ ಪ್ರತಿಕ್ರಿಯೆ ದೊರೆಯದ್ದು ಕಂಡರೆ ಇದು ಕೇವಲ ಚುನಾವಣಾ ಯೋಜನೆಯಾಗಿ ಉಳಿಯುವ ಸಂಭವವಿದೆಯಂತೆ.

ನಮ್ಮ ರಾಯರೆಡ್ಡಿಯವರ ಯೋಜನೆ ಕೈಗೂಡುತ್ತದೋ ಅಥವಾ ಇಂತಹ ಇಂದಿನ ಹಲವು ಯೋಜನೆಗಳ ಗತಿಯೇ ಇದಕ್ಕೂ ಬರುತ್ತದೋ ಎಂಬುದು ಬೇರೆ ಸಂಗತಿ. ಕನಿಷ್ಟ ಅದರ ಹೆಸರಲ್ಲಿ ನರಸಿಂಹರಾಯರಂತೆ, ಬಾಳಠಾಕ್ರೆಯಂತೆ ಖಾಸಗಿ ಬಿಲ್ಡರುಗಳಿಗೆ ಲಾಭ ದೋಚಿಕೊಳ್ಳಲು ಅವಕಾಶ ನೀಡುವ ಯೋಜನೆಯಂತೂ ಇಲ್ಲ ಎಂಬುದೊಂದು ಸಮಾಧಾನದ ಸಂಗತಿ.

******

ಬೆಂಗಳೂರಿನಲ್ಲಿ ಜನತಾದಳದ ರಾಷ್ಟ್ರಮಟ್ಟದ ಸಭೆಯನಂತರ ಭೂ ಸುಧಾರಣೆಗೆ ತಿದ್ದುಪಡಿ, ಕೊಜೆಂಟ್ರಿಕ್ಸ್ ಗೆ ಆಗ್ರಹ ಇತ್ಯಾದಿ ನರಸಿಂಹರಾವ್ ಹಾದಿಯ ನೀತಿಗಳ ಬಗ್ಗೆ ಪ್ರಶ್ನೆಗಳನ್ನೆಬ್ಬಿಸಬೇಕಾಯಿತು ಎಂಬುದೂ ಈ ರಾಜ್ಯದ ದುಡಿಯುವ ಜನಗಳ ನಡುವೆ ದುಡಿಯುತ್ತಿರುವವರಿಗೆ ಸ್ವಲ್ಪ ಸಮಾಧಾನದ ಸಂಗತಿ ಈ ಬಗ್ಗೆ ಇರಿಸು ಮುರುಸು ವರೂ ಇದೆಯಲ್ಲಾ ಅಂತ!

- ಕೆ.ವಿ.

ಪ್ರಾವಿಡೆಂಟ್ ಫಂಡ್ ಇಲಾಖೆಯಲ್ಲಿ ಭ್ರಷ್ಟಾಚಾರಕ್ಕೆ ಪ್ರತಿಭಟನೆ

ಸಿಐಟಿಯು ನೇತೃತ್ವದಲ್ಲಿ ಧರಣಿ

ನೂರಾರು ಮಂದಿ ಕಾರ್ಮಿಕರು ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜೂನ್ 22 ರಂದು 11ರಿಂದ 1ಗಂಟೆಯವರೆಗೆ ಪ್ರಾವಿಡೆಂಟ್ ಕಛೇರಿಯ ಎದುರು ಮತಪ್ರದರ್ಶನ ಮತ್ತು ಧರಣಿಯನ್ನು ನಡೆಸಿದರು. ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ದುರ್ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಲಾಯಿತು. ಹಲವಾರು ಸಿಐಟಿಯು ಮುಖಂಡರು ಧರಣಿ ನಿರತ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು.

ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ. ಸೂರ್ಯನಾರಾಯಣರಾವ್‌ರ ನೇತೃತ್ವದಲ್ಲಿ ಸಿಐಟಿಯು ಪದಾಧಿಕಾರಿಗಳಾದ ಕಾಂ. ವಿ.ಜೆ.ಕೆ. ನಾಯರ್, ಕೆ.ಎಸ್. ಸುಬ್ರಹ್ಮಣ್ಯ, ಕೆ.ವಿ. ಶ್ರೀನಿವಾಸನ್, ಇ.ಕೆ.ಎನ್. ರಾಜನ್ ಮತ್ತು ಆರ್. ಶ್ರೀನಿವಾಸ್‌ರನ್ನೊಳಗೊಂಡ ಡೆಲಿನೇಶನ್ ಪ್ರಾವಿಡೆಂಟ್ ಫಂಡ್ ಕಮಿಷನ್ ರಿಗೆ ಒಂದು ಮನವಿಯನ್ನು ಕೊಡಲಾಗಿದೆ. ಇದರಲ್ಲಿ ಇಲಾಖೆಯ ದುರ್ವ್ಯವಸ್ಥೆ, ಭ್ರಷ್ಟಾಚಾರ, ಮಧ್ಯವರ್ತಿಗಳ ಕಾಟ, ಅಸಡ್ಡೆತನ ತೊಡೆದು ಹಾಕಲು ಕೂಡಲೇ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದೆ. ಕಮಿಷನರ್ ಈ ಬಗ್ಗೆ ಇನ್ನೂ ಸಾಕಷ್ಟು ಕಾಳಜಿ ವಹಿಸುತ್ತಿಲ್ಲ, ಒಂದು ತಿಂಗಳೊಳಗೆ ಇಲಾಖೆಯಲ್ಲಿ ಸುಧಾರಣೆ ತಂದು ಮಧ್ಯವರ್ತಿಗಳ ಕಾಟ, ಲಂಚಗುಳಿತನವನ್ನು ನಿಲ್ಲಿಸದಿದ್ದರೆ ಸಿಐಟಿಯು ಉಗ್ರ ಕ್ರಮಕೈಗೊಳ್ಳಬೇಕಾಗುತ್ತದೆಂದು ಅದು ಎಚ್ಚರಿಕೆ ನೀಡಿದೆ.

ಸಿಐಟಿಯು ಬೆಳ್ಳಿ ಹಬ್ಬ

ಸಿಂಧನೂರು: ಸಿಐಟಿಯು ತಾಲೂಕು ಸಮಿತಿ ಮೇ ೩೦ರಂದು ಮೇ ದಿನ ಮತ್ತು ಸಿಐಟಿಯುನ ಸ್ಥಾಪನಾ ದಿನದ ಬೆಳ್ಳಿ ಹಬ್ಬವನ್ನು ಆಚರಿಸಿತು.

ಅಂದು ಸಿಐಟಿಯುಗೆ ಸೇರಿದ್ದ ಕಾರ್ಮಿಕ ಸಂಘಟನೆಗಳ ಕಾರ್ಯಾಲಯಗಳ ಮುಂದೆ ಧ್ವಜಾರೋಹಣ ಮಾಡಲಾಯಿತು.

ತುರ್ವಿಹಾಳ್‌ನ ಹಮಾಲರ ಸಂಘದಲ್ಲಿ ಸಂಘದ ಕಾರ್ಯದರ್ಶಿ ಕಾಂ. ಸಂಗಪ್ಪ ಜಾಲಿಹಾಳ್, ಬಳಗಾನೂರು ಹಮಾಲ ಸಂಘದಲ್ಲಿ ಕಾಂ. ಮೈನೂದ್ದೀನ್, ಬೀಜ ನಿಗಮದ ಕಾರ್ಯಾಲಯದಲ್ಲಿ ಕಾಂ. ಜಿ.ಬಸವರಾಜ್ ಧ್ವಜಾರೋಹಣ ಮಾಡಿದರು.ನಂತರ ಎಲ್ಲಾ ಕಾರ್ಮಿಕರು ಜ್ಯೋತಿ ಮಹಿಳಾ ಸಮಾಜದಲ್ಲಿ ಸೇರಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನುದ್ದೇಶಿಸಿ ವಿಮಾ ನೌಕರರ ಸಂಘದ ಎನ್. ವಿಜಯಕುಮಾರ್ ಮಾತನಾಡಿದರು. ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಕಾಂ| ಶರಬಣ್ಣ ನಾಗಲಾಪೂರ ಕರೆ ನೀಡಿದರು. ಪ್ರಾರಂಭದಲ್ಲಿ ಕಾಂ| ಶೇಕ್ಷಾಖಾದ್ರಿ ಸ್ವಾಗತಿಸಿ ಕೊನೆಯಲ್ಲಿ ಕಾಂ. ಯಲ್ಲಪ್ಪ ವಂದಿಸಿದರು.

ಗಂಗಾವತಿ: ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ನೂರಾರು ಕಾರ್ಮಿಕರು ಗಂಗಾವತಿ ತಾಲೂಕಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಗಾಂಧಿ ವೃತ್ತದಲ್ಲಿ ಸೇರಿ ಬಹಿರಂಗ ಸಭೆ ನಡೆಸಿದರು.

ಸಿಐಟಿಯುನ ೨೫ನೇ ಸ್ಥಾಪನಾ ದಿನಾಚರಣೆಯ ಅಂಗವಾಗಿ ಮೇ ೩೦ರಂದು ಈ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ| ಜಿ.ಎನ್. ನಾಗರಾಜ್ ಮಾತನಾಡುತ್ತಾ ಈ ದಿನದ ಮಹತ್ವವನ್ನು ವಿವರಿಸಿದರು ಹಾಗೂ ಈಗ ಕಾಂಗ್ರೆಸ್(ಐ)ನ ಹಾಗೂ ಬಿಜೆಪಿಗಳ ಜನ-ವಿರೋಧಿ ನಿಲುವುಗಳನ್ನು ವಿವರಿಸುತ್ತಾ ಇವನನು ನಂಬಬೇಡಿ ಎಂದು ಸಾರ್ವಜನಿಕರಿಗೆ ಕರೆ ನೀಡಿದರು.

ವೇದಿಕೆಯಲ್ಲಿ ಎಫ್‌ಸಿಐ ಹಮಾಲರು ಮತ್ತು ಬಜಾರ ಹಮಾಲರು, ಖಾಲಿ ಚೀಲ ಹಮಾಲರು ಮತ್ತು ವೇರ್ ಹೌಸ್ ಹಮಾಲರ ಮುಖಂಡರುಗಳು ಉಪಸ್ಥಿತರಿದ್ದರು. ಕಾಂ. ಮಂಟನಗೌಡ ಸ್ವಾಗತಿಸಿ, ಕಾಂ. ವಿ.ಹುಲಿಗೆಪ್ಪ ವಂದಿಸಿದರು.

ಮನೆಗಳ ಸಕ್ರಮಕ್ಕೆ ಒತ್ತಾಯಿಸಿ ಧರಣಿ ಸತ್ಯಾಗ್ರಹ

ಬಿಜಾಪುರ: ಅಕ್ರಮ ಮನೆಗಳನ್ನು ಸಕ್ರಮಗೊಳಿಸಲು ಸಿಪಿಐ(ಎಂ) ಪೂರ್ವ ವಲಯ ಹಾಗೂ ಪಶ್ಚಿಮ ವಲಯ ಹಾಗೂ ನೂರಾರು ಜನ ನಿವೇಶನ ರಹಿತ ಕುಟುಂಬದವರು, ಪ್ರಾಂತ ರೈತ ಸಂಘದ ಕಛೇರಿಯಿಂದ ನಗರದ ಪ್ರಮುಖ ಬೀದಿಗಳಲ್ಲಿ ಹಾಯ್ದು ಮೆರವಣಿಗೆಯಲ್ಲಿ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಧರಣಿ ನಡೆಸಿದರು. ರೈತ ಮುಖಂಡರಾದ ಕಾಂ| ಭೀಮಸಿ ಕಲಾದಗಿ, ಕಾಂ. ಮನ್ನೂಸಾಬ ಕಲಾದಗಿ ಮೆರವಣಿಗೆಯನ್ನು ಉದ್ದೇಶಿಸಿ ಮಾತನಾಡಿದರು. ನಗರ ಪೂರ್ವ ವಲಯದ ಕಾರ್ಯದರ್ಶಿಗಳಾದ ಭೀಮಪ್ಪ ಲ. ಕವಲಗಿ ಇವರು ಮನವಿ ಪತ್ರ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಜಿಲ್ಲಾಧಿಕಾರಿಗಳ ಕೇಂದ್ರ ಹೆಡ್ ಕ್ವಾಟರ್ಸ್ ಅಸಿಸ್ಟೆಂಟ್‌ರವರಿಗೆ ಸಲ್ಲಿಸಿದರು. ಈ ಮೆರವಣಿಗೆ, ಧರಣಿ ಸತ್ಯಾಗ್ರಹದಲ್ಲಿ ನೂರಾರು ಜನ ವೃದ್ಧರು, ಮಕ್ಕಳು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಧನಪಾಲ ಭಾಗಡೆ, ಚಂದ್ರಶೇಖರ ಮುಳವಾಡ ಮುಂತಾದವರು ನೇತೃತ್ವ ವಹಿಸಿದ್ದರು.

ಡೊನೇಷನ್ ಪದ್ಧತಿ ವಿರೋಧಿಸಿ ಧರಣಿ ಸತ್ಯಾಗ್ರಹ

ರಾಯಚೂರು: ರಾಯಚೂರಿನ ವಿವಿಧ ಶಿಕ್ಷಣ ಸಂಸ್ಥೆಗಳು ಸರ್ಕಾರದ ಆದೇಶವನ್ನು ಉಲ್ಲಂಘಿಸಿ ವಿಪರೀತವಾಗಿ ಡೊನೇಷನ್ ವಸೂಲಿ ಮಾಡುತ್ತಿರುವ ಟ್ಯಾಗೂರ್ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಬಿ.ಎಡ್. ಕಾಲೇಜ್ 15 ಸಾವಿರದಿಂದ 25 ಸಾವಿರ ರೂ. ಡೊನೇಷನ್ ತೆಗೆದುಕೊಳ್ಳುತ್ತಿದ್ದು ಬಡ ವಿದ್ಯಾರ್ಥಿಗಳು ಬಿ.ಎಡ್. ಕೂಡಲಾರದ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಡೊನೇಷನ್ ಪದ್ಧತಿಯನ್ನು ವಿರೋಧಿಸಿ ಜೂನ್ 7 ರಂದು ಎಸ್.ಎಫ್.ಐ. ಕಾರ್ಯಕರ್ತರು ಧರಣಿ ಸತ್ಯಾಗ್ರಹವನ್ನು ನಡೆಸಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಧರಣಿ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳುವಂತೆ, ತನಗೆ ಸಂಬಂಧಪಟ್ಟ ಬೇಡಿಕೆಗಳನ್ನು ತಕ್ಷಣ ಈಡೇರಿಸುವುದಾಗಿ ಭರವಸೆ ನೀಡಿದರು. ಜಿಲ್ಲಾಧಿಕಾರಿಗಳ ಪರವಾಗಿ ಕೇಂದ್ರ ಸ್ಥಾನಿಕ ಅಧಿಕಾರಿಗಳು ಒಂದು ಬೇಡಿಕೆಗಳನ್ನು ಸಂಬಂಧಪಟ್ಟವರ ಗಮನಕ್ಕೆ ತರುವುದಾಗಿ ತಿಳಿಸಿದರು.

ಈ ಧರಣಿ ಸತ್ಯಾಗ್ರಹವನ್ನು ಬೆಂಬಲಿಸಿ ಡಿ.ಎಸ್.ಎಸ್., ಡಿ.ವೈ.ಎಫ್.ಐ., ಕೆ.ಪಿ.ಆರ್.ಎಸ್., ಜ್ಞಾನ ಗಂಗಾ ಯುವಕ ಮಂಡಳಿ ಜಿಲ್ಲಾ ಯಾದವ ಯುವಕ ಸಂಘ, ಶೈಕ್ಷಣಿಕ ಹೋರಾಟ ಸಮಿತಿ, ಸಮುದಾಯ ಸಂಘಟನೆಗಳು ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಈ ಧರಣಿ ಸತ್ಯಾಗ್ರಹದ ನೇತೃತ್ವವನ್ನು ಎಸ್.ಎಫ್.ಐ.ನ ಜಿಲ್ಲಾ ಅಧ್ಯಕ್ಷರಾದ ಎಸ್. ಮಾರುತಿ, ವಿ.ಹೆಚ್. ಕುರ್ಡಿಕರ್ ಹಾಗೂ ಶಾರೀರಿಕ ಶಿಕ್ಷಕರ ಸಂಘದ ಎಂ.ಎಂ. ಬಡಿಗೇರ ವಹಿಸಿದ್ದರು.

ವಿಶೇಷ ಲೇಖನಗಳು

ಟೆಲಿಕಾಂ ಖಾಸಗೀಕರಣ ಟೆಂಡರ್ ಇನ್ನೊಂದು ಹಗರಣಕ್ಕೆ ಆಹ್ವಾನ

ಟೆಲಿಕಾಂ ಮೂಲಭೂತ ಸೇವೆಗಳ ಖಾಸಗೀಕರಣ ವಿರೋಧಿಸಿ ಟೆಲಕಾಂ ಕಾರ್ಮಿಕರ ಹಾಗೂ ಅಧಿಕಾರಿಗಳ ಸಾರ್ವತ್ರಿಕ ಮುಷ್ಕರ ಇಡೀ ದೇಶದ ಗಮನವನ್ನು ಅದ... ಸೆಳೆದಿದೆ. ಬ್ಯಾಂಕ್ ಹಗರಣ ಗುಟ್ಟಾಗಿ ನಡೆದು ಬಯಲಾದಾಗ ಗಮನ ಸೆಳೆಯಿತು. ಟೆಲಿಕಾಂ ಖಾಸಗೀಕರಣಕ್ಕೆ ಕರೆಯಲಾಗಿರುವ ಟೆಂಡರ್, ಜನಗಳ ಕಣ್ಣೆದುರಲ್ಲೇ ಹಾಡುಹಗಲಲ್ಲೇ ಇನ್ನೊಂದು ಭಾರಿ ಹಗರಣ ನಡೆಸುವ ಕಾಂಗ್ರೆ ಸರ್ಕಾರದ ಭಂಡತನ ಎಲ್ಲರನ್ನು ದಂಗು ಬಡಿಸುತ್ತಿದೆ- ಈ ಭಂಡತನದ ಚಿತ್ರ ಇಲ್ಲಿದೆ.

ಭಾರತ ಸರ್ಕಾರ ರಾಷ್ಟ್ರೀಯ ದೂರಸಂಪರ್ಕ (ಟೆಲಿಕಾಂ) ನೀತಿಯನ್ನು ಅಂಗೀಕರಿಸಿದೆ. ಅದು ಟೆಲಿಕಾಂ ಕ್ಷೇತ್ರದಲ್ಲಿ ಖಾಸಗೀಕರಣ ಏಕಮಾತ್ರ ಉದ್ದೇಶವಾಗಿದ್ದ, ಅದರ ನೀಲ ನಕ್ಷೆಯಾಗಿದ್ದ ದಸ್ತಾವೇಜು. ಖಾಸಗೀಕರಣದ ಈ ನೀತಿಯ ಬಗ್ಗೆ ವಿವರವಾದ ಲೇಖನಗಳನ್ನು ಐಕ್ಯರಂಗ ಪ್ರಕಟಿಸಿತ್ತು. (ಕಾಂ. ಸಿ. ನಂಜುಂಡಪ್ಪನವರು ಬರೆದ 1994ರ ಸಂಚಿಕೆ 23 ಹಾಗೂ 24ರಲ್ಲಿ ಪ್ರಕಟವಾದ ಲೇಖನಗಳು). ಆಗ ಖಾಸಗೀಕರಣದ ಕ್ರಮಗಳನ್ನು ಇನ್ನೂ ತೆಗೆದುಕೊಂಡಿರಲಿಲ್ಲ, ಆಮೇಲೆ ಸರ್ಕಾರ ಖಾಸಗೀಕರಣದ ಬಗ್ಗೆ ಮಾರ್ಗದರ್ಶಕ ನೀತಿ ಪ್ರಕಟಿಸಿತು. ಇದರ ಆಧಾರದ ಮೇಲೆ ತರಾತುರಿಯಲ್ಲಿ ಟೆಂಡರ್ ಕರೆಯಲಾಯಿತು. ಈ ಮಧ್ಯೆ ಫೆಬ್ರುವರಿಯಲ್ಲೇ ಅಮೇರಿಕನ್ ವಾಣಿಜ್ಯ ಕಾರ್ಯದರ್ಶಿ ಬ್ರೌನ್‌ರ ಭೇಟಿ ಕಾಲದಲ್ಲಿ ತರಾತ್ತುರಿಯಲ್ಲಿ ಯು.ಎಸ್. ವೆಸ್ಟ್ ಎಂಬ ಕಂಪನಿಗೆ ಟೆಂಡರ್ ಇಲ್ಲದೆ ತಮಿಳುನಾಡು ಹಾಗೂ ಕರ್ನಾಟಕದ ಕೆಲವು ಭಾಗಗಳನ್ನು ವಹಿಸಲಾಗಿತ್ತು. ತೀವ್ರ ವಿರೋಧ! ಟೀಕೆಯ ನಂತರ ಈ ಕ್ರಮವನ್ನು ತಡೆಹಿಡಿಯಲಾಗಿದೆ. ಆದರೆ ಈ ಪ್ರಕರಣದಿಂದ ಸರ್ಕಾರದ ಉದ್ದೇಶ ಸ್ಪಷ್ಟವಾಗಿತ್ತು ಅದೆಂದರೆ ಹೇಗೋ ತನ್ನದೇ ನಿಯಮಗಳನ್ನು ಮುರಿದಾದರೂ ಲಾಭದಾಯಕ ಟೆಲಿಕಾಂ ಸೇವಾಕ್ಷೇತ್ರವನ್ನು ವಿದೇಶೀ ಕಂಪನಿಗಳಿಗೆ ವಹಿಸಿಕೊಡುವುದು. ಟೆಲಿಕಾಂ ಮೂಲಭೂತ ಸೇವೆಗಳ ಖಾಸಗೀಕರಣದಲ್ಲಿ ತೊಡಗಿರುವ ದೇಶಗಳೇ ಜಗತ್ತಿನಲ್ಲಿ ಬೆರಳಣಿಕೆಯಷ್ಟು. ಅದರಲ್ಲೂ ಈ ಸೇವೆಯನ್ನು ವಿದೇಶೀ ಕಂಪನಿಗಳಿಗೆ ವಹಿಸಿಕೊಡುವುದರಲ್ಲಿ ಕಾಂಗ್ರೆ ಸರ್ಕಾರದ್ದೇ ಹೆಗ್ಗಳಿಕೆ! ಅಮೇರಿಕ, ಜಪಾನ್, ಪಶ್ಚಿಮ ಯುರೋಪಿನಲ್ಲೂ ವಿದೇಶೀಯರಿಗೆ ಟೆಲಿಕಾಂ ಕ್ಷೇತ್ರದಲ್ಲಿ ತೀವ್ರ ನಿರ್ಬಂಧಗಳಿವೆ. ಸೇವೆಗೆ ಸಂಬಂಧಿಸಿದ ಗ್ಯಾಟ್ ನಿರ್ಧಾರದಲ್ಲಿ ಇದೇ ಬಾರಿ ವಿವಾದಾತ್ಮಕವಾದದ್ದು.

ಟೆಲಿಕಾಂ ಖಾತೆ ಟೆಂಡರ್ ಕರೆದ ರೀತಿ, ಟೆಂಡರ್‌ನ ನಿಯಮಗಳಂತೂ ಇನ್ನೊಂದು ಹಗರಣ. ಟೆಂಡರ್ ನಿಯಮಗಳನ್ನು ಎಷ್ಟು ತರಾತುರಿಯಲ್ಲಿ ಮಾಡಲಾಗಿತ್ತೆಂದರೆ, ಅದರ ನಿಯಮಗಳು ಎಷ್ಟು ಗೋಜಲು ಹಾಗೂ ಅಸ್ಪಷ್ಟವಾಗಿತ್ತೆಂದರೆ -ಟೆಲಿಕಾಂ ಖಾತೆಗೆ ಪ್ರಶ್ನೆಗಳ ಸುರಿಮಳೆಯೇ ಬಂತು. ಕೆಲವೇ ದಿನಗಳಲ್ಲಿ 600ಕ್ಕೂ ಹೆಚ್ಚು ಇಂತಹ ಪ್ರಶ್ನೆಗಳು ಬಂದುವಂತೆ. ಇದರಿಂದ ಈಗಾಗಲೇ ಟೆಂಡರ್ ತೆರೆಯುವುದು ಎರಡು ಬಾರಿ ಮುಂದೆ ಹೋಗಿದೆ. ಗೌಹಾತಿ ಹಾಗೂ ಕರ್ನಾಟಕದ ಹೈಕೋರ್ಟ್ ಗಳಲ್ಲಿ ಈ ಟೆಂಡರ್‌ನ ಕಾನೂನುಬದ್ಧತೆಯನ್ನು ಪ್ರಶ್ನಿಸಲಾಗಿದೆ. ಈ ಟೆಂಡರ್ ಸರ್ಕಾರ ಕಳೆದ ಬಾರಿ ಟೆಲಿಕಾಂ ನೌಕರರ ಮುಷ್ಕರ ಹಿಂತೆಗೆದುಕೊಳ್ಳಲು ಕೊಟ್ಟಿದ್ದ ಆಶ್ವಾಸನೆಯನ್ನು ಮುರಿದಿದೆ. ಸರ್ಕಾರವೇ ಪ್ರಕಟಿಸಿದ್ದ ನೂತನ ಟೆಲಿಕಾಂ ನೀತಿಯ ಹಲವು ಅಂಶಗಳನ್ನು ಉಲ್ಲಂಘಿಸಿದೆ. ವಿದೇಶೀ ಹಿತಾಸಕ್ತಿಗಳನ್ನು ಸಂಪ್ರೀತಗೊಳಿಸಲು ಸರ್ಕಾರವೇ ಪ್ರಕಟಿಸಿದ ಹಲವಾರು ಮಾರ್ಗದರ್ಶಕ ನೀತಿಗಳನ್ನು ಗಾಳಿಗೆ ತೂರಲಾಗಿದೆ. ಈ ಟೆಲಿಕಾಂ ಟೆಂಡರ್ ಟೆಲಿಕಾಂ ಕ್ಷೇತ್ರವನ್ನು ಸಂಪೂರ್ಣವಾಗಿ ವಿದೇಶೀ ಕಂಪನಿಗಳಿಗೆ ಕೊಳ್ಳೆ ಹೊಡೆಯಲು ಕೊಡುವ ಸಂಚಿನ ಕೊನೆಯ ಅಂಕ.

ವಿದೇಶೀ ಕಬಳಿಕೆಗೆ ಅನುವು ಮಾಡುವ ಟೆಂಡರ್

ಈ ಟೆಂಡರ್ ನ್ನು ಕರೆದಿರುವುದು ದೇಶದ ಟೆಲಿಕಾಂ ಸರ್ಕಲ್‌ಗಳನ್ನು ಖಾಸಗಿ ಸೇವಾ ಕಂಪನಿಗಳಿಗೆ ವಹಿಸಿಕೊಡಲು. ಟೆಲಿಕಾಂ ಸರ್ಕಲ್‌ಗಳೆಂದರೆ ಸಾಮಾನ್ಯವಾಗಿ ಒಂದು ರಾಜ್ಯ. ಈ ಟೆಂಡರ್ ನ್ನು ಗೆದ್ದ ಕಂಪನಿಗಳು ಟೆಲಿಕಾಂ ಖಾತೆ ನಡೆಸುತ್ತಿರುವ ಜಾಲಕ್ಕೆ ಪೈಪೋಟಿಯಲ್ಲಿ ಬದಲಿ ಟೆಲಿಫೋನ್ ಜಾಲ ರಚಿಸಬಹುದು. ಟೆಲಿಕಾಂ ಖಾತೆಗೆ ಠೇವಣಿ ಮಾತ್ರ ಕೊಟ್ಟು ಬರುವ ಭಾರಿ ಲಾಭವನ್ನು ಬಾಚಿಕೊಳ್ಳಬಹುದು. ಈ ಟೆಂಡರ್ ನ ನಿಯಮಗಳು ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲವಾಗುವಂತೆ ರಚಿಸಲಾಗಿದೆ. (ಟೆಂಡರ್‌ನ ಮುಖ್ಯ ನಿಯಮಗಳಿಗೆ ಬಾಕ್ಸ್ ನೋಡಿ)

ಇಂತಹ ಸೇವೆ ನಡೆಸಿರುವ ಅನುಭವ ಯಾವುದೇ ದೇಶೀಯ ಕಂಪನಿಗಳಿಗೆ ಇಲ್ಲವಾದದ್ದರಿಂದ, ಇಂತಹ ಅನುಭವ ಇರಬೇಕೆಂದು ಕೇಳುವುದು ವಿದೇಶೀ ಕಂಪನಿ ಜತೆಯಾಗಿ ಮಾತ್ರ ಟೆಂಡರ್‌ಗೆ ಸ್ಪರ್ಧಿಸಬಹುದು ಎಂದು ಹೇಳಿದಂತೆ. ವಿದೇಶೀ ಕಂಪನಿ ಹಾಗೂ ದೇಶೀಯ ಕಂಪನಿಗಳು ಜಂಟಿಯಾಗಿ ಸ್ಪರ್ಧಿಸಿದಾಗಲೂ, ವಿದೇಶೀ ಕಂಪನಿಯ ಅಧಿಪತ್ಯ ಇರುತ್ತದೆ. ಜಂಟಿ ಕಂಪನಿಗಳಲ್ಲಿ ಶೇಕಡಾ 49 ರವರೆಗೆ ವಿದೇಶೀ ಕಂಪನಿ ಬಂಡವಾಳ ಹೂಡಬಹುದು. ಇದರಿಂದ ಹೆಚ್ಚು ಕಡಿಮೆ ಪೂರ್ಣ ನಿಯಂತ್ರಣ ವಿದೇಶೀ ಕಂಪನಿಯದ್ದೇ. ತಂತ್ರಜ್ಞಾನ, ಹಣ, ಅನುಭವ ಇವೆಲ್ಲವೂ ಇದ್ದದ್ದರಿಂದ ಇಂತಹ ಜಂಟಿ ಕಂಪನಿಗಳನ್ನು ಸಹ ಸಾರ್ವಜನಿಕ ಕ್ಷೇತ್ರದ ಕಂಪನಿಗಳು ರಚಿಸಲಾರವು ಎಂಬುದು ವಿದೇಶೀ ಕಂಪನಿಗಳಿಗೆ ಪೂರ್ಣ ದೋಚಲು ಟೆಂಡರ್ ನಿಯಮಗಳನ್ನು ತಿರುಚಿರುವುದಕ್ಕೆ ಉತ್ತಮ ಉದಾಹರಣೆ.

ಅಲ್ಲದೆ ಟೆಂಡರ್ ಯಾವ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಎಂಬ ಬಗ್ಗೆ ನಿಬಂಧನೆಗಳಿಲ್ಲ. ಇದು ಬೇಕಾಬಿಟ್ಟಿ (ಅಂದರೆ ಹೆಚ್ಚಿಗೆ ಕೈಬೆಚ್ಚಗೆ ಮಾಡಿದವರಿಗೆ) ನಿರ್ಧಾರ ತೆಗೆದುಕೊಳ್ಳಲು ಲೈಸೆನ್ಸ್ ಕೊಟ್ಟಂತೆ ಸಾಧ್ಯವಾದಷ್ಟು ಸ್ಥಳೀಯವಾಗಿ ತಯಾರಿಸಿದ ಟೆಲಿಕಾಂ ಉಪಕರಣಗಳನ್ನು ಬಳಸಬೇಕೆಂದಾಗಲಿ, ವಿದೇಶೀ ಕಂಪನಿಗಳಾದರೂ ಸ್ಥಳೀಯವಾಗಿ ತಮ್ಮ ಉಪಕರಣಗಳನ್ನು ಉತ್ಪಾದಿಸಬೇಕೆಂದಾಗಲಿ ಯಾವುದೇ ಷರತ್ತುಗಳಿಲ್ಲ. ಒಂದಿಷ್ಟು ಪ್ರಮಾಣದಲ್ಲಿ ಗ್ರಾಮೀಣ ಲೈನುಗಳನ್ನು ಕೊಡಲೇಬೇಕೆಂಬ ಷರತ್ತುಗಳಿಲ್ಲ, ಟೆಂಡರ್ ಗೆದ್ದ ಈ ಕಂಪ... ಯಾವ ದರ ಬಳಕೆದಾರನಿಗೆ ವಿಧಿಸಬಹುದೆಂಬ... ಕಟ್ಟುಪಾಡುಗಳಿಲ್ಲ, ರಾಷ್ಟ್ರೀಯ ಟೆಲಿಕಾಂ ನೀತಿಯ ... ಎಲ್ಲಾ ಟ್ರಂಕ್ ಕಾಲ್‌ಗಳನ್ನು ಟೆಲಿಕಾಂ ಖಾತೆಯೇ ನ...ಸುತ್ತದೆ ಎಂದು ಹ...ಗಿತ್ತು. ಅದನ್ನು ...ಘಿಸಿ ವಿದೇಶೀ ಕಂ... ಒತ್ತಡದಿಂದ ಟ್ರಂಕ್... ಸವಲತ್ತುಗಳನ್ನು ಟ... ಖಾತೆ ಈ ಖಾಸಗಿ... ಕಂಪನಿಗಳಿಗೆ ಒದ... ಎಂದು ಹೇಳಲ... ಟೆಲಿಕಾಂ ನೀತಿಯ... ಸೇವಾ ಮಟ್ಟ "... ವಿಷಯಗಳನ್ನು '... ರೆಗ್ಯುಲೇಟರಿ ಅದ... ಎಂಬ ಹೊಸ ಸಂಸ್... ಹಿಸುವುದು ಎಂದು... ಲಾಗಿದೆ. ಅಂತಹ... ರಿಟಿ ಇನ್ನೂ ರ...ಗಿಲ್ಲ. ಇಂತಹ ಅ... ಅಥವಾ ಪ್ರಾಧಿಕಾ... ತರಾತುರಿಯಲ್ಲಿ ... ಸೇವಾ ಕ್ಷೇತ್ರವನ್ನು... ಭಿಸುವ ಅಗತ್ಯ... ಇದು ವಿದೇಶೀ ...ಳಿಗೆ ಸ್ವೇಚ್ಛಾಚಾರಕ್ಕೆ ...ನವಷ್ಟೇ.

ಟೆಂಡರ್ ನಿಯಮಗಳನ್ನೇ ವಿದೇಶೀ ಕಂ... ಒತ್ತಡಕ್ಕೆ ಅನುಗುಣವಾಗಿ, ಸ್ಪಷ್ಟನೆಯ ನೆಪದಲ್ಲಿ ಬದ...ಸಲಾಗಿದೆ. ಒಂದು ಸ್ಪಷ್ಟನೆಯ ಪ್ರಕಾರ ಶೇಕಡಾ 72 ... ಶೇಕಡಾ 10ಕ್ಕಿಂತ ಹೆಚ್ಚು ಗ್ರಾಮೀಣ ಲೈನುಗಳನ್ನು...ಸುವವರಿಗೆ ಇರುತ್ತದೆ. ಶೇಕಡಾ 10 ಆದ್ಯತೆ ಟೆಲಿ...

ವಿದೇಶಿಯರಿಗೆ ಮುಖ ನೋಡಿ ಮಣೆ ಹಾಕುವ ಟೆಂಡರ್ ನಿಯಮಗಳು

ಟೆಂಡರ್ ಕರೆದಿರುವುದು ಪ್ರತಿಯೊಂದು ಟೆಲಿಕಾಂ ಸರ್ಕಲ್ ಗಳಿಗೆ ಪ್ರತ್ಯೇಕವಾಗಿ. ಸರ್ಕಲ್ ಗಳನ್ನು ಅವುಗಳ ಪ್ರಾದೇಶಿಕ ವಿಸ್ತೀರ್ಣ, ಲೈನುಗಳ ಸಂಖ್ಯೆ ಗಾತ್ರಗಳಿಗನುಗುಣವಾಗಿ ಎ,ಬಿ,ಮತ್ತು ಸಿ ಎಂದು ವರ್ಗೀಕರಿಸಲಾಗಿದೆ. ಯಾವುದೇ ಕಂಪನಿ ಒಂದಕ್ಕಿಂತ ಹೆಚ್ಚಿಗೆ ಸರ್ಕಲ್‌ಗಳಿಗೂ ಸ್ಪರ್ಧಿಸಬಹುದು.

- ಎ ವರ್ಗದ ಸರ್ಕಲ್‌ಗಳಿಗೆ ಕನಿಷ್ಠ 300 ಕೋಟಿ ರೂ. ಬಿ ಮತ್ತು ಸಿ ಸರ್ಕಲ್‌ಗಳಿಗೆ 200 ಹಾಗೂ 50 ಕೋಟಿ ರೂ. ಅನುಕ್ರಮವಾಗಿ ಕಂಪನಿಗಳ ಒಟ್ಟು ವ್ಯವಹಾರ ಇರಬೇಕು. ಠೇವಣಿ ಮೊತ್ತ ಎ.ಬಿ.ಮತ್ತು ಸಿ. ಸರ್ಕಲ್‌ಗಳಿಗೆ 50, 25 ಹಾಗೂ ೫ ಕೋಟಿ ರೂ. ಸ್ಪರ್ಧಿಸಿ ಗೆದ್ದ ಕಂಪನಿಗಳು ಕೊಡುವ ಲೈಸೆನ್ಸ್ ಫೀ ಬೇರೆ.
- ಟೆಂಡರ್‌ಗೆ ಸ್ಪರ್ಧಿಸುವ ಕಂಪನಿಗಳು ಈ ರೀತಿ ಟೆಲಿಕಾಂ ಜಾಲಗಳನ್ನು ನಡೆಸಿರುವ ಹಿಂದಿನ ಅನುಭವ ಇರಬೇಕು.
- ಸಾರ್ವಜನಿಕ ಕ್ಷೇತ್ರದ ಕಂಪನಿಗಳು ಈ ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ,
- ಪ್ರತಿ ಸರ್ಕಲ್ ನಲ್ಲಿರುವ ಟ್ರಂಕ್ ಸವಲತ್ತುಗಳೂ ಟೆಂಡರ್ ಗೆದ್ದ ಕಂಪನಿಗೆ ಇರುತ್ತದೆ.
- ಟೆಂಡರ್ ಗೆದ್ದ ಕಂಪನಿಗಳಿಗೆ ಆ ಸರ್ಕಲ್ ನಲ್ಲಿ 15 ವರ್ಷಗಳವರೆಗೆ ಟೆಲಿಫೋನ್ ಜಾಲ ನಡೆಸುವ ಅಧಿಕಾರ ಇರುತ್ತದೆ. ಅತ್ಯಂತ ಹೆಚ್ಚು ಲೈಸೆನ್ಸ್ ಫೀ ಕೊಡುವ ಕಂಪನಿಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿರುತ್ತದೆ.

ಮಗುವೊಂದು ದುಡಿಮೆ ಮಾಡುತ್ತಿದೆಯೆಂದರೆ....

-ವಿ.ಜೆ.ಕೆ. ನಾಯ...

......ಅದು ಶಾಲೆಯಿಂದ ದೂರವಿದೆಯೆಂದರ್ಥ. ಮಗುವೊಂದು ದುಡಿಮೆ ಮಾಡುತ್ತಿದೆಯೆಂದರೆ ಒಂದು ಕುಟುಂಬ ಸಂಕಟದಲ್ಲಿದೆಯೆಂದರ್ಥ..... ಮಗುವೊಂದು ದುಡಿಮೆ ಮಾಡುತ್ತಿದೆಯೆಂದರೆ ಆ ಸಮಾಜ ರೋಗಗ್ರಸ್ತವಾಗಿದೆಯೆಂದರ್ಥ. ಈ ಹಿನ್ನೆಲೆಯಲ್ಲಿ ಬಾಲದುಡಿಮೆಯ ನಿರ್ಮೂಲನದ ಅರ್ಥವೇನು, "ಸಿಐಟಿಯು-ಐ.ಎಲ್.ಓ. ಬಾಲಕಾರ್ಮಿಕರ ಯೋಜನೆ"ಯ ಉದ್ದೇಶವೇನು?ರೂಪು-ರೇಷೆಗಳೇನು? ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ಈ ಯೋಜನೆ ರಾಜ್ಯ ಸಂಯೋಜಕರೂ ಆಗಿರುವ ವಿ.ಜೆ.ಕೆ. ನಾಯರ್ ವಿವರಿಸುತ್ತಾರೆ.

ವಿಶ್ವದ ಅತೀ ಹೆಚ್ಚು ಬಾಲ ಕಾರ್ಮಿಕರಿರುವುದು ನಮ್ಮ ದೇಶದಲ್ಲಿ, ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಓ) ವಿಶ್ವದ ಎಲ್ಲೇ ಆಗಲಿ ಮಕ್ಕಳನ್ನು ದುಡಿಸಿಕೊಳ್ಳುವುದರ ಬಗ್ಗೆ ಆತಂಕಿತವಾಗಿರುವುದರಿಂದ ಕ್ರಮೇಣ ಬಾಲ ದುಡಿಮೆಯನ್ನು ನಿರ್ಮೂಲ ಮಾಡುವ ಯೋಜನೆ ಹಾಕಿಕೊಂಡಿದ್ದು ಅದನ್ನು "ಅಂತರಾಷ್ಟ್ರೀಯ ಬಾಲ ದುಡಿಮೆ ನಿರ್ಮೂಲನ ಕಾರ್ಯಕ್ರಮ"(IPEC)ದಲ್ಲಿ ಸೇರಿಸಿದೆ.

ಬಾಲ ದುಡಿಮೆಯ ನಿರ್ಮೂಲನಕ್ಕಾಗಿ ಐ.ಎಲ್.ಓ., ಯುನೆಸ್ಕೋ ಇತ್ಯಾದಿಗಳು ಸರಕಾರಿಯೇತರ ಸಂಘಟನೆಗಳಿಗೆ ಹಣ ಕಾಸು ನೆರವು ನೀಡುತ್ತಾ ಬಂದಿವೆ. ಪ್ರತಿ ವರ್ಷ ಕೋಟಿಗಟ್ಟಲೆ ರೂಪಾಯಿ ಹಣ ಕಾಸು ನೆರವು ಪಡೆಯುತ್ತಿರುವ ಇಂತಹ ಸ್ವಯಂಸೇವೀ ಸಂಸ್ಥೆಗಳು ಇದುವರೆಗೆ ಬಾಲ ದುಡಿಮೆಯನ್ನು ಅಂತ್ಯ ಗೊಳಿಸುವುದಿರಲಿ, ಅದರ ಬಗ್ಗೆ ಪ್ರಚಾರ ಕೂಡಾ ಜನಸಮೂಹಗಳನ್ನು ತಲುಪಿಲ್ಲ. ಕಾರ್ಮಿ ಸಂಘಗಳ ಸಹಕಾರವಿಲ್ಲದೆ ಈ ಗುರಿಸಾಧನೆ ಸಾಧ್ಯವಿಲ್ಲ ಎಂದು ಐ.ಎಲ್.ಓ. ಐ.ಪಿ.ಇ.ಸಿ.ಗಳಿಗೆ ಕಂಡು ಬಂದಿದೆ.

ಐ.ಎಲ್.ಓ. ಕಾರ್ಯಕ್ರಮಕ್ಕೆ ಅನುಗುಣವಾಗಿ ಭಾರತ ಸರಕಾರ 2001 ರೊಳಗೆ ಬಾಲ ದುಡಿಮೆಯನ್ನು ನಿರ್ಮೂಲನ ಮಾಡುವುದಾಗಿ ಸಾರಿದೆ. ಸರಕಾರದ ಅಂದಾಜಿನ ಪ್ರಕಾರ ದೇಶದಲ್ಲಿ 1.7 ಕೋಟಿ ಬಾಲ ಕಾರ್ಮಿಕರಿದ್ದಾರೆ. ಇನ್ನು ಕೆಲವು ಅಂದಾಜುಗಳ ಪ್ರಕಾರ ಈ ಸಂಖ್ಯೆ 4 ಕೋಟಿ, 10 ಕೋಟಿ ಎಂದೆಲ್ಲಾ ಕೂಡಾ ಇದೆ. ಸರಕಾರದ ಅಂದಾಜು 198k ಜನಗಣತಿಯನ್ನು ಆಧರಿಸಿದ್ದು. ಜನಗಣತಿ ನಡೆಸುವವರು ಪ್ರತಿಯೊಬ್ಬರ ಬಳಿಯೂ ಹೋಗಿ ಕರಾರುವಾಕ್ಕಾದ ಸಂಖ್ಯೆ ಸಂಗ್ರಹಿಸುವುದಿಲ್ಲ ಎಂಬುದೇನೋ ನಿಜ. ಆದರೂ ಈ ಸಂಖ್ಯೆ ಸಾಕಷ್ಟು ನಂಬಲರ್ಹ ಅಂದಾಜು ನೀಡುತ್ತದೆ.

ಕರ್ನಾಟಕದಲ್ಲಿ....

ನಮ್ಮ ರಾಜ್ಯದಲ್ಲಿ ಬಾಲಕಾರ್ಮಿಕರ ಸಂಖ್ಯೆ 1991ರ ಜನಗಣತಿಯ ಪ್ರಕಾರ 11.5 ಲಕ್ಷ. 5 ರಿಂದ 14 ವರ್ಷ ವಯೋಗುಂಪಿನ ಒಟ್ಟು ಮಕ್ಕಳ ಸಂಖ್ಯೆ 97 ಲಕ್ಷ. ಅಂದರೆ ಪ್ರತಿ ಎಂಟು ಮಕ್ಕಳಲ್ಲಿ ಒಂದು ಮಗು ದುಡಿಮೆಯಲ್ಲಿ ತೊಡಗಿವೆ. ಇದು ಕೂಡಾ ದಿಗ್ಭ್ರಮೆಗೊಳಿಸುವ ಸಂಖ್ಯೆ.

ನಮ್ಮ ಪರಿಶೀಲನೆಯ ಪ್ರಕಾರ ಬಾಲದುಡಿಮೆ ಅತ್ಯಂತ ಹೆಚ್ಚು ಇರುವುದು ರಾಯಚೂರಿನಲ್ಲಿ, ರಾಜ್ಯದ ಬಾಲಕಾರ್ಮಿಕರು ಶೇಕಡಾ 12 ಇದ್ದರೆ, ರಾಯಚೂರಿನದ್ದು ಶೇ. 28.8. ಪಕ್ಕದ ಜಿಲ್ಲೆಗಳಾದ ಗುಲ್ಬರ್ಗಾ, ಬಿಜಾಪುರ, ಬೆಳಗಾವಿ, ಧಾರವಾಡ, ಬಳ್ಳಾರಿ, ಚಿತ್ರದುರ್ಗಗಳಲ್ಲೂ ಬಾಲ ಕಾರ್ಮಿಕರ ಸಂಖ್ಯೆ ಶೇ. 12ಕ್ಕಿಂತ ಹೆಚ್ಚಿದೆ. ಆಗಾಗ ಬರಪೀಡಿತವಾಗುವ, ಭೂಸುಧಾರಣೆ ಯಶಸ್ವಿಯಾಗದ ಪ್ರದೇಶಗಳಲ್ಲಿ ಬಾಲದುಡಿಮೆ ಹೆಚ್ಚು ಎಂದು ಇದರಿಂದ ಹೇಳಬಹುದು. ಮಕ್ಕಳು ಇಲ್ಲಿ ಕೂಲಿಕಾರರಾಗಿಯೂ, ರೈತರಾಗಿಯೂ ದುಡಿಯುತ್ತಿದ್ದಾರೆ. ಕಾರ್ಖಾನೆಗಳಿರುವ ನಗರ-ಪಟ್ಟಣಗಳಲ್ಲಿ, ಪ್ಲಾಂಟೇಷನ್‌ಗಳಿರುವಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಇದಕ್ಕಿಂತ ಕಮ್ಮಿಯಿದ್ದರೂ ಅಲ್ಲೂ ಬಾಲದುಡಿಮೆ ಗಣನೀಯ ಪ್ರಮಾಣದಲ್ಲಿ ಇದೆ.


ನಗರಗಳಲ್ಲಿ ಹೋಟೆಲು, ಅಗರಬತ್ತಿ, ಗ್ಯಾರೇಜುಗಳು, ಕಟ್ಟಡ ಕೆಲಸಗಳಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದು ಬಹಿರಂಗವಾಗಿಯೇ ಕಾಣಬರುತ್ತದೆ. ಆದರೆ ಬೀಡಿ, ಕೈಮಗ್ಗ, ಇತ್ಯಾದಿಗಳಲ್ಲಿ ಬಾಲದುಡಿಮೆ ಇಷ್ಟು ಸ್ಪಷ್ಟವಾಗಿ ಕಾಣುವುದಿಲ್ಲ. ಏಕೆಂದರೆ ಈ ಕೆಲಸಗಳು ಮನೆಗಳಲ್ಲಿ ನಡೆಯುತ್ತವೆ. ಹಾಗೂ ಇಡೀ ಕುಟುಂಬ ಈ ಕೆಲಸಗಳಲ್ಲಿ ತೊಡಗಿರುತ್ತದೆ.

ಸಿಐಟಿಯು ಐ.ಎಲ್.ಓ. ಯೋಜನೆ

ಸಿಐಟಿಯು 1995-96ರಲ್ಲಿ ಬಾಲ ದುಡಿಮೆಯ ಬಗ್ಗೆ ಪ್ರಜ್ಞೆ ಮೂಡಿಸುವ ಒಂದು ಐ.ಎಲ್.ಓ. ಯೋಜನೆ... ಸ್ವೀಕರಿಸಿದೆ. ಇದು ಕರ್ನಾಟಕವೂ ಸೇ... 8 ರಾಜ್ಯಗಳಲ್ಲಿ ನಡೆಯುತ್ತದೆ. ... ರಾಜ್ಯಗಳೆಂದರೆ ಕೇರಳ, ತಮಿಳು... ಆಂಧ್ರಪ್ರದೇಶ, ಮಹಾರಾಷ್ಟ್ರ ಪಶ್ಚಿಮ ಬ... ಉತ್ತರ ಪ್ರದೇಶ ಮತ್ತು ಪಂಜಾಬ್... ತದಾದ್ಯಂತ ಈ ಯೋಜನೆಗೆ 9 ಉ...ಗಳನ್ನು ಗುರುತಿಸಲಾಗಿದೆ. ಅವೆಂದರೆ ... ಕೈಮಗ್ಗ, ಅಗರಬತ್ತಿ, ಹೋಟೇಲ್... ಕೆಲಸ, ಇಟ್ಟಿಗೆ ಗೂಡು, ಕಲ್ಲಿನ ಗಣಿ... ಹಾಸು ಗಂಬಳಿ. ತಯಾರಿಕೆ ಮತ್ತು ... ಪೊಟ್ಟಣ ಉದ್ದಿಮೆ.

ಹಾಸುಗಂಬಳಿ ನೇಯ್ಗೆ ಮುಖ... ಉತ್ತರಪ್ರದೇಶದಲ್ಲಿದೆ. ಅಲ್ಲಿ ಬ... ಬಾಲಕಾರ್ಮಿಕರು ಈ ಉದ್ದಿಮೆಯಲ್ಲಿ...ಯುತ್ತಿದ್ದಾರೆ. ಅಲ್ಲದೆ ಈ ರಾ... ಗಾಜು(ಬಳೆ), ಮಡಕೆ, ಹಿತ್ತಾಳೆ ಸಾ...ಗಳು, ಬೀಗ ತಯಾರಿಕೆ ಉದ್ದಿಮೆ... ಬಹಳಷ್ಟು ಮಕ್ಕಳನ್ನು ದುಡಿಸಿಕೊಳ್ಳ...ತ್ತಿದೆ. ಬೆಂಕಿಪೊಟ್ಟಣ ಉದ್ದಿಮೆ ಮುಖ... ತಮಿಳುನಾಡಿನಲ್ಲಿದೆ. ಅಲ್ಲಿ 5 ವ...ತಲೂ ಚಿಕ್ಕ ಮಕ್ಕಳನ್ನು ದುಡಿಸಿಕೊಳ್ಳ...ತ್ತಿದೆ.

ನಮ್ಮ ರಾಜ್ಯದಲ್ಲಿ ಕಲ್ಲು ಗಣಿ... ಇಟ್ಟಿಗೆಗೂಡು, ಕಟ್ಟಡ ಕೆಲಸಗಳಲ್ಲಿ... ಕರನ್ನು ಸಂಘಟನೆಯಡಿ ತಂದಿಲ್ಲವಾ... ಈ ವಲಯಗಳಲ್ಲಿನ ಯಾವುದೇ ... ನೆಯನ್ನು ನಮ್ಮ ರಾಜ್ಯದಲ್ಲಿ ನಾವು ...ಡಿಲ್ಲ. ಉಳಿದ ನಾಲ್ಕು ಉದ್ದಿಮೆ... ಬೀಡಿ, ಕೈಮಗ್ಗ, ಹೋಟೆಲ್ ... ಅಗರಬತ್ತಿ ವಲಯಗಳಲ್ಲಿ ನಮ್ಮ...



ಲವನ್ನು ವೇಗವಾಗಿ ವಿಸ್ತರಿಸುವುದಕ್ಕೆ ಇರುತ್ತದೆ. ೀಯ ಉಪಕರಣಗಳನ್ನು ಬಳಸುವುದಕ್ಕೆ ಆದ್ಯತೆ ವಲ ಶೇಕಡಾ 3. ಈ ಆದ್ಯತೆ ನೋಡಿದವರಿಗೆ ಚ್ಚಿನ ಲೈಸೆನ್ಸ್ ಫೀ ಕೊಡುವ ಕಂಪನಿಗಳು ಟೆಂಡರ್ ಬಹುದು ಎಂಬುದು ಸ್ಪಷ್ಟ. ಇವೆಲ್ಲದರ ನಂತ ೂ ಟೆಂಡರ್ ನಿರ್ಧಾರ ಬೇಕಾಬಿಟ್ಟಿಯಾಗಿ ನಡೆಯ ಹುದು. ಸೆಲ್ಯುಲಾರ್ ಟೆಂಡರ್ ನಲ್ಲಿ ಆದಂತೆ ರ್ಟ್ ಕಚೇರಿ ಸುತ್ತಿ ಗೆನೆಗುದಿಗೆ ಬಿದ್ದರೂ ಶ್ಚರ್ಯವಿಲ್ಲ. ವಿದೇಶೀ ಸರ್ಕಾರಗಳು ತಮ್ಮ ತಮ್ಮ ಶದ ಕಂಪನಿಗಳ ಪರವಾಗಿ ಸರ್ಕಾರದ ಕೈ ುಚಬಹುದು.

ಖಾಸಗೀಕರಣದ ಪರಿಣಾಮಗಳು

ಐಟಿಐಯ ನಷ್ಟ

ಈ ಖಾಸಗೀಕರಣಕ್ಕಿಂತ ಮೊದಲೇ ನಮ್ಮ ಲಿಕಾಂ ಕೈಗಾರಿಕೆ ದುಸ್ಥಿತಿಗೆ ಇಳಿದಿದೆ. ಈ ಖಾಸಗೀ ಣವಂತೂ ನಮ್ಮ ಟೆಲಿಕಾಂ ಕೈಗಾರಿಕೆಯನ್ನು ರ್ಣವಾಗಿ ಮುಚ್ಚುವುದು. ಈಗಾಗಲೇ ಟೆಲಿಕಾಂ ತೆ ಉಪಕರಣಗಳನ್ನು ಕೊಳ್ಳುವ ಟೆಂಡರ್ ನಲ್ಲಿ ೀಯರಿಗೆ ಆದ್ಯತೆ ಇತ್ಯಾದಿ ಎಲ್ಲಾ ಷರತ್ತುಗಳನ್ನು ಮುಹಾಕಿದ್ದರಿಂದ ಹಾಗೂ ಅತ್ಯಂತ ಕಡಿಮೆ ಯಲ್ಲಿ ಮಾರುವವರಿಗೆ ಶೇಕಡಾ 50 ಆರ್ಡರ್, ಿದ ಎಲ್ಲಾ ಕಂಪನಿಗಳಿಗೆ ಈ ಬೆಲೆಯಲ್ಲೇ! ದರೆ ಅತ್ಯಂತ ಕಡಿಮೆ ಬೆಲೆ) ಆರ್ಡರ್ ಎಂಬ ುಮದಿಂದ ಸ್ಥಳೀಯ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ತೀವ್ರ ತೊಂದರೆ ಗೀಡಾಗಿವೆ. ಐಟಿಐ ಹಾಗೂ ಸಿ-ಡಾಟ್ ಲೈಸೆನ್ಸ್ ತಡೆದ ಸುಮಾರು 20 ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಕಳೆದ ಕೆಲವು ವರ್ಷಗಳಿಂದ ಆರ್ಡರ್ ಗಳೇ ದೊರೆಯುತ್ತಿಲ್ಲ, ಆರ್ಡರ್ ದೊರೆತಾಗ ಅವುಗಳು ವೆಚ್ಚಕ್ಕಿಂತ ಕಡಿಮೆ ಬೆಲೆಯಲ್ಲಿ ಉತ್ಪಾದನೆ ಮಾಡಿ ನಷ್ಟ ಅನುಭವಿಸಬೇಕಾಗಿ ಬಂದಿದೆ. ಇಂತಹ ಪರಿಸ್ಥಿತಿ ಒದಗಿಬಂದಿರುವುದು ಬಹುರಾಷ್ಟ್ರೀಯ ಕಂಪನಿಗಳು, ಅವುಗಳ ಸ್ಥಳೀಯ ಏಜಂಟರು ಕಡಿಮೆ ಬೆಲೆ(ಸ್ಥಳೀಯ ಕೈಗಾರಿಕೆಗಳನ್ನು ಮುಳುಗಿಸುವ ದುರುದ್ದೇಶದಿಂದಲೇ) ಹೇಳಲಾರಂಭಿಸಿದ್ದರಿಂದ. ಇಂತಹ ಕೆಲವು ಕಂಪನಿಗಳು ನಿಗದಿತ ಅವಧಿಯ ಒಳಗೆ ಉಪಕರಣಗಳನ್ನು ಪೂರೈಸದೆ ಟೆಲಿಫೋನ್ ಖಾತೆಯ ಯೋಜನೆಗಳನ್ನು ಏರುಪೇರು ಮಾಡಿದ್ದರೂ, ಅಂತಹ ಕಂಪನಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ, ಬರಿಯ ಬೆಲೆ ಮಾತ್ರ ನೋಡಿ ಇಂತಹ ಕಂಪನಿಗಳ ಹಿನ್ನೆಲೆ, ಅವುಗಳು ಹೊಂದಿರುವ ಕಾರ್ಖಾನೆ, ಸವಲತ್ತುಗಳನ್ನು ಗಮನಿಸದೆ ಇಂತಹ ದುಸ್ಥಿತಿ ಒದಗಿರುವುದು. ಇದೇ ಕಥೆ ದೂರಸಂಪರ್ಕ ಸೇವೆಯ ಖಾಸಗೀಕರಣದಲ್ಲೂ ಪುನರಾವರ್ತನೆಯಾಗಲಿದೆ. ಇಂತಹ ನೀತಿಗಳ ಫಲವಾಗಿ ಐಟಿಐ ಕಳೆದ 47 ವರ್ಷಗಳಲ್ಲಿ ಮೊದಲ ಬಾರಿಗೆ ಸುಮಾರು 100 ಕೋಟಿ ರೂ. ನಷ್ಟ ಅನುಭವಿಸಿದೆ. ಉಳಿದ ಸಿ-ಡಾಟ್ ಲೈಸೆನ್ಸ್ ಹೊಂದಿದ ಮಧ್ಯಮ ಕ್ಷೇತ್ರದ ಖಾಸಗೀ ಕಾರ್ಖಾನೆಗಳೂ ಇದೇ ರೀತಿ ನಷ್ಟ ಅನುಭವಿಸುತ್ತಿವೆ. ಮೂಲಭೂತ ಸೇವೆಗಳ ಖಾಸಗೀಕರಣದಲ್ಲೂ ಭಾರತೀಯ ಕಂಪೆನಿಗಳಿಗೆ ಆಸ್ಪದವಿಲ್ಲವಾದ್ದರಿಂದ ಆಸ್ಪದವಿಲ್ಲವಾದ್ದರಿಂದ ಅವುಗಳಿಗೆ ಯಾವುದೇ ಭವಿಷ್ಯವಿಲ್ಲ.

ಬಳಕೆದಾರನಿಗೂ ಟೋಪಿ

ಖಾಸಗೀಕರಣದಿಂದ ಬಳಕೆದಾರನಿಗೆ ಪ್ರಯೋಜನವಿದೆಯೇ? ಇದೂ ಸಹ ತೀರಾ ಸಂಶಯಾಸ್ಪದ. ಖಾಸಗೀಕರಣ ಸುಲಲಿತವಾಗಿ ನಡೆದರೂ (ಅದು ಅತಿ ಸಂಶಯಾಸ್ಪದ. ಯಾಕೆಂದರೆ ಖಾಸಗೀಕರಣಕ್ಕೆ ಪ್ರತಿರೋಧ, ಕಂಪನಿಗಳ ನಡುವೆ ಪೈಪೋಟಿ ಕೋರ್ಟು ಕಚೇರಿ ರಾಜಕೀಯ ಒತ್ತಡ ಇತ್ಯಾದಿಗಳಿಂದ ಭಾರಿ ವಿಳಂಬವಾಗುವ ಸಂಭವವೇ ಹೆಚ್ಚು.) ಎರಡು ಮೂರು ವರ್ಷಗಳು ಬೇಕು ಈ ಕಂಪನಿಗಳು ಸೇವೆ ಆರಂಭಿಸಲು. ಟೆಲಿಕಾಂ ಖಾತೆ ಟೆಲಿಫೋನ್ ಜಾಲದ ವಿಸ್ತರಣೆಗೆ ಹಾಕಿದ್ದ ಯೋಜನೆಗಳೆಲ್ಲಾ ಈ ತರಾತುರಿಯ ಖಾಸಗೀಕರಣದಿಂದ ತಲೆಕೆಳಕಾಗಿವೆ. ಅಸ್ತವ್ಯಸ್ತವಾಗಿದೆ; ಆದ್ಯತೆ ಕಳೆದುಕೊಂಡಿವೆ. ಟೆಲಿಕಾಂ ಖಾತೆ ಬಯಸಿದರೂ ಅದಕ್ಕೆ ಬೇಕಾದ ಹಣ ಒದಗಿಸಲು ಆಗಲಿಕ್ಕಿಲ್ಲ. ಏಕೆಂದರೆ ಈವರೆಗೆ ಟೆಲಿಕಾಂ ಖಾತೆಗೆ ಇಡೀ ಜಾಲದ ಒಡೆತನ ಇದ್ದದ್ದರಿಂದ, ಲಾಭದಾಯಕ ಉದ್ಯಮವಾದ್ದರಿಂದ ಆರ್ಥಿಕ ಸಂಸ್ಥೆಗಳಿಂದ ಸುಲಭವಾಗಿ ಬಂಡವಾಳ

ಪುಟ 6 ನೋಡಿ

ಫ್ರಾನ್ಸಿನಲ್ಲೊಂದು ಭಾರತ ಹರಾಜು

ಇದು ಹೊಸದೇನಲ್ಲ, ಉದಾರೀಕರಣದೊಂದಿಗೆ ಈ ಹರಾಜು, ದಿನ ನಿತ್ಯದ ಮಾತಾಗಿ ಹೋಗಿದೆ. ಅಭಿವೃದ್ಧಿ ಸಮೃದ್ಧಿ ತರುವ ಹೆಸರಿನಲ್ಲಿ ಸಾಮ್ರಾಜ್ಯಶಾಹಿಗಳಿಗೆ ದೇಶವನ್ನು ಹರಾಜು ಹಾಕುತ್ತಿದೆ.' ನರಸಿಂಹರಾಯರ ಸರ್ಕಾರ ಸಾಮ್ರಾಜ್ಯಶಾಹಿಗಳು ಹಾಕುವ ಎಲ್ಲ ಷರತ್ತುಗಳನ್ನು ಒಪ್ಪಿಕೊಂಡು ದೇಶದ ಹಿತವನ್ನು ಪೂರ್ಣವಾಗಿ ಕಡೆಗಣಿಸುತ್ತದೆ.

ನರಸಿಂಹರಾಯರು ಅಥವಾ ಅವರ ಮಂತ್ರಿಮಂಡಳದ ಸದಸ್ಯರು ವಿದೇಶ ಭೇಟಿ ನೀಡಿದಾಗೆಲ್ಲ ಅವರು ಮಾಡುವುದು ಅಲ್ಲಿನ ಬಂಡವಾಳಿಗರಿಗೆ ಪೂಸಿ ಹೊಡೆಯುವುದು ಮತ್ತು ದೇಶದ ಕಾನೂನುಗಳನ್ನೇ ತಿದ್ದಿ ಅವರಿಗೆ ಅನುಕೂಲ ಮಾಡಿಕೊಡುವ ಮಾತನಾಡುವುದು.

ಈಗ ನರಸಿಂಹರಾಯರು ಫ್ರಾನ್ಸ್ ದೇಶಕ್ಕೆ ಭೇಟಿ ನೀಡಿ ಬಂದಿದ್ದಾರೆ. ಈ ಭೇಟಿಯ ಸಂದರ್ಭದಲ್ಲೂ ಅವರು ಈ ಮಾತುಗಳನ್ನೇ ಆಡಿ ಬಂದಿದ್ದಾರೆ. ಫ್ರಾನ್ಸ್ ಬಂಡವಾಳಿಗರು ಇಲ್ಲಿಗೆ ತರುವ ಹೂಡಿಕೆಯನ್ನು ರಕ್ಷಿಸುವ ಮಾತನ್ನು ಅವರು ಆಡಿದ್ದಾರೆ. ಇದಲ್ಲದೆ ಎನ್ರೋನ್ ಒಪ್ಪಂದವನ್ನು ರಕ್ಷಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಸಾಮ್ರಾಜ್ಯಶಾಹಿಗಳ ಸದ್ಯದ ಬೇಡಿಕೆಯಾದ ನಮ್ಮ ದೇಶದ ವಿಮಾ ವಲಯವನ್ನು ವಿದೇಶೀ ಕಂಪೆನಿಗಳಿಗೆ ತೆರೆಯುವ ಮಾತನ್ನು ಅವರು ಆಡಿದ್ದಾರೆ. ಇಲ್ಲಿಯವರೆಗೆ ಮಾಡಿರುವ ಉದಾರೀಕರಣವನ್ನು ಯಾವುದೇ ಸರ್ಕಾರ ಬಂದರೂ ಹಿಂತೆಗೆದುಕೊಳ್ಳುವ ಮಾತೇ ಇಲ್ಲ. ಉದಾರೀಕರಣ ಮುಂದುವರಿಯುತ್ತದೆ ಎಂದಿದ್ದಾರೆ ಅವರು.

ಇಷ್ಟೆಲ್ಲವನ್ನೂ ಹೇಳಿ ಭಾರತ ನಿಮ್ಮ ಹೂಡಿಕೆಗೆ ಹೊಸತಾಗಿ ಲಭ್ಯವಾಗಿರುವ ದೇಶ, ಇಲ್ಲಿಗೆ ಬಂದು ಹಣ ಹೂಡಿ ಎಂದು ಅವರು ಆಹ್ವಾನ ನೀಡಿ ಬಂದಿದ್ದಾರೆ.

ಪರಸ್ಪರಿತ ಲಾಭವಿರುವಲ್ಲಿ ವಿದೇಶೀಯರು ಬಂದು ಹಣ ಹೂಡಿದರೆ ಅದರಲ್ಲಿ ತಪ್ಪಿಲ್ಲ. ಆದರೆ ಇದು ಈ ಸಾಮ್ರಾಜ್ಯಶಾಹಿಗಳಿಗೆ ದೇಶವನ್ನೇ ಕೊಳ್ಳೆ ಹೊಡೆಯಲು ನೀಡಿರುವ ಆಹ್ವಾನ. ಇದೇ ಭಾರತದ ಹರಾಜು!!

ಭಾರತದಲ್ಲಿ ಹಗಲು ದರೋಡೆ ಮಾಡುವುದು ಹೇಗೆ?

• ಇದು ಯಾರಾದರೂ ಕೇಳಿರುವ ಪ್ರಶ್ನೆಯಲ್ಲ. ಕೆನಡಾ ದೇಶದ ಸರ್ಕಾರ ಒಂದು ಪುಸ್ತಿಕೆಯನ್ನು ಹೊರತಂದಿದೆ. ಈ ಪುಸ್ತಕ ಭಾರತದ ಉದಾರೀಕರಣದ ಹಿನ್ನೆಲೆಯಲ್ಲಿ ಇಲ್ಲಿಯ ಮಾರುಕಟ್ಟೆಗಳನ್ನು ಹಿಡಿದುಕೊಳ್ಳುವುದು ಹೇಗೆ ಎಂಬ ಬಗ್ಗೆ ವಿವರ ನೀಡುತ್ತದೆಯಂತೆ. 'ಭಾರತದ ಮೇಲೆ ಬೆಳಕು' (ಫೋಕಸ್ ಇಂಡಿಯಾ) ಎಂಬ ಈ ಪುಸ್ತಕವನ್ನು ಅಲ್ಲಿಯ ವ್ಯಾಪಾರ ಮಂತ್ರಿ ರಾಯ್ ಮೆಕ್ ಲಾರನ್ ಬಿಡುಗಡೆ ಮಾಡಿದರಂತೆ.

ಇದರಲ್ಲಿ ಭಾರತದಲ್ಲಿ ಕೆನಡಾದ ಆರ್ಥಿಕ ಮತ್ತು ವ್ಯಾಪಾರ ಅಭಿವೃದ್ಧಿಗೆ ತಂತ್ರಗಾರಿಕೆಯನ್ನು ನಿರೂಪಿಸಲಾಗಿದೆ.

ಕೆನಡಾದ ಬಂಡವಾಳಿಗರು ಇಲ್ಲಿ ಹಣ ಹೂಡಿ ಅತ್ಯಂತ ಹೆಚ್ಚಿನ ಲಾಭಗಳಿಸುವ ಅವಕಾಶಗಳು ಯಾವ್ಯಾವ ವಲಯಗಳಲ್ಲಿ ಇವೆ ಎಂಬುದನ್ನು ವಿವರಿಸುವ ಈ ಪುಸ್ತಕ ಇತ್ತೀಚಿನ ದಿನಗಳಲ್ಲಿ ಭಾರತದ ಬಗೆಗಿನ ಅವರ ನಿಲುವುಗಳ ಸಂಕೇತವಾಗಿದೆ.

ಹಿಂದೆ ಕನಿಷ್ಠ ಪಕ್ಷ ಭಾರತದಲ್ಲಿ ಏನಾದರೂ ಮಾಡಿ ಜಯಿಸುತ್ತೇನೆ/ದಕ್ಕಿಸಿಕೊಳ್ಳುತ್ತೇವೆ ಎಂಬ ಭಂಡತನ ಈ ದೇಶಗಳಿಗಿರಲಿಲ್ಲ. ಯಾಕೆಂದರೆ ದೇಶದ ಕಾನೂನುಗಳು ಇಲ್ಲಿಯ ಜನರ ಹಿತಾಸಕ್ತಿಗಳನ್ನು ಸ್ವಲ್ಪ ಮಟ್ಟಿಗಾದರೂ ರಕ್ಷಿಸುತ್ತಿದ್ದವು. ಈಗ ಅಂತಹ ಪರಿಸ್ಥಿತಿಯಿಲ್ಲ. "ಭಾರತದಲ್ಲಿನ ಕಾನೂನುಗಳನ್ನು ಮುರಿದು ಲಾಭಗಳಿಸುವುದು ಹೇಗೆ" ಎಂಬ ಬಗೆಯ ಪುಸ್ತಕಗಳು ಬಂದಾವು. ಇದು ಉದಾರೀಕರಣ ನಮಗೆ ತಂದಿರುವ ಸ್ಥಿತಿ.

ಉದಾರೀಕರಣ ತರಲಿರುವ ಉಪವಾಸ

ಅಮೇರಿಕದ ಕೆಲವು ಸಂಸ್ಥೆಗಳು ತಮ್ಮ ಕಾರ್ಯಕ್ಷಮತೆಗೆ ಹೆಸರಾಗಿವೆ. ಈಗ ಅಮೇರಿಕದ ಕೃಷಿ ಇಲಾಖೆ 1996ರ ಜಾಗತಿಕ ಆಹಾರ ಪರಿಸ್ಥಿತಿಯ ಬಗ್ಗೆ ವರದಿಯೊಂದನ್ನು ತಯಾರಿಸಿದೆ. ಈ ವರದಿಯ ಪ್ರಕಾರ ಜಾಗತಿಕವಾಗಿ 1996ರ ವರ್ಷದಲ್ಲಿ ಆಹಾರ ಧಾನ್ಯಗಳ ದಾಸ್ತಾನು ಕಡಿಮೆಯಾಗಲಿದ್ದು ಆದ್ದರಿಂದ ಆಹಾರ ಧಾನ್ಯಗಳ ಬೆಲೆಗಳು ತೀವ್ರವಾಗಿ ಏರುತ್ತವೆ. ಅಮೇರಿಕದ ಮುಖ್ಯ ಇಲಾಖೆಯಾದ ಈ ಕೃಷಿ ಇಲಾಖೆಯ ಭವಿಷ್ಯವನ್ನು ಗಂಭೀರವಾಗಿ ತೆಗೆದುಕೊಳ್ಳಲೇಬೇಕಾಗುತ್ತದೆ.

ಇದರ ಬಿಸಿ ಖಂಡಿತವಾಗಿಯೂ ಭಾರತಕ್ಕೂ ತಟ್ಟಲಿದೆ. ಯಾಕೆಂದರೆ ನಮ್ಮ ಆರ್ಥಿಕ ಈಗ ಮುಕ್ತವಾಗಿದೆ. ಜಾಗತಿಕ ಬೆಲೆಗಳು ಏರಿದರೆ ಈಗ ಇಲ್ಲಿಯ ಬೆಲೆಗಳು ಏರುತ್ತವೆ.

ಈಗೇನು ಬೆಲೆಗಳು ಕಡಿಮೆ ಇವೆಯೇ? ಎಂದು ಕೇಳಬೇಡಿ ಖಂಡಿತ ಇಲ್ಲ. ಆದರೆ ಈ ವರದಿಯ ಪ್ರಕಾರ ಇನ್ನೂ ಬೆಲೆಗಳು ಏರುವ ಸಾಧ್ಯತೆಗಳು ಹೆಚ್ಚು. (ಜಾಗತಿಕ ಬೆಲೆ ಏರಿಕೆಗೆ ಅನುಗುಣವಾಗಿ)

ಇದು ಒಂದು ಕಡೆಯಾದರೆ ಕೃಷಿ ರಫ್ತು ಕಡಿಮೆಯಾಗಿರುವುದರ ಹಿನ್ನೆಲೆಯಲ್ಲಿ ಅದನ್ನು ತೀವ್ರವಾಗಿ ಹೆಚ್ಚಿಸುವ ಪ್ರಯತ್ನಗಳನ್ನು ಸರ್ಕಾರ ಮಾಡುತ್ತಿದೆ. ಕೃಷಿ ಉತ್ಪನ್ನಗಳ ರಫ್ತಿನಲ್ಲಿ ಅಕ್ಕಿ ಗೋಧಿ ಇತ್ಯಾದಿಗಳೆಲ್ಲ ಸೇರಲಿವೆ. ಜಾಗತಿಕ ಬೆಲೆಗಳೂ ಏರಿ ದೇಶದ ದಾಸ್ತಾನು/ಉತ್ಪಾದನೆಯನ್ನು ರಫ್ತು ಮಾಡಿದರೆ ದೇಶದ ಪರಿಸ್ಥಿತಿ ಏನಾಗಬಹುದು ಊಹಿಸಿ.

ಉಪವಾಸದ ಉದಾರೀಕರಣ ಎನ್ನಬಹುದೆ?



ಧಣಿಗಳ ಮತ್ತೊಂದು ಫರ್ಮಾನು

. ವಿಶ್ವ ಬ್ಯಾಂಕೆಂಬ ಭಾರತ ಸರ್ಕಾರದ ಧಣಿ ಈಗ ಮತ್ತೊಂದು ಫರ್ಮಾನು ಹೊರಡಿಸಿದೆ. ಅದರ ಪ್ರಕಾರ ಭಾರತ ಉದಾರೀಕರಣದ ವೇಗವನ್ನು ಹೆಚ್ಚಿಸದೇ ಹೋದಲ್ಲಿ ಇಲ್ಲಿನ ಆರ್ಥಿಕ ಅಭಿವೃದ್ಧಿ ಕುಂಠಿತವಾಗಲಿದೆ.

ಇಲ್ಲಿನ ಅಂತರ್‍ರಚನಾ ಸೌಕರ್ಯಗಳಾದ ವಿದ್ಯುತ್, ರಸ್ತೆಗಳು, ನೀರಾವರಿ, ಸಂಪರ್ಕ ಇತ್ಯಾದಿಗಳಲ್ಲಿ ಬೆಳವಣಿಗೆ ಆಗದೆ ದೇಶ ಅಭಿವೃದ್ಧಿ ಹೊಂದುವುದು ಸಾಧ್ಯವಿಲ್ಲ. ಈ ವಲಯಗಳಲ್ಲಿ ಹೂಡಿಕೆಯಾಗಲು ಇನ್ನೂ ಉದಾರೀಕರಣವಾಗಬೇಕು. ಎನ್ರೋನ್ ಒಪ್ಪಂದದ ಬಗ್ಗೆ ಎದ್ದಿರುವಂತಹ ವಿವಾದಗಳು ಏಳಬಾರದು ಎಂಬುದು ಅವರ ಮಾತಿನ ಒಳಮುಖವಾಗಿರಬಹುದು.

ಇದಲ್ಲದೆ ಸಾರ್ವಜನಿಕ ವಲಯದ ಉತ್ಪಾದನೆ ಹೆಚ್ಚಿಸಬೇಕು (ಇಲ್ಲವೇ ಖಾಸಗೀಕರಣ ಮಾಡಬೇಕು?) ಮತ್ತು ಹಣಕಾಸು ವಲಯವನ್ನು ತೆರೆಯಬೇಕು. ಇವನ್ನೆಲ್ಲ ಮಾಡಿದರೆ ಮಾತ್ರ ಭಾರತದಲ್ಲಿ ಅಭಿವೃದ್ಧಿ, ಇಲ್ಲದಿದ್ದರೆ ಇಲ್ಲ.

ಇನ್ನೊಂದು ಎಚ್ಚರಿಕೆ

ವಿಶ್ವ ಬ್ಯಾಂಕ್ ಇದಲ್ಲದೆ ಇನ್ನೊಂದು ಎಚ್ಚರಿಕೆಯನ್ನೂ ನೀಡಿದೆ. ಸರ್ಕಾರಿ ಸ್ವಾಮ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಲಾಭ ಗಳಿಸಬೇಕು. ಇಲ್ಲದಿದ್ದರೆ ದೇಶದ ಪರಿಸ್ಥಿತಿ ಬಿಗಡಾಯಿಸುತ್ತದೆ. ಅದರ ವರದಿಯ ಪ್ರಕಾರ 1995-96ರಲ್ಲಿ ಸಾಲ ಮರುಪಾವತಿಯೇ ಸರ್ಕಾರದ ಆದಾಯದ ಶೇ. 70ರಷ್ಟನ್ನು ನುಂಗಿಹಾಕಿಬಿಡುತ್ತದೆ. ಆದ್ದರಿಂದ ಒಟ್ಟು ಆದಾಯದ ಮೂರನೇ ಒಂದಂಶ ಮಾತ್ರ ಇತರ ಖರ್ಚುಗಳಿಗೆ ಲಭ್ಯವಾಗುತ್ತದೆ.

ದೇಶದ ಒಟ್ಟು ಸಾಲ 94.8 ಶತಕೋಟಿ ಅಮೇರಿಕನ್ ಡಾಲರುಗಳು. ಈ ಪರಿಸ್ಥಿತಿ ನಿಭಾಯಿಸಲು ದೇಶ ಮುಂದಿನ ನಾಲ್ಕು ವರ್ಷಗಳಲ್ಲಿ 40 ಶತಕೋಟಿ ಡಾಲರುಗಳನ್ನು ಕೂಡಿಸಬೇಕು.

ವಿಶ್ವ ಬ್ಯಾಂಕಿನ ತಂತ್ರ ಇದು. ಉದಾರೀಕರಣಕ್ಕೆ ನೂರಾರು ಷರತ್ತುಗಳನ್ನು ಹೇರುವುದು ಅವರ ಯೋಜನೆಗಳು. ದೇಶಕ್ಕೆ ಅಭಿವೃದ್ಧಿ ತರುವಲ್ಲಿ ವಿಫಲವಾಗುವಾಗ ನೀವು ಅದನ್ನು ಮಾಡಿಲ್ಲ ಇದನ್ನು ಮಾಡಿಲ್ಲ, ಆದ್ದರಿಂದಲೇ ಹೀಗೆ ಎಂದು ನುಣುಚಿಕೊಳ್ಳುವುದು.

ಇದು ಸಾಮ್ರಾಜ್ಯಶಾಹಿ ಅರ್ಥಶಾಸ್ತ್ರ ಎನ್ನೋಣವೇ?

ಲ್ಲೂ ಯೂನಿಯನ್‌ಗಳಿವೆ.

ಈ ಯೋಜನೆಯ ಉದ್ದೇಶ ಕಾರ್ಮಿಕ ಘಗಳ ಸದಸ್ಯರಲ್ಲಿ ಈ ಬಗ್ಗೆ ಅರಿವು ೂಡಿಸಿ, ಅವರ ಮೂಲಕ ಸಾರ್ವಜನಿಕರನ್ನು ುವುವುದು. ಜನವರಿ 95ರಿಂದ ಸೆಪ್ಟೆಂಬರ್ 95ರ ಮೊದಲ ಘಟ್ಟ ಕಾರ್ಯಕರ್ತರ ತರಬೇತಿಯನ್ನು ಕೈಗೆತ್ತಿಕೊಳ್ಳ ಿದೆ. ಅಕ್ಟೋಬರ್ 95ರಿಂದ ಮಾರ್ಚ್ 96ರವರೆಗೆ ಈ ತರಬೇತಿ ಪಡೆದ ಕಾರ್ಯಕರ್ತರು ಪ್ರಚಾರ ಕಾರ್ಯ ಸುತ್ತಾರೆ,

ರಾಷ್ಟ್ರೀಯ ಸಮಿತಿ ರಚನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಫೆಬ್ರುವರಿಗಳಲ್ಲಿ ಈ ಸಮಿತಿ ಸಭೆ ನಡೆದು ದು ಕಾರ್ಯಕ್ರಮ ರೂಪಿಸಲಾಯಿತು.



ಕಾರ್ಯಕ್ರಮದ ಮೊದಲ ಕೆಲಸ ಅಖಿಲ ರತ ಕಮ್ಮಟ (ವರ್ಕ್ ಶಾಪ್) ನಡೆಸುವುದು. ಈಗಾಗಲೇ ನಡೆದಿದೆ. ನಮ್ಮ ರಾಜ್ಯದಿಂದ ಸಂಗಾತಿಗಳು ಇದರಲ್ಲಿ ಹಾಜರಿದ್ದರು. ರಿನ್ನು ರಾಜ್ಯದಲ್ಲಿ, ವಿವಿಧ ಕಾರ್ಮಿಕ ಸಂಘ ಲ್ಲಿ ಇತರ ಕಾರ್ಯಕರ್ತರಿಗೆ ತರಬೇತಿ [illegible].

ರಾಜ್ಯಮಟ್ಟದ ಕಮ್ಮಟ ಜುಲೈ 26ರಿಂದ [illegible] ಮೂರು ದಿನಗಳ ಕಾಲ ನಡೆಯ [illegible] 50 ಕಾರ್ಯಕರ್ತರಿಗೆ ಇದರಲ್ಲಿ [illegible] ರಾಷ್ಟ್ರೀಯ ಸಮಿತಿ [illegible] ಉದ್ದಿಮೆವಾರು ಕಮ್ಮಟಗಳು ನಡೆಯಲಿವೆ. ಹೋಟೆಲ್ ಉದ್ದಿಮೆಯ ಮೊದಲ ಅಖಿಲ ಭಾರತ ಕಮ್ಮಟ ಬೆಂಗಳೂರಿನಲ್ಲಿ ಜೂನ್ 28 ಹಾಗೂ 29 ರಂದು ನಡೆಯಲಿದೆ. ಅಗರಬತ್ತಿ ಕುರಿತು ಕಮ್ಮಟವೂ ಬೆಂಗಳೂರಿನಲ್ಲೇ ನಡೆಯಲಿದೆ. ಬೀಡಿ ಕುರಿತಂತೆ ಅಖಿಲ ಭಾರತ ಕಮ್ಮಟ ಜುಲೈ ಅಂತ್ಯದ ಒಳಗೆ ನಡೆಯಲಿದೆ. ಕೈಮಗ್ಗದ ಕಮ್ಮಟ ತಮಿಳುನಾಡಿನಲ್ಲಿ ನಡೆಯಲಿದೆ

ಏಕೆ ಈ ಯೋಜನೆ?

ಕರ್ನಾಟಕದಲ್ಲಿರುವ ನಾವು ಈ ವರ್ಕ್ ಶಾಪ್‌ಗಳಲ್ಲಿ ಭಾಗ ವಹಿಸುವುದರೊಂದಿಗೆ ನಮ್ಮ ರಾಜ್ಯದಲ್ಲಿ ಸುಮಾರು 50 ಯೂನಿಯನ್‌ಗಳ (ಬೀಡಿ ಉದ್ದಿಮೆಯಲ್ಲಿ 30 ಯೂನಿಯನ್‌ಗಳು, ಕೈಮಗ್ಗದಲ್ಲಿ 5, ಹೋಟೆಲ್ ನಲ್ಲಿ 4, ಅಗರಬತ್ತಿಯಲ್ಲಿ 3 ಹಾಗೂ ಕಟ್ಟಡ ನಿರ್ಮಾಣ ಇತ್ಯಾದಿ 9 ಯೂನಿಯನ್ ಗಳು) ತಲಾ 30 ಕಾರ್ಯಕರ್ತರಿಗೆ ತರಬೇತಿ ನೀಡಬೇಕಾಗಿದೆ. ಪ್ರತಿಯೊಂದು ಸಂಘದ 30 ಕಾರ್ಯಕರ್ತರಿಗೆ ಎರಡು ದಿನಗಳ ತರಗತಿಗಳಿರುತ್ತವೆ. ಇದೊಂದು ಅಗಾಧ ಕೆಲಸ. ಈ ಯೂನಿಯನ್ ಗಳೂ ಇದರಿಂದ ಪ್ರಯೋಜನ ಪಡೆಯಬಹುದು.

ಬಾಲದುಡಿಮೆಯನ್ನು ನಿರ್ಮೂಲ ಮಾಡಬೇಕಾದರೆ ಈ ಉದ್ದಿಮೆಗಳಲ್ಲಿ ಶೋಷಣೆಯನ್ನು ನಿರ್ಮೂಲ ಮಾಡುವ ಗುರಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಸಹಜವಾಗಿ ಇದರಿಂದ ಕಾರ್ಮಿಕರಿಗೆ ಸರಿಯಾದ ಮಾರ್ಗದರ್ಶನ ದೊರೆಯುತ್ತದೆ.

ಪುಟ 7 ನೋಡಿ



ಮಹಾರಾಷ್ಟ್ರ: ಅಲ್ಪಸಂಖ್ಯಾತರಿಗೆ ಅಪಾಯದ ಕರೆಗಂಟೆ

ಮಹಾರಾಷ್ಟ್ರದಲ್ಲಿ ಆಡಳಿತಕ್ಕೆ ಬಂದಿರುವ ಶಿವಸೇನೆ-ಬಿಜೆಪಿ ಮೈತ್ರಿ ಕೂಟ ಸರಕಾರ ಅಲ್ಪಸಂಖ್ಯಾತರ ವಿರುದ್ಧ ಎಲ್ಲಾ ಸ್ವರೂಪದ ಆಕ್ರಮಣಗಳನ್ನು ನಾನಾ ರೀತಿಯಲ್ಲಿ ಆರಂಭಿಸಿದೆ.

ರಾಜ್ಯದ ಅಲ್ಪಸಂಖ್ಯಾತರ ಆಯೋಗವನ್ನು ರದ್ದುಪಡಿಸಿರುವುದು ದೊಡ್ಡ ಆಕ್ರಮಣದಲ್ಲಿ ಒಂದಾಗಿದೆ. ಸರಕಾರದ ಈ ಕ್ರಮದಿಂದ ಅಲ್ಪಸಂಖ್ಯಾತರಿಗೆ ಭಾರೀ ಅನ್ಯಾಯ ಆಗಲಿದೆ.

ಆಯೋಗವನ್ನು ರದ್ದುಪಡಿಸಿರುವುದು ಸಂವಿಧಾನದ ಉಲ್ಲಂಘನೆಯಾಗಿದೆ. ಸಂವಿಧಾನದ ವಿರುದ್ಧ ಯಾವುದೇ ರಾಜ್ಯ ಸರಕಾರ ಕಾರ್ಯಾಚರಿಸುವಂತಿಲ್ಲ. ಆದರೆ ಮಹಾರಾಷ್ಟ್ರದ ಈ ಮೈತ್ರಿಕೂಟ ಸರಕಾರ ಇಂಥ ಅಪಾಯಕಾರಿ ಹೆಜ್ಜೆಯನ್ನು ಇಟ್ಟಿದೆ.

ರಾಜ್ಯ ಸರಕಾರದ ಕ್ರಮವನ್ನು ಕೇಂದ್ರ ಸರಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಕೇಂದ್ರದ ಸಮಾಜ ಕಲ್ಯಾಣ ಖಾತೆ ಸಚಿವ ಸೀತಾರಾಂ ಕೇಸರಿ ಹೇಳಿದ್ದಾರೆ. ತನ್ನ ನಿಲುವನ್ನು ಬದಲಾಯಿಸುವಂತೆ ಅವರು ಮನೋಹರ ಜೋಷಿ ಸರಕಾರವನ್ನು ಒತ್ತಾಯಿಸಿದ್ದಾರೆ.

ಔರಂಗಾಬಾದ್ ಹೆಸರು ಬದಲಾವಣೆಗೆ ತೀವ್ರ ವಿರೋಧ

ಕೆಲವು ನಗರಗಳ ಹೆಸರುಗಳ ಬದಲಾವಣೆ-ಶಿವಸೇನೆ-ಬಿಜೆಪಿ ಕೂಟದ ಸರಕಾರ ತನ್ನ ಆಡಳಿತದ ಆರಂಭದಲ್ಲೇ ಮುಂದಿಟ್ಟುಕೊಂಡ ಕಲಾಪ ಪಟ್ಟಿಯಲ್ಲಿ ಈ ಅಂಶವೂ ಪ್ರಮುಖವಾಗಿತ್ತು. ಅಲ್ಪಸಂಖ್ಯಾತರ ವಿರುದ್ಧದ ಭಾವನೆಯನ್ನು ಕೆರಳಿಸುವುದೇ ಇದರ ಹಿಂದಿರುವ ನಿಜವಾದ ಉದ್ದೇಶವಾಗಿದೆ.

ಹೆಸರು ಬದಲಾವಣೆಯ ಕ್ರಮ ರಾಜ್ಯದಲ್ಲಿ ವಿವಾದದ ಕಿಚ್ಚನ್ನು ಹಬ್ಬಿಸಿದೆ. ಔರಂಗಾಬಾದ್ ನಗರದ ಹೆಸರನ್ನು ಸಂಭಾಜಿನಗರ ಎಂದು ಮರುನಾಮಕರಣ ಮಾಡುವ ನಿರ್ಣಯವೊಂದನ್ನು ಔರಂಗಾಬಾದ್ ಮಹಾನಗರಪಾಲಿಕೆಯ ಆಳುವ ಶಿವಸೇನೆಯವರು ಕೈಗೊಂಡಿದ್ದಾರೆ. ವಾಸ್ತವವಾಗಿ ಇದು ಒತ್ತಾಯದಿಂದ ಹಾಗೂ ಅಕ್ರಮವಾಗಿ ಪಾಸು ಮಾಡಲಾದ ಗೊತ್ತುವಳಿಯಾಗಿದೆ.

ಜೂನ್ ೨೧ರಂದು ಹೆಸರು ಬದಲಾವಣೆಯ ನಿರ್ಣಯವನ್ನು 'ಅಂಗೀಕರಿಸಲಾಯಿತು' ಶಿವಸೇನೆ ಮೇಯರ್‌ರ ಈ ಕ್ರಮವನ್ನು ಪ್ರತಿಪಕ್ಷಗಳ ಸದಸ್ಯರು ಪಕ್ಷಭೇದ ಮರೆತು ಪ್ರತಿಭಟಿಸಿ ಧರಣೆ ನಡೆಸಿದರು. ಅವರು ಮೇಯರ್ ಸುನಂದಾ ಕೊಲ್ಲೆ ಮತ್ತು ಶಿವಸೇನೆ ವಿರುದ್ಧ ಘೋಷಣೆಗಳನ್ನು ಕೂಗಿದರು. ಧರಣಿ ನಡೆಸಿದ ೨೫ಕ್ಕೂ ಹೆಚ್ಚು ಕಾರ್ಪೋರೇಟರ್‌ಗಳನ್ನು ಬಂಧಿಸಲಾಯಿತು.

ಪಾಲಿಕೆಯಲ್ಲಿ ಶಿವಸೇನೆಗೆ ಬಹುಮತವಿರುವುದರಿಂದ ಗೊತ್ತುವಳಿ ಅಂಗೀಕಾರವಾಗಿದೆಯೆಂದು ಮೇಯರ್ ಘೋಷಿಸಿದರು. ಪ್ರತಿಪಕ್ಷ ಸದಸ್ಯರು ಆರೋಪಿಸಿದರು.

ಚುನಾವಣೆ ಮೇಲೆ ಕಣ್ಣು

ಐತಿಹಾಸಿಕ ಹಿನ್ನೆಲೆ ಇರುವ ಔರಂಗಾಬಾದಿನ ಜನರ ಭಾವನೆಗಳನ್ನು ಶಿವಸೇನೆ-ಬಿಜೆಪಿ ಮೈತ್ರಿಕೂಟದ ಸರಕಾರ ಪರಿಗಣಿಸಬೇಕು ಎಂದು ಈ ಸದಸ್ಯರು ಮನವಿ ಮಾಡಿದ್ದಾರೆ.

ಮುಂದಿನ ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಾಜದ ನಿರ್ದಿಷ್ಟ ವಿಭಾಗದಜನರ ಓಟುಗಳನ್ನು ಸೆಳೆಯಲು ಶಿವಸೇನೆ ಪ್ರಚೋದನಕಾರಿ ವಾತಾವರಣವನ್ನು ಸೃಷ್ಟಿಸುತ್ತಿದೆ ಎಂದು ಪ್ರತಿಪಕ್ಷ ಸದಸ್ಯರು ಹೇಳಿದ್ದಾರೆ.

ಸಮಾಜದ ಎಲ್ಲಾ ವಿಭಾಗಗಳ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶಿವಸೇನೆಯ ಈ ಅಪಾಯಕಾರಿ ಆಟವನ್ನು ಎದುರಿಸುತ್ತೇವೆ ಎಂದು ಅವರು ಘೋಷಿಸಿದ್ದಾರೆ.

ಪತ್ರಿಕಾ ಕಛೇರಿ ಮೇಲೆ ಶಿವಸೇನೆ ಗೂಂಡಾ ದಾಳಿ

ಮಹಾರಾಷ್ಟ್ರದ ಔರಂಗಾಬಾದಿನಲ್ಲಿರುವ 'ಲೋಕಮತ' ಎಂಬ ಪತ್ರಿಕೆಯ ಕಛೇರಿ ಮೇಲೆ ಶಿವಸೇನೆ ಗೂಂಡಾಗಳು ಜೂನ್ ಒಂಭತ್ತರಂದು ದಾಳಿ ಮಾಡಿದರು.

ಫ್ಯಾಸಿಸ್ಟ್-ಕೋಮುವಾದಿ ಶಕ್ತಿಗಳ ವಿರುದ್ಧ ಸತತ ಹೋರಾಟ ನಡೆಸುತ್ತಿರುವ 'ಲೋಕಮತ'ದ ಕಾರ್ಯನಿರ್ವಾಹಕ ಸಂಪಾದಕ ಮಹಾವೀರ್ ಝುಂದಾಳೆ ಅವರ ಮೇಲೆ ಆಕ್ರಮಣ ಮಾಡುವುದು ಈ ದಾಳಿಯ ಮುಖ್ಯ ಉದ್ದೇಶವಾಗಿತ್ತು. ಝುಂದಾಳೆ ಅವರು ಔರಂಗಾಬಾದಿನಲ್ಲಿ ಜೂನ್ 9 ರಿಂದ 11ರವರೆಗೆ ವ್ಯವಸ್ಥೆಯಾಗಿದ್ದ ಎಸ್.ಎಫ್.ಐ.ನ ರಾಜ್ಯ ಮಟ್ಟದ ಸಮಾವೇಶದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಎಸ್.ಎಫ್.ಐ. ಸಮಾವೇಶದಲ್ಲಿ ಸ್ವಾಗತ ಭಾಷಣ ಮಾಡಿ ಪತ್ರಿಕೆ ಕಛೇರಿಗೆ ಮರಳಿ ಬಂದ ಅವರ ಮೇಲೆ ಗೂಂಡಾಗಳು ಹಲ್ಲೆ ಮಾಡಿದರು. ಶಿವಸೇನೆಯ ಜಿಲ್ಲಾಧ್ಯಕ್ಷ ಮಾಧವರಾವ್ ಬಸಕ್ ಈ ದಾಳಿಯ ನೇತೃತ್ವ ವಹಿಸಿದ್ದರು.

ಝುಂದಾಳೆ ಅವರಿಗೆ ಚೂರಿ ತೋರಿಸಿ ಕೊಲ್ಲುವ ಬೆದರಿಕೆ ಹಾಕಲಾಯಿತು. ಮಾರಕ ಅಸ್ತ್ರಗಳಿಂದ ಆದ ಹಲ್ಲೆಯಿಂದ ಅವರು ಗಾಯಗೊಂಡಿದ್ದಾರೆ. ಇತರ ಐದು ಪತ್ರಕರ್ತರ ಮೇಲೆ ಕೂಡ ಹಲ್ಲೆ ನಡೆಸಲಾಗಿದೆ.

ಪತ್ರಿಕೆ ಕಛೇರಿಯನ್ನು ದುಷ್ಕರ್ಮಿಗಳು ಪೂರ್ಣವಾಗಿ ಧ್ವಂಸಗೊಳಿಸಿದ್ದಾರೆ. ಕಾಗದ ಪತ್ರಗಳನ್ನು ಸುಟ್ಟುಹಾಕಿದ್ದಾರೆ.

ಖಂಡನೆ

ಪತ್ರಕರ್ತರ ಝುಂದಾಳೆ ಅವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಎಸ್.ಎಫ್.ಐ. ಸಮಾವೇಶ ಗೊತ್ತುವಳಿಯನ್ನು ಅಂಗೀಕರಿಸಿದೆ. ಆರೋಪಿಗಳ ಮೇಲೆ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದೆ.

ಕೇಂದ್ರ ಗೃಹ ಸಚಿವ ಚವಾಣ್, ರಾಜ್ಯದ ಮುಖ್ಯಮಂತ್ರಿ ಮನೋಹರ ಜೋಷಿ ಮತ್ತು ವಿಧಾನಸಭೆ ಸ್ಪೀಕರ್ ದತ್ತಾ ನಲ್ವಾಡೆ ಅವರಿಗೆ ಎಸ್.ಎಫ್.ಐ. ನಾಯಕರು ತಂತಿ ಸಂದೇಶಗಳನ್ನು ಕಳಿಸಿ ದುರುಳರ ವಿರುದ್ಧ ತೀಕ್ಷ್ಣ ಕ್ರಮಕೈಗೊಳ್ಳಲು ಆಗ್ರಹಿಸಿದ್ದಾರೆ.

ಎಸ್.ಎಫ್.ಐ., ಡಿ.ವೈ.ಎಫ್.ಐ. ನಾಯಕರು ಮತ್ತು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ 'ಲೋಕಮತ' ಕಛೇರಿಗೆ ಭೇಟಿ ಕೊಟ್ಟು ಝುಂದಾಳೆ ಅವರಿಗೆ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸಿದರು.

ಪಂಚಾಯಿತಿ ಚುನಾವಣೆ: ಬಂಗಾಳ ಎಡರಂಗಕ್ಕೆ ಭಾರೀ ಜಯ

ಪಶ್ಚಿಮ ಬಂಗಾಳದ 18 ಜಿಲ್ಲೆಗಳಲ್ಲಿ ಮೂರು ಹಂತದ ಪಂಚಾಯಿತಿ ಸಂಸ್ಥೆಗಳಿಗೆ ಜೂನ್ 4ರಂದು ನಡೆದ ಉಪಚುನಾವಣೆಗಳಲ್ಲಿ ಎಡರಂಗ ಹೆಚ್ಚಿನ ಸ್ಥಾನಗಳಲ್ಲಿ ಜಯ ಸಾಧಿಸಿದೆ. 1993ರ ಚುನಾವಣೆಗಿಂತಲೂ ಉತ್ತಮ ಸಾಧನೆ ತೋರಿರುವುದು ಈ ಫಲಿತಾಂಶದಿಂದ ಕಂಡು ಬಂದಿದೆ.

ಲಭ್ಯವಾಗಿರುವ ಮಾಹಿತಿ ಪ್ರಕಾರ ಫಲಿತಾಂಶ ಘೋಷಿತವಾದ 364 ಸ್ಥಾನಗಳಲ್ಲಿ 237ರಲ್ಲಿ ಎಡರಂಗ ವಿಜಯಿಯಾಗಿದೆ. ಅದರಲ್ಲಿ 212 ಸ್ಥಾನಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಗೆದ್ದಿದ್ದಾರೆ. ಸಿಪಿಐ 5, ಫಾರ್ವರ್ಡ್ ಬ್ಲಾಕ್ ಒಂದು, ಆರ್.ಎಸ್.ಪಿ. 18 ಮತ್ತು ಒಂದು ಸ್ಥಾನಗಳಲ್ಲಿ (ಗ್ರಾಮ ಪಂಚಾಯತಿ ಮಟ್ಟಗಳಲ್ಲಿ) ಗೆದ್ದಿವೆ.

ಬಿಜೆಪಿ ತುರ್ಪ್ ಔಟ್

ಕಾಂಗ್ರೆಸ್ (ಐ) 110 ಸ್ಥಾನಗಳನ್ನು ಪಡೆದಿದೆ. ಬಿಜೆಪಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಕೇವಲ ಆರು ಸ್ಥಾನಗಳಲ್ಲಿ ಗೆದ್ದಿದೆ. ಅಂದರೆ ಬಿಜೆಪಿ ಇಲ್ಲಿ ತುರ್ಪ್ ಔಟ್ ಆಗಿದೆ.

1993ರಲ್ಲಿನ ಪಂಚಾಯಿತಿ ಚುನಾವಣೆಗಳಲ್ಲಿ ಎಡರಂಗ ಒಟ್ಟು ಸ್ಥಾನಗಳ ಪೈಕಿ ಶೇಕಡಾ 44.31 ರಲ್ಲಿ ಗೆದ್ದಿತ್ತು. ಈಗಿನ ಉಪಚುನಾವಣೆಗಳಲ್ಲಿ ಈ ಪ್ರಮಾಣ ಶೇ. 65.10 ಆಗಿದೆ.

ಪಂಚಾಯಿತಿ ಸಮಿತಿಗಳ 47 ಸ್ಥಾನಗಳ ಪೈಕಿ 39ರಲ್ಲಿ ಎಡರಂಗ ಹಾಗೂ 8ರಲ್ಲಿ ಕಾಂಗ್ರೆಸ್(ಐ) ಗೆದ್ದಿದೆ. 1993ರಲ್ಲಿ ಸಾಧನೆಯ ಪ್ರಮಾಣ ಶೇ. 72.2 ಆಗಿದ್ದು ಈಗ ಅದು ಶೇ. 82.27 ಆಗಿ ಗಣನೀಯ ಸುಧಾರಣೆಯನ್ನು ತೋರಿಸಿದೆ.

ಜಿಲ್ಲಾ ಪರಿಷತ್ ಮಟ್ಟದ ಉಪ ಚುನಾವಣೆಗಳಲ್ಲಿ ಎಡರಂಗ ಮತ್ತು ಕಾಂಗ್ರೆಸ್‌ಗಳೆರಡೂ ಹಿಂದಿನ ಸ್ಥಾನಗಳನ್ನೇ ಉಳಿಸಿಕೊಂಡಿವೆ.

ಎಡರಂಗದಲ್ಲಿ ಮತ್ತೆ ವಿಶ್ವಾಸವನ್ನು ವ್ಯಕ್ತಪಡಿಸಿದ ಜನರಿಗೆ ಎಡರಂಗ ಕೃತಜ್ಞತೆಗಳನ್ನು ಸೂಚಿಸಿದೆ.

ಕಲ್ಕತ್ತ ಪಾಲಿಕೆ ಚುನಾವಣೆ

ಕಲ್ಕತ್ತ ಮಹಾನಗರ ಪಾಲಿಕೆಗೆ ಜುಲೈ 9 ರಂದು ಚುನಾವಣೆ ನಡೆಯಲಿದೆ. ಮಿತ್ರ ಪಕ್ಷವಾದ ಜನತಾದಳದೊಂದಿಗೆ ಸೇರಿಕೊಂಡು ಪಾಲಿಕೆಯ ಎಲ್ಲಾ ಸ್ಥಾನಗಳಿಗೆ ಸ್ಪರ್ಧಿಸಲು ರಾಜ್ಯ ಎಡರಂಗ ನಿರ್ಧರಿಸಿದೆ.

ಎಡರಂಗದ ಅಧ್ಯಕ್ಷ ಶೈಲೇನ್ ದಾಸ್ ಗುಪ್ತಾ ಈ ವಿಷಯವನ್ನು ಪ್ರಕಟಿಸಿದ್ದಾರೆ.

ಪಾಲಿಕೆಯ 141 ಸ್ಥಾನಗಳ ಪೈಕಿ 90ರಲ್ಲಿ ಸಿಪಿಐ(ಎಂ) ಸ್ಪರ್ಧಿಸಲಿದೆ. ಸಿಪಿಐ 16, ಫಾರ್ವರ್ಡ್ ಬ್ಲಾಕ್ 11, ಆರ್.ಎಸ್.ಪಿ. 10, ಫಾರ್ವರ್ಡ್ ಬ್ಲಾಕ್ (ಮಾರ್ಕ್ಸಿಸ್ಟ್)2, ಸೋಷಲಿಸ್ಟ್ ಪಾರ್ಟಿ ಒಂದು, ವಿಪ್ಲವಿ ಬಾಂಗ್ಲಾ ಕಾಂಗ್ರೆಸ್-ಒಂದು, ಜನತಾದಳ 4 ಮತ್ತು ಎಡರಂಗ ಬೆಂಬಲಿತ 4 ಅಭ್ಯರ್ಥಿಗಳು ಸ್ಪರ್ಧೆಯ ಕಣಕ್ಕೆ ಇಳಿಯುವರು.

ಪುರಸಭೆ ಕಾನೂನಿಗೆ ತಿದ್ದುಪಡಿಯಾದ ನಂತರ ಕಲ್ಕತ್ತ ಪಾಲಿಕೆಗೆ ಚುನಾವಣೆ ನಡೆಯುತ್ತಿರುವುದು ಇದು ಮೊದಲ ಸಲವಾಗಿದೆ. 141 ಸ್ಥಾನಗಳ ಪೈಕಿ ೫೩ ಸೀಟುಗಳನ್ನು ಮೀಸಲಿಡಲಾಗಿದೆ.

ದೂರಸಂಪರ್ಕ ಖಾಸಗೀಕರಣ


ಪುಟ 5ರಿಂದ

ಹರಿದು ಬರುತ್ತಿತ್ತು. ಈಗ ಲಾಭದಾಯಕ ಕ್ಷೇತ್ರಗಳನ್ನು ಖಾಸಗೀಯವರಿಗೆ ವಹಿಸಿದ ಮೇಲೆ ಟೆಲಿಕಾಂ ಖಾತೆಗೆ ಹಣ ಕೊಡಲು ಯಾರೂ ಮುಂದೆ ಬರಲಿಕ್ಕಿಲ್ಲ. ಇವೆಲ್ಲದರ ಒಟ್ಟು ಪರಿಣಾಮ ಕಳೆದ ಎರಡು ಮೂರು ವರ್ಷಗಳಿಂದ ವೇಗವಾಗಿ ವಿಸ್ತರಿಸಲಾಗುತ್ತಿದ್ದ ಟೆಲಿಫೋನ್ ಕನೆಕ್ಷನ್‌ಗಳಲ್ಲಿ ಇನ್ನು ಮುಂದೆ ಭಾರಿ ವಿಳಂಬವಾಗಲಿದೆ.


ಈ ವಿಳಂಬದ ನಂತರವೂ ಖಾಸಗೀ ಕಂಪನಿಗಳಿಗೆ ಜಾಲ ವಿಸ್ತರಣೆಯಲ್ಲಿ ಪ್ರತಿ ಲೈನಿಗೆ ಹೆಚ್ಚಿನ ವೆಚ್ಚ ತಗಲುತ್ತದೆ. ಅವು ಹೊಸದಾಗಿ ಜಾಲ ಆರಂಭಿಸುತ್ತಿರುವುದರಿಂದ ಟೆಲಿಕಾಂ ಖಾತೆಗೆ ಇಂತಹ ವಿಸ್ತರಣೆಯ ವೆಚ್ಚ ಭಾರಿ ಕಡಿಮೆ. ಆದ್ದರಿಂದ ಖಾಸಗೀ ಕಂಪನಿಗಳ ದರ ನಾಲ್ಕರಿಂದ ಐದು ಪಟ್ಟು ಹೆಚ್ಚುವುದು ಖಚಿತ. ಆದರೆ ಅತ್ಯಾಧುನಿಕ ತಂತ್ರಜ್ಞಾನ ಬಳಸುವುದರಿಂದ ಒಳ್ಳೆಯ ಸೇವೆ ಒದಗಿಸಬಹುದು. ಆ ಮೂಲಕ ಟೆಲಿಕಾಂ ಖಾತೆಯ ಶ್ರೀಮಂತ ಬಳಕೆದಾರರನ್ನು ಸೆಳೆದುಕೊಳ್ಳಬಹುದು. ಶ್ರೀಮಂತ ಬಳಕೆದಾರರನ್ನು ಕಳೆದುಕೊಳ್ಳುವುದರಿಂದ ಟೆಲಿಕಾಂ ಖಾತೆ ಇನ್ನಷ್ಟು ಬಡವಾಗುವುದು. ಏಕೆಂದರೆ ಈಗ ಟೆಲಿಕಾಂ ಖಾತೆಯ ಆದಾಯದಲ್ಲಿ ಮೂರನೇ ಎರಡು ಭಾಗ, ಕೇವಲ ಶೇಕಡಾ ೫ ಬಳಕೆದಾರರಿಂದ ಬರುತ್ತದೆ. ಈ ಬಳಕೆದಾರರನ್ನು ಕಳೆದುಕೊಂಡರೆ ಟೆಲಿಕಾಂ ಖಾತೆ ತೀರಾ ಬಡವಾಗುವುದು. ಹಾಗೂ ಟೆಲಿಫೋನ್ ವಿಸ್ತರಣೆಗೆ ಯಾವುದೇ ಬಂಡವಾಳ ಇಲ್ಲದೆ ಇನ್ನಷ್ಟು ಸೊರಗುವುದು. ಟೆಲಿಕಾಂ ಖಾತೆ ಬಡವಾದಂತೆ ಅದು ನುರಿತ, ಯುವಕ ಉತ್ತಮ ತಾಂತ್ರಿಕ ಸಿಬ್ಬಂದಿಯನ್ನು ಕಳಕೊಳ್ಳಬಹುದು. ಈ ಖಾಸಗಿ ಕಂಪನಿಗಳು ಅವರನ್ನು ಸೆಳೆದುಕೊಳ್ಳಬಹುದು. ಇದೂ ಟೆಲಿಕಾಂ ಖಾತೆಯ ಸಾಮರ್ಥ್ಯ ಕುಸಿಯಲು ಕಾರಣವಾಗಬಹುದು. ಇಂತಹ ಪರಿಸ್ಥಿತಿಯನ್ನು ಸ್ಥಳೀಯ ಕೈಗಾರಿಕೆಗಳು ಈಗಾಗಲೇ ಎದುರಿಸುತ್ತಿದೆ. ಕೊನೆಗೆ ದೇಶದ ಟೆಲಿಫೋನ್ ಜಾಲ ಎರಡು ಭಾಗಗಳಾಗಿ ಸ್ಪಷ್ಟವಾಗಿ ವಿಭಾಜಿತವಾಗುವುದಂತೂ ಖಚಿತ. -ಒಂದು ಶೇಕಡಾ 5 ಶ್ರೀಮಂತ ಬಳಕೆದಾರರಿಗೆ ಅತ್ಯಂತ ಉತ್ತಮ ಸೇವೆ ದುಬಾರಿ ಬೆಲೆಯಲ್ಲಿ ಒದಗಿಸುವ ಖಾಸಗೀ ಸೇವಾ ಜಾಲ. ಇನ್ನೊಂದು ಶೇಕಡಾ 95 ಮಧ್ಯಮವರ್ಗದ ಬಳಕೆದಾರರು ಹಾಗೂ ಲಾಭದಾಯಕವಲ್ಲದ ಹಿಂದುಳಿದ ಕ್ಷೇತ್ರಗಳನ್ನು ಹೊಂದಿದ ಟೆಲಿಕಾಂ ಖಾತೆಯ ಜಾಲ. ಈಗ ವಿಸ್ತರಣೆಯ ಅಗತ್ಯ ಹಾಗೂ ಸಾಧ್ಯತೆ ಇರುವುದು ಎರಡನೇ ಕ್ಷೇತ್ರದಲ್ಲಿ ಎಂದು ನೆನಪಿಸಿಕೊಳ್ಳಬೇಕು. ಆದ್ದರಿಂದ ಟೆಲಿಕಾಂ ನೀತಿಯ ಮುಖ್ಯ ಉದ್ದೇಶವೆನ್ನಲಾದ 'ಬೇಕಾದಾಗ ಟೆಲಿಫೋನ್' ಸಾಧ್ಯವಾಗದೆ ಹೋಗಬಹುದು.

ಆದರೆ ನಿಜವಾಗಿ ಟೆಲಿಫೋನ್ ಜಾಲವನ್ನು ವಿಂಗಡಿಸಲು ಆಗುವುದಿಲ್ಲ. ಹಾಗೆ ಜಾಲವನ್ನು ಉತ್ತಮ ಪಡಿಸುವುದೆಂದರೆ ಜಾಲದ ಎಲ್ಲ ವಿಭಾಗಗಳನ್ನು ಉತ್ತಮಗೊಳಿಸುವುದು ಎಂದೇ ಆಗಬೇಕು. ಆದ್ದರಿಂದ ಖಾಸಗಿ ಕ್ಷೇತ್ರ ಮಾತ್ರ ಉತ್ತಮ ಸೇವೆ ಕೊಡಲು ಸಾಧ್ಯವಿಲ್ಲ. ಖಾಸಗಿ ಜಾಲದಿಂದ, ಟೆಲಿಕಾಂ ಖಾತೆಯ ಜಾಲಕ್ಕೆ ಮಾತನಾಡುವ ಅಗತ್ಯ ಬಿದ್ದಾಗ, ಇಡೀ ಜಾಲ ಉತ್ತಮವಾಗಿದಿದ್ದರೆ ಖಾಸಗಿ ಜಾಲದ ಬಳಕೆದಾರರಿಗೂ ಉತ್ತಮ ಸೇವೆ ದೊರಕದು.

ಹೀಗೆ ಟೆಲಿಕಾಂ ಖಾಸಗೀಕರಣ ಟೆಲಿಕಾಂ ಜಾಲದ ವಿಸ್ತರಣೆ, ಬಳಕೆದಾರರಿಗೆ ಉತ್ತಮ ಸೇವೆ, ಸ್ಥಳೀಯ ಕೈಗಾರಿಕೆಗಳಿಗೆ ಉತ್ತೇಜನ, ಬಳಕೆದಾರರಿಗೆ ವಿಧಿಸಲಾಗುವ ದರ, ಟೆಲಿಕಾಂ ಖಾತೆಯ ಉದ್ಯೋಗಿಗಳ ಭವಿಷ್ಯ ಇತ್ಯಾದಿ ಆದ್ದರಿಂದ ಈ ಖಾಸಗೀಕರಣದ ವಿರುದ್ಧ ಯಾವುದೇ ದೃಷ್ಟಿಯಿಂದ ನೋಡಿದರೂ ರಾಷ್ಟ್ರವಿರೋಧಿ ಕ್ರಮ ಟೆಲಿಕಾಂ ಕಾರ್ಮಿಕರು ಎತ್ತಿರುವ ದನಿಗೆ ದೇಶಪ್ರೇಮೀ ಕಾರ್ಮಿಕವರ್ಗ, ಬಳಕೆದಾರರು, ಕೈಗಾರಿಕೆಯ ಬೆಳವಣಿಗೆಯಲ್ಲಿ ಆಸಕ್ತರೆಲ್ಲರೂ ದನಿಗೂಡಿಸಿ ಕಿವುಡರಾದ ದೆಹಲಿಯ ಪ್ರಭುಗಳಿಗೆ ಕೇಳಿಸುವಂತೆ ಮಾಡಬೇಕಾಗಿದೆ. ❖



ಕನಿಷ್ಠ ಕೂಲಿ ಒತ್ತಾಯಿಸಿ ಜೂನ್ 13ರಂದು ಮಂಗಳೂರಿನ ಪುರಭವನದಲ್ಲಿ ಸೌತ್ ಕೆನರಾ ಬೀಡಿ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ಬೀಡಿ ಕಾರ್ಮಿಕರ ಸಮಾವೇಶನ ನಡೆಯಿತು. ಈ ಸಮಾವೇಶದ ಎರಡು ಚಿತ್ರಗಳು - ವೇದಿಕೆ - ಸಮಾವೇಶದಲ್ಲಿ ಪ್ರತಿನಿಧಿಗಳು. ವರದಿ ಹಿಂದಿನ ಸಂಚಿಕೆಯ ೬ನೇ ಪುಟ ನೋಡಿ.



ಲೋಕ ಸಂಚಾರ

ಶರತ್ಚಂದ್ರ

16 ವಿರೋಧಿಗಳನ್ನು ಹತಾಶಗೊಳಿಸಿದ ಕಮ್ಯುನಿಸ್ಟ್ ಪಕ್ಷದ ಆಡಳಿತ

ನೇಪಾಳ ಪಾರ್ಲಿಮೆಂಟು ವಿಸರ್ಜನೆ -ಮರುಚುನಾವಣೆ

ನೇಪಾಳದ ಪಾರ್ಲಿಮೆಂಟನ್ನು ಅಲ್ಲಿನ ರಾಜ ಬೀರೇಂದ್ರ ಪ್ರಧಾನ ಮಂತ್ರಿ ಮನಮೋಹನ ಅಧಿಕಾರಿ ಅವರ ಸಲಹೆ ಮೇರೆಗೆ ವಿಸರ್ಜಿಸಿ ಮರುಚುನಾವಣೆಗೆ ಆಜ್ಞೆ ಮಾಡಿದ್ದಾರೆ. ನವೆಂಬರ್ 23ರಂದು ಮರು ಚುನಾವಣೆ ನಡೆಯಲಿದೆ. ಕಮ್ಯುನಿಸ್ಟ್ ಪಕ್ಷದ ಸರ್ಕಾರ ಹಂಗಾಮಿ ಸರ್ಕಾರವಾಗಿ ಮುಂದುವರೆಯುವುದು.

ಇದಕ್ಕಿಂತ ಮೊದಲು ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ಈ ವಾರ ಪಾರ್ಲಿಮೆಂಟು ಚರ್ಚಿಸಬೇಕಾಗಿತ್ತು. ಎಲ್ಲಾ ವಿರೋಧ ಪಕ್ಷಗಳು-ನೇಪಾಳ ಕಾಂಗ್ರೆಸ್, ರಾಷ್ಟ್ರೀಯ ಪ್ರಜಾತಂತ್ರ ಪಕ್ಷ, ಅವಿಶ್ವಾಸ ನಿರ್ಣಯದ ವಿರುದ್ಧ ಮತ ನೀಡುವುದಾಗಿ ಘೋಷಿಸಿದ್ದರು. ಅಲ್ಲದೆ ಈ ಎರಡೂ ಪಕ್ಷಗಳು ಸೇರಿ ತಮಗೆ ಸರ್ಕಾರ ರಚಿಸಲು ಅವಕಾಶ ಕೊಡಬೇಕೆಂದು ರಾಜ ಬೀರೇಂದ್ರರವರನ್ನು ಕೇಳಿದ್ದರು. 205 ಸದಸ್ಯರ ಪಾರ್ಲಿಮೆಂಟಿನಲ್ಲಿ ಅಲ ಆಳುವ ಪಕ್ಷವಾದ ನೇಪಾಳಿ ಕಮ್ಯುನಿಸ್ಟ್ ಪಕ್ಷ(ಏಕೀಕೃತ ಮಾರ್ಕ್ಸ ವಾದಿ-ಲೆನಿನ್ ವಾದಿ)ಸೇರಿದ್ದರೆ, ನೇಪಾಳ ಕಾಂಗ್ರೆಸ್‌ನ 83 ಸದಸ್ಯರಿದ್ದಾರೆ.

ಕಮ್ಯುನಿಸ್ಟ್ ಸರ್ಕಾರಕ್ಕೆ ಸುಮಾರು ಒಂದು ವರ್ಷವಾಗಿದ್ದು ಸರ್ಕಾರ ಭೂಸುಧಾರಣೆ ಮುಂತಾದ ಜನಕಲ್ಯಾಣ ಕಾರ್ಯಕ್ರಮಗಳನ್ನು ಮುತುವರ್ಜಿಯಿಂದ ನಿರ್ವಹಿಸುತ್ತಿತ್ತು. ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ, ಆರ್ಥಿಕ ಬೆಂಬಲ ನೀಡಿ ಬೆಳವಣಿಗೆ ಕಾರ್ಯಕ್ರಮಗಳ ಮೇಲೆ ಗಮನ ಹರಿಸಿತ್ತು. ಭಾರತ ಮುಂತಾದ ನೆರೆ ಹೊರೆ ದೇಶಗಳ ಜತೆ ಸಂಬಂಧಗಳಲ್ಲಿ ಬಂದಿದ್ದ ಸಮಸ್ಯೆಗಳನ್ನು ಪರಿಹರಿಸಲಾರಂಭಿಸಿತ್ತು. ಆದ್ದರಿಂದ ಪಕ್ಷ ತುಂಬಾ ಜನಪ್ರಿಯವಾಗಿತ್ತು. ಅದೇ ಸಮಯದಲ್ಲಿ ನೇಪಾಳಿ ಕಾಂಗ್ರೆಸ್ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸಲು ಗೊತ್ತಿಲ್ಲದೆ, ಗುಂಪುಗಾರಿಕೆ ಹಾಗೂ ಅದರ ಸರ್ಕಾರದ ಮೇಲೆ ಭ್ರಷ್ಟಾಚಾರದ ಆಪಾದನೆಗಳ ಒತ್ತಡದಲ್ಲಿ ತತ್ತರಿಸುತ್ತಿತ್ತು. ತನ್ನ ಜನಪ್ರಿಯತೆ ಸಂಪೂರ್ಣ ಕಳೆದುಕೊಂಡಿತ್ತು. ನೇಪಾಳ ಅರಸೊತ್ತಿಗೆ ವಿರೋಧಿಸಿ ಪ್ರಜಾತಂತ್ರ ಸ್ಥಾಪಿಸಲು ನಡೆದ ಹೋರಾಟದ ಐಕ್ಯರಂಗ ಮುರಿದು, ಕಮ್ಯುನಿಸ್ಟ್ ಪಕ್ಷವನ್ನು ತನ್ನ ವೈರಿ ಪಕ್ಷ ಎಂಬ ಧೋರಣೆ ನೇಪಾಳಿ ಕಾಂಗ್ರೆಸ್‌ಗೆ ಮುಳುವಾಯಿತು.

ನೇಪಾಳ ಕಾಂಗ್ರೆಸ್ ಹಾಗೂ ರಾಷ್ಟ್ರೀಯ ಪ್ರಜಾತಂತ್ರ ಪಕ್ಷ ರಾಜ ಬೀರೇಂದ್ರರವರ ಕ್ರಮವನ್ನು ಖಂಡಿಸಿವೆ. ಬದಲಿ ಸರ್ಕಾರ ನಡೆಸಲು ಸಾಧ್ಯವಿದ್ದಾಗ ಪಾರ್ಲಿಮೆಂಟು ವಿಸರ್ಜಿಸಿದ್ದು ತಪ್ಪು ಎಂದು ಟೀಕಿಸಿವೆ. ಇದು ರಾಜ ಪುನಃ ತನ್ನ ಬಲ ಪುನಃ ಸ್ಥಾಪಿಸಲು ಸರ್ಕಾರದ ಜತೆ ಶಾಮೀಲಾಗಿ ಪಿತೂರಿ ನಡೆಸಿವೆ ಎಂದು ಆರೋಪಿಸಿವೆ. ಚುನಾವಣೆಯ ಅನಗತ್ಯ ಖರ್ಚು ತಪ್ಪಿಸಬೇಕು ಎಂದು ಪ್ರಚಾರ ಆರಂಭಿಸಿವೆ.

ಕಳೆದ ಚುನಾವಣೆಯ ಮೊದಲು ಇಂತಹುದೇ ಪರಿಸ್ಥಿತಿಯಲ್ಲಿ ನೇಪಾಳಿ ಕಾಂಗ್ರೆಸ್ ಸರ್ಕಾರ ರಾಜ ಬೀರೇಂದ್ರ, ಅವರಿಗೆ ಪಾರ್ಲಿಮೆಂಟು ವಿಸರ್ಜಿಸಿ, ಮರುಚುನಾವಣೆ ನಡೆಸಲು ಸಲಹೆ ಮಾಡಿತ್ತು. ಆಗ ನೇಪಾಳಿ ಕಾಂಗ್ರೆಸ್‌ನ ಭಿನ್ನಮತೀಯರು ಸರ್ಕಾರದ ವಿರುದ್ಧ ಮತ ನೀಡಿ, ಕಮ್ಯುನಿಸ್ಟ್ ಪಕ್ಷದ ಜತೆ ಸರ್ಕಾರ ರಚಿಸುವ ಸಂಭವವಿತ್ತು. ನೇಪಾಳಿ ಸಂವಿಧಾನದ ಪ್ರಕಾರ ರಾಜ, ಪ್ರಧಾನಮಂತ್ರಿಯ ಸಲಹೆ ಮೇರೆಗೆ ನಡೆಯಬೇಕು. ಪಾರ್ಲಿಮೆಂಟು ವಿಸರ್ಜಿಸಲು ಪ್ರಧಾನಿಗೆ ಶಿಫಾರಸು ಮಾಡಲು ಅಧಿಕಾರ ಕೊಟ್ಟಿದೆ. ರಾಜ ಬೀರೇಂದ್ರ ಸಂವಿಧಾನದ ಪ್ರಕಾರ ನಡೆದಿದ್ದಾರೆ. ಪಿತೂರಿಯ ಮಾತು ನೇಪಾಳೀ ಕಾಂಗ್ರೆಸ್ ಇಬ್ಬಗೆ ನೀತಿ ಎಂದು ಪ್ರಧಾನ ಮಂತ್ರಿ ನೇಪಾಳಿ ಕಾಂಗ್ರೆಸ್ ಆಪಾದನೆಗೆ ಉತ್ತರ ನೀಡಿದ್ದಾರೆ. ಕಮ್ಯುನಿಸ್ಟ್ ಪಕ್ಷ ಭರದಿಂದ ಚುನಾವಣೆಗೆ ಸಿದ್ಧತೆ ನಡೆಸುತ್ತಿದ್ದು ಈ ಬಾರಿ ನಿಚ್ಚಳ ಬಹುಮತದಿಂದ ಸರ್ಕಾರ ರಚಿಸುವುದು ಎಂದಿದ್ದಾರೆ. ಕಳೆದ ಬಾರಿಯೇ ನೇಪಾಳೀ ಕಾಂಗ್ರೆಸ್ ಕುತಂತ್ರ, ಕಾನೂನುಬಾಹಿರ ಕ್ರಮಗಳಿಲ್ಲದಿದ್ದರೆ ತಮ್ಮ ಪಕ್ಷ ಬಹುಮತ ಪಡೆಯುತ್ತಿತ್ತು ಎಂದಿದ್ದಾರೆ.

ಅಲ್ಲದೆ ಈ ಬಿಕ್ಕಟ್ಟನ್ನು ಸೃಷ್ಟಿಸಿದ್ದು ನೇಪಾಳಿ ಕಾಂಗ್ರೆಸ್. ಈ ಬಾರಿಯ ಬಜೆಟ್ ಮಂಡಿಸಲು ಬಿಟ್ಟರೆ ಸರ್ಕಾರದ ಬಡವರ-ಪರ ನೀತಿ ಸ್ಪಷ್ಟವಾಗಿ ಗೊತ್ತಾಗಿ ಇನ್ನಷ್ಟು ಅದು ಜನಪ್ರಿಯವಾಗಬಹುದು ಎಂಬ ಭಯ ನೇಪಾಳಿ ಕಾಂಗ್ರೆಸ್‌ಗಿತ್ತು ಎಂದಿದ್ದಾರೆ.

ರಾಜ ಬೀರೇಂದ್ರ ಕಮ್ಯುನಿಸ್ಟ್ ಪಕ್ಷದ ಮಿತ್ರನೇನಲ್ಲ. ಆದರೆ ಕಮ್ಯುನಿಸ್ಟ್ ಪಕ್ಷಕ್ಕೆ ಇರುವ ಜನಬೆಂಬಲ ಪೂರ್ಣ ಅರಿವು ಆತನಿಗೆ ಇದ್ದಂತಿದೆ. ನೇಪಾಳಿ ಕಾಂಗ್ರೆಸ್-ರಾಷ್ಟ್ರೀಯ ಪ್ರಜಾತಂತ್ರ ಪಕ್ಷದ ಸಮಿಶ್ರ ಸರ್ಕಾರಕ್ಕೆ ಅವಕಾಶ ಮಾಡಿಕೊಡುವುದು ಆತನಿಗೆ ಇಷ್ಟವೇ. ಆದರೆ ಸಂವಿಧಾನಕ್ಕೆ ಬದ್ಧರಾಗಿರಬೇಕಾದರೆ ಆತ ಪ್ರಧಾನ ಮಂತ್ರಿ ಶಿಫಾರಸು ಕೇಳಲೇಬೇಕು. ಹಾಗೇನಾದರೂ ಸಂವಿಧಾನಕ್ಕೆ ವಿರುದ್ಧವಾಗಿ ನೇಪಾಳೀ ಕಾಂಗ್ರೆಸ್ ಸರ್ಕಾರ ರಚಿಸಲು ಅವಕಾಶಕೊಟ್ಟರೆ ಕಮ್ಯುನಿಸ್ಟ್ ಪಕ್ಷ ಬೀದಿಗಿಳಿದು ಆ ಸರ್ಕಾರ ಆಡಳಿತ ನಡೆಸದಂತೆ ಮಾಡುವ ಜನಬೆಂಬಲ ಇದೆ ಎಂಬ ಅರಿವಿನಿಂದ ರಾಜ ಬೀರೇಂದ್ರ ಈ ಕ್ರಮಕೈಗೊಂಡಿರಬೇಕು.

ಜೂನ್ 14 ರಂದು ನೇಪಾಳ ಕಮ್ಯುನಿಸ್ಟ್ ಪಕ್ಷ ಸಂಘಟಿಸಿದ ಬೃಹತ್ ರ್ಯಾಲಿಯಲ್ಲಿ



ಚೆಚೆನ್ಯಾ ಗೆರಿಲ್ಲಾಗಳ ಕೈಯಲ್ಲಿ ಸಾವಿರ ರಶ್ಯನ್ ಒತ್ತೆಯಾಳುಗಳು

ರಶ್ಯ-ಚೆಚೆನ್ಯಾ ಘರ್ಷಣೆಯ ಸ್ವರೂಪ ಬದಲಾಗಿ ಗೆರಿಲ್ಲಾ ಹೋರಾಟ ಆರಂಭವಾಗಿದೆ. ಚೆಚೆನ್ಯಾದಲ್ಲಿ ರಶ್ಯಾದ ಪಡೆಗಳ ದಾಳಿ ತಡೆಯಲಾರದೆ ಹೆಚ್ಚು ಕಡಿಮೆ ಸೋತಿರುವ ಚೆಚೆನ್ಯ ಪಡೆಗಳು ಭಯೋತ್ಪಾದಕರ ಕೃತ್ಯಕ್ಕೆ ಇಳಿದಿವೆ. ಇದು ಅಂತಹ ಅನಿರೀಕ್ಷಿತ ಬೆಳವಣಿಗೆ ಏನಲ್ಲ.

ದಕ್ಷಿಣ ರಶ್ಯಾದ ಬುಡೆನೊವ್ಸ್ಕ್ ಎಂಬ ಪಟ್ಟಣಕ್ಕೆ ಸುಮಾರು ನೂರು ಚೆಚೆನ್ಯಾ ಸಶಸ್ತ್ರ ಗೆರಿಲ್ಲಾ ಪಡೆಗಳು ನುಗ್ಗಿ ಭಾರೀ ಹಿಂಸಾಚಾರ ನಡೆಸಿದ್ದಾರೆ. ಸ್ಥಳೀಯ ಸರ್ಕಾರದ ಅಧಿಕಾರಿಗಳು ಹಲವು ನಾಗರಿಕರು ಹಾಗೂ ಒಂದು ಆಸ್ಪತ್ರೆಯ ರೋಗಿಗಳು ಸೇರಿದಂತೆ ಸುಮಾರು ಸಾವಿರ ರಶ್ಯನರನ್ನು ಒತ್ತೆಯಾಳಾಗಿ ಇಟ್ಟುಕೊಂಡಿದ್ದಾರೆ. ಇವರಲ್ಲಿ ಮಹಿಳೆಯರು ಮಕ್ಕಳು ಸೇರಿದ್ದಾರೆ.

ರಶ್ಯನ್ ಸರ್ಕಾರ ಯಥಾಪ್ರಕಾರ ಈ ಬಿಕ್ಕಟ್ಟನ್ನು ಚಾಕಚಕ್ಯತೆಯಿಂದ ನಿರ್ವಹಿಸದೆ ಬರಿಯ ಭುಜಬಲದಿಂದ ಪರಿಹರಿಸಲು ಪ್ರಯತ್ನಿಸುತ್ತಿದೆ. ಕಮಾಂಡೋ ಬಲಗಳು ಆಸ್ಪತ್ರೆಯನ್ನು ಸುತ್ತುವರಿದು ಗೆರಿಲ್ಲಾ ಮೇಲೆ ತೀವ್ರ ಧಾಳಿ ನಡೆಸಿದ್ದಾರೆ. ಭಾರಿ ಗುಂಡಿನ ಚಕಮಕಿ ನಡೆದಿದೆ. ಕೆಲವು ವರದಿಗಳ ಪ್ರಕಾರ ತಾತ್ಕಾಲಿಕ ಕದನವಿರಾಮದಲ್ಲಿ ಹೆಂಗಸರು ಮಕ್ಕಳನ್ನು ಮಾತ್ರ ಗೆರಿಲ್ಲಾಗಳು ಬಿಡುಗಡೆ ಮಾಡಿದ್ದಾರೆ ಎನ್ನಲಾಗಿದೆ. ಒಂದು ಕಡೆ ರಶ್ಯನ್ ಪ್ರಧಾನಿ, ರಕ್ಷಣಾ ಮಂತ್ರಿ, ಆಂತರಿಕ ಭದ್ರತಾ ಮಂತ್ರಿ, ಮಾತುಕತೆ ಮೂಲಕ ಈ ಬಿಕ್ಕಟ್ಟನ್ನು ಬಗೆಹರಿಸುವುದಾಗಿ ಹೇಳಿದ್ದಾರೆ. ಇನ್ನೊಂದು ಕಡೆ ಆಸ್ಪತ್ರೆಯ ಸುತ್ತಮುತ್ತ ಭಾರಿ ಕದನ ನಡೆದಿದೆ. ಯೆಲ್ಟ್‌ಸಿನ್ ಸರ್ಕಾರದ ಅರಾಜಕತೆಯ ಪೂರ್ಣ ಲಾಭವನ್ನು ಚೆಚೆನ್ಯಾ ಗೆರಿಲ್ಲಾಗಳು ಪಡೆಯುತ್ತಿದ್ದಾರೆ. ಚೆಚೆನ್ಯಾ ಘರ್ಷಣೆಯನ್ನು ರಶ್ಯನ್ ಗಡಿಯೊಳಗೆ ತೆಗೆದುಕೊಂಡು ಹೋಗುವ, ಇದರಲ್ಲಿ ರಶ್ಯನಾ ನಾಗರಿಕರನ್ನು ಸಿಲುಕಿಸಿ ಅದನ್ನು ರಾಷ್ಟ್ರೀಯ ಬಿಕ್ಕಟ್ಟು ಆಗುವಂತೆ ಮಾಡುವ ಹವಣಿಕೆ ಅವರಿಗೆ ಇದ್ದಂತಿದೆ.

ಇಂತಹ ಇನ್ನೂ ಭಯೋತ್ಪಾದಕ ದಾಳಿ ನಡೆಯಬಹುದು ಎಂದು ರಶ್ಯಾದಾದ್ಯಂತ ಪ್ರಮುಖ ಸಂಘಟನೆಗಳಲ್ಲಿ ಭದ್ರತೆ ಬಿಗಿಗೊಳಿಸಲಾಗಿದೆ. ಚೆಚೆನ್ಯಾ ಬಿಕ್ಕಟ್ಟು ಯೆಲ್ಟ್‌ಸಿನ್ ಸರ್ಕಾರಕ್ಕೆ ದೊಡ್ಡ ತಲೆ ನೋವು ಆಗುವ ಸಾಧ್ಯತೆ ಇದೆ. ಕೆನಡಾದಲ್ಲಿ ಸೇರಿದ್ದ ಜಿ-7 ಚೆಚೆನ್ಯಾ ನೀತಿಗಾಗಿ ಯೆಲ್ಟ್‌ಸಿನ್ ಸರಕಾರವನ್ನು ತೀವ್ರವಾಗಿ ಖಂಡಿಸಿದೆ.

ಅಮೇರಿಕದಿಂದ ಚೀನಾ ರಾಯಭಾರಿ ವಾಪಸು

ಚೀನಾ ಸರ್ಕಾರ ಅಮೇರಿಕದಿಂದ ತನ್ನ ರಾಯಭಾರಿಯನ್ನು ವಾಪಸು ಪಡೆದಿದೆ. ಈಗಿನ ಚೀನಾ-ಅಮೇರಿಕಾ ಸಂಬಂಧಗಳ ಬಗ್ಗೆ ವರದಿ ಚರ್ಚಿಸಲು ಅವರನ್ನು ವಾಪಸು ಕರೆಸಲಾಗಿದೆ ಎಂದು ಚೀನಿ ಅಧಿಕೃತ ಪ್ರಕಟಣೆ ತಿಳಿಸಿದೆ. ಚೀನಾ ರಾಯಭಾರಿಯನ್ನು ಶಾಶ್ವತವಾಗಿ ವಾಪಸು ಕರೆಯಲಾಗಿದೆಯೆ, ಚೀನಾ-ಅಮೇರಿಕ ರಾಯಭಾರ ಸಂಬಂಧವನ್ನು ಕೆಳಗಿನ ಮಟ್ಟಕ್ಕೆ ಇಳಿಸಲಾಗುತ್ತಿದೆಯೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಅಧಿಕೃತವಾಗಿ ಹೇಳಲಾಗಿಲ್ಲದಿದ್ದರೂ, ಈ ಕ್ರಮ ತೈವಾನ್ ಅಧ್ಯಕ್ಷರ ಅಮೇರಿಕ ಭೇಟಿಗೆ ಅನುವು ಮಾಡಿಕೊಟ್ಟದ್ದಕ್ಕೆ ಪ್ರತಿಭಟನೆ ಎನ್ನಲಾಗಿದೆ. ತೈವಾನ್ ಅಧ್ಯಕ್ಷರಿಗೆ ಅಮೇರಿಕ ಭೇಟಿಗೆ ಅನುಮತಿ ಕೊಡಬಾರದೆಂದು ಹಿಂದೆ ಚೀನಾ ಒತ್ತಾಯಿಸಿತ್ತು. ಅದೇ ರೀತಿ ತೈವಾನ್ ಗೆ ಮಿಲಿಟರಿ ಮಾರಾಟ ನಡೆಸಬಾರದು ಎಂದು ಒತ್ತಾಯಿಸಿತ್ತು. ಇವೆರಡನ್ನು ಅಮೇರಿಕ ನಿರ್ಲಕ್ಷಿಸಿತ್ತು. ಇದಕ್ಕೆ ಪ್ರತಿಭಟನೆಯಾಗಿ, ಅಮೇರಿಕಕ್ಕೆ ಚೀನಾದ ಮಿಲಿಟರಿ ಪ್ರತಿನಿಧಿ ಮಂಡಳದ ಭೇಟಿಯನ್ನು ಚೀನಾ ಈ ಮೊದಲು ರದ್ದು ಮಾಡಿತ್ತು.

ವಾಣಿಜ್ಯ ಸಂಬಂಧಗಳಲ್ಲೂ ಚೀನಾ-ಅಮೇರಿಕ ಸಂಬಂಧ ಇತ್ತೀಚೆಗೆ ಹದಗೆಡಲಾರಂಭಿಸಿತ್ತು. ಅಮೇರಿಕ ಇತರರಿಗೆ ಮುಕ್ತ ವ್ಯಾಪಾರ ಬಗ್ಗೆ ಉಪದೇಶ ಮಾಡುತ್ತಾ, ತನ್ನ ಕೈಗಾರಿಕೆ ವಾಣಿಜ್ಯಕ್ಕೆ ವಿಪರೀತ ರಕ್ಷಣೆ ಮಾಡುವ ನೀತಿಯನ್ನು ತೀವ್ರವಾಗಿ ಟೀಕಿಸಿತ್ತು.

ಅಮೇರಿಕ ಚೀನಾದ ಈ ತೀವ್ರ ಕ್ರಮಕ್ಕೆ ಅಷ್ಟು ತೀವ್ರವಾಗಿ ಪ್ರತಿಕ್ರಿಯಿಸಿಲ್ಲ.

ಪಾಕಿಸ್ತಾನದ 'ತಾಲಿಬಾನ್' ಆಟ ವಿಫಲ

ಆಫ್‌ಘಾನಿಸ್ತಾನದ ಪ್ರಸಕ್ತ ಸರ್ಕಾರ ಉರುಳಿಸಿ, ಅಲ್ಲಿ ತನ್ನ ಕೈಗೊಂಬೆ ಸರ್ಕಾರ ರಚಿಸುವ ಪಾಕಿಸ್ತಾನದ 'ತಾಲಿಬಾನ್' ಆಟ ಪೂರ್ಣ ವಿಫಲವಾಗಿ ಅದಕ್ಕೆ ಮುಖಭಂಗವಾಗಿದೆ. ಅಧ್ಯಕ್ಷ ರಬ್ಬಾನಿ ಸರ್ಕಾರದ ವಿರುದ್ಧ 'ತಾಲಿಬಾನ್' ಎಂಬ ಮುಸ್ಲಿಂ ಧರ್ಮಗುರುಗಳ, ಅವರ ಶಿಕ್ಷಕರ ಇಸ್ಲಾಮಿಕ್ ಪಡೆ 'ತಾಲಿಬಾನ್'ನ್ನು ರಚಿಸಿ ಗೆರಿಲ್ಲಾ ಹೋರಾಟದಿಂದ ಸರ್ಕಾರ ಉರುಳಿಸುವುದು ಪಾಕಿಸ್ತಾನದ ಯೋಜನೆಯಾಗಿತ್ತು. ಇದಕ್ಕಾಗಿ 'ತಾಲಿಬಾನ್' ಶುದ್ಧ ಉತ್ತಮ ಚಾರಿತ್ರ್ಯವುಳ್ಳ ಧರ್ಮಗುರುಗಳು ಎಂದೆಲ್ಲಾ ಪ್ರಚಾರ ಮಾಡಿತ್ತು. 'ತಾಲಿಬಾನ್' ಗೆರಿಲ್ಲಾಗಳು ಹಿಂದೆ ಪಾಕಿಸ್ತಾನದ ಬೆಂಬಲ ಪಡೆದಿದ್ದ ಹೆಕ್‌ಮತಿಯಾರ್‌ನ ಗೆರಿಲ್ಲಾಗಳನ್ನು ವೇಗವಾಗಿ ಸೋಲಿಸಲು ಸಾಧ್ಯವಾದರೂ, ಕಾಬೂಲ್ ಬಳಿ ಸರ್ಕಾರಿ ಪಡೆಗಳಿಂದ ತೀವ್ರವಾದ ದಾಳಿಗೆ ಒಳಗಾಗಿ ಸೋತರು. ಹಿಂದೆ ಅವರ ನಿಯ್ಯಂತ್ರಣದಲ್ಲಿದ್ದ ಪಶ್ಚಿಮ ಅಫಘಾನಿಸ್ತಾನದ ಪ್ರದೇಶಗಳನ್ನು ಅದು ಕಳೆದುಕೊಂಡಿದೆ. ಜಲಾಲ್‌ಬಾದ್‌ನಿಂದ ತನ್ನ ರಾಯಭಾರಿಯನ್ನು ಕಾಬೂಲ್‌ಗೆ ಸ್ಥಳಾಂತರಿಸುವ ಪಾಕಿಸ್ತಾನ ತನ್ನ ಸೋಲನ್ನು ಒಪ್ಪಿಕೊಂಡಿದೆ. ಅಧ್ಯಕ್ಷ ರಬ್ಬಾನಿ ಸರ್ಕಾರ ನೆರವು ತುರ್ಕಮಾನಿಸ್ತಾನ, ಇರಾನ್ ಗಳ ಸರ್ಕಾರದೊಂದಿಗೆ ಉತ್ತಮ ಸಂಬಂಧ ಹೊಂದುವ ಮೂಲಕ ತನ್ನ ಸರ್ಕಾರವನ್ನು ಬಲಗೊಳಿಸಿದ್ದಾರೆ. ಇತ್ತೀಚಿನ ಭಾರತ-ಇರಾನ್ ತುರ್ಕಮಾನಿಸ್ತಾನ ಸಹಕಾರ ಯೋಜನೆಗೆ ಅಪಘಾನಿಸ್ತಾನವೂ ಸೇರುವ ಸಂಭವವಿದೆ. ಇರಾನ್ ಮೂಲಕ ಅರೇಬಿಯನ್ ಸಮುದ್ರಕ್ಕೆ ವಾಣಿಜ್ಯ ದಾರಿ ಸಿಗುವ ಮೂಲಕ, ಅಫಘಾನಿಸ್ತಾನ, ಪಾಕಿಸ್ತಾನದ ರಹದಾರಿ ವಾಣಿಜ್ಯ ನಿಲ್ಲಿಸುವ ಬೆದರಿಕೆಗೆ ಬಗ್ಗಬೇಕಾಗಿಲ್ಲ. ಪಾಕಿಸ್ತಾನದ ಬಂದರುಗಳ ಮೂಲಕ ನಡೆಯುತ್ತಿದ್ದ ಅಪಘಾನ್ ವ್ಯಾಪಾರವನ್ನು ಪಾಕಿಸ್ತಾನ ನಿಲ್ಲಿಸಿತ್ತು.

ಅಣ್ವಸ್ತ್ರ ಪರೀಕ್ಷಣೆ ಪುನರಾಂಭಕ್ಕೆ ಫ್ರೆಂಚ್ ನಿರ್ಧಾರ

ಅಣ್ವಸ್ತ್ರ ಪರೀಕ್ಷಣೆಯನ್ನು ಫ್ರಾನ್ಸ್ ಒಡೆತನದಲ್ಲಿರುವ ಪೆಸಿಫಿಕ್ ದ್ವೀಪಗಳಲ್ಲಿ ಪುನಃ ಆರಂಭಿಸಲು ಫ್ರೆಂಚ್ ಸರ್ಕಾರ ನಿರ್ಧರಿಸಿದೆ. ಅಧ್ಯಕ್ಷ ಚಿರಾಕ್ ಬಲಪಂಥೀಯ ಸರಕಾರದ ಮೊದಲ ಪ್ರಮುಖ ನಿರ್ಧಾರವಿದು. ಅಣ್ವಸ್ತ್ರ ಪ್ರಸರಣಾ ನಿಷೇಧ ಒಪ್ಪಂದ ಅನಿರ್ದಿಷ್ಟವಾಗಿ ಮುಂದುವರಿಸಿದ ಬೆನ್ನಲ್ಲೇ ಈ ಫ್ರೆಂಚ್ ನಿರ್ಧಾರ ಸಾಮ್ರಾಜ್ಯಶಾಹಿ ಧೋರಣೆಯನ್ನು ಎಲ್ಲರಿಗೂ ಸ್ಪಷ್ಟಪಡಿಸಿದೆ. ತಮಾಷೆಯೆಂದರೆ ಅಮೇರಿಕನ್ ಅಧ್ಯಕ್ಷ ಕ್ಲಿಂಟನ್‌ರೇ ಈ ನಿರ್ಧಾರವನ್ನು ಟೀಕಿಸಿದ್ದಾರೆ.

ನ್ಯೂಝಿಲೆಂಡ್ ಪ್ರಧಾನಿ, ಫ್ರೆಂಚ್ ಸರ್ಕಾರದ ಈ ನೀತಿಯನ್ನು ವಿರೋಧವಾಗಿ ಪ್ರತಿಭಟನೆಯಾಗಿ ಫ್ರಾನ್ಸ್ ಜತೆ ಎಲ್ಲಾ ಮಿಲಿಟರಿ ಸಂಬಂಧಗಳನ್ನು ಕಡಿಯಲು ನಿರ್ಧರಿಸಿದೆ. ಫ್ರೆಂಚ್ ಒಡೆತನದ ದ್ವೀಪಗಳು ಆಸ್ಟ್ರೇಲಿಯಾ ನ್ಯೂಝಿಲೆಂಡ್ ಹತ್ತಿರ ಇವೆ. ಈ ಪ್ರದೇಶದಲ್ಲಿ ಅಣ್ವಸ್ತ್ರ ಪರೀಕ್ಷಣೆ ತೀವ್ರ ವಿರೋಧವಿದೆ.

ಮಗುವೊಂದು ದುಡಿಮೆ ಮಾಡುತ್ತಿದೆಯೆಂದರೆ....

ಪುಟ 5 ರಿಂದ

ಈ ಕೆಲಸವನ್ನು ಆಗಸ್ಟ್-ಸೆಪ್ಟೆಂಬರ್ 1995ರಲ್ಲಿ ಕೈಗೆತ್ತಿಕೊಂಡು ಯೋಜನೆಯಂತೆ ಮುಗಿಸಬೇಕೆಂದಿದ್ದೇವೆ.

ಸಿಐಟಿಯು ವಿವಿಧ ಉದ್ದಿಮೆಗಳ ಬಗ್ಗೆ ಬ್ರೋಶರ್‌ಗಳನ್ನು ಹೊರತರಲಿದೆ. ಅಲ್ಲದೆ ಕರಪತ್ರಗಳು, ಪೋಸ್ಟರುಗಳು, ವಿಡಿಯೋ ಫಿಲ್ಮ್ ಇತ್ಯಾದಿಗಳನ್ನು ಹೊರತರಲಿದೆ. ಅಕ್ಟೋಬರ್ 1995 ರಿಂದ ಮಾರ್ಚ್ 1996ರ ವರೆಗಿನ ಪ್ರಚಾರ ಸಮಯದಲ್ಲಿ ಇವನ್ನೆಲ್ಲಾ ಬಳಸಲಾಗುವುದು.

ಪ್ರತಿಯೊಂದು ತರಬೇತಿ ಪಡೆದ ಸಂಘ ತಿಂಗಳಿಗೆ 2 ಪ್ರಚಾರ ಕಾರ್ಯ ನಡೆಸಬೇಕು ಅಂದರೆ ಈ ಆರು ತಿಂಗಳಲ್ಲಿ ನಮ್ಮ ರಾಜ್ಯದಲ್ಲಿ 600 ದಿನಗಳ ಪ್ರಚಾರ ನಡೆದಂತಾಗುತ್ತದೆ. ಕಾರ್ಯಕರ್ತರ ತರಬೇತಿ ಹಾಗೂ ಪ್ರಚಾರದ ಮೂಲಕ ಈ ರೀತಿ ನಾವು ಲಕ್ಷಾಂತರ ಜನರನ್ನು ತಲುಪಬಹುದು.

ಈ ಕಾರ್ಯಕ್ರಮದಲ್ಲಿರುವ ಪಜೆಗ...

...ಳನ್ನು ಅರ್ಥಮಾಡಿಕೊಳ್ಳೋಣ. 14 ವರ್ಷದ ಕೆಳಗಿನ ಮಕ್ಕಳನ್ನು ಅಪಾಯಕಾರಿ ಉದ್ಯೋಗಗಳಲ್ಲಿ ದುಡಿಸುವುದಕ್ಕೆ ನಿಷೇಧವಿದೆ. ಮಕ್ಕಳು ದುಡಿಯುತ್ತಿದ್ದಾರೆಂದರೆ ವಯಸ್ಕ ಕಾರ್ಮಿಕರಿಗೆ ಆ ಕೆಲಸ ಸಿಗುವುದಿಲ್ಲ ಎಂದರ್ಥ. ವಯಸ್ಕ ಕಾರ್ಮಿಕರಿಗಿಂತ ಬಾಲ ಕಾರ್ಮಿಕರಿಗೆ ಬಹಳ ಕಮ್ಮಿ ಕೂಲಿ ಕೊಡಲಾಗುತ್ತದೆ. ಅವರನ್ನು ಅನಾರೋಗ್ಯಕರ ಪರಿಸ್ಥಿತಿಯಲ್ಲಿ ಹೆಚ್ಚು ಸಮಯ ದುಡಿಸಿಕೊಳ್ಳಲಾಗುತ್ತದೆ.

ಮೊದಲನೆಯದಾಗಿ ಮಕ್ಕಳ ಕೋಮಲ ವಯಸ್ಸನ್ನು ದುಡಿಮೆಗಾಗಿ ಶೋಷಿಸಲಾಗದು. ಅವರಿನ್ನೂ ಬೆಳೆಯುತ್ತಿರುತ್ತಾರೆ. ಅವರ ದೇಹಸ್ಥಿತಿ ಕೆಲಸಕ್ಕೆ ಸೂಕ್ತವಾಗಿರುವುದಿಲ್ಲ. ಕೆಲವು ನಾಜೂಕಿನ ಕೆಲಸಗಳಿಗೆ ಉದಾಹರಣೆಗೆ ರತ್ನಗಂಬಳಿಯ ನೇಯ್ಗೆಯಲ್ಲಿ ಗಂಟು ಹಾಕಲು ಮಕ್ಕಳ "ನಾಜೂಕು ಬೆರಳುಗಳು" ಬೇಕು ಎಂಬ ಒಂದು ಸಿದ್ಧಾಂತವಿದೆ. ಇಂತಹ ಸಿದ್ಧಾಂತಗಳೆಲ್ಲಾ ಶುದ್ಧ ಬೊಗಳೆ.

ಮಗುವೊಂದು ದುಡಿಮೆ ಮಾಡುತ್ತಿದೆಯೆಂದರೆ ಅದು ಶಾಲೆಯಿಂದ ದೂರವಿದೆಯೆಂದೇ ಅರ್ಥ. ಬಾಲದುಡಿಮೆಯ ನಿರ್ಮೂಲನ ಎಂದರೆ ಈ ಮಕ್ಕಳನ್ನು ಶಾಲೆಗೆ ಕಳಿಸಲಾಗುವುದು ಎಂದರ್ಥ, ಅವರ ಉದ್ಯೋಗ ನಷ್ಟಕ್ಕೆ ಪರಿಹಾರವೂ ಸೇರಿದಂತೆ ಅವರೆಲ್ಲಾ ಅಗತ್ಯಗಳನ್ನು ಪೂರೈಸಲಾಗುವುದು ಎಂದರ್ಥ. ಇದನ್ನು ನಾವು ಮುಂದಿನ ಘಟ್ಟದಲ್ಲಿ ಮಾತ್ರ ಕೈಗೆತ್ತಿಕೊಳ್ಳಲು ಸಾಧ್ಯ. ಆದರೆ ಸಂಪೂರ್ಣ ಸಾಕ್ಷರತೆ, ಜ್ಞಾನ ವಿಜ್ಞಾನ ಸಮಿತಿ (ಬಿ.ಜಿ.ವಿ.ಜೆ.ಎಸ್.) ಇತ್ಯಾದಿಗಳೊಂದಿಗೆ ಅಸಾಂಪ್ರದಾಯಿಕ ಶಿಕ್ಷಣದ ಸಾಧ್ಯತೆಯಿದೆ. ಆದ್ದರಿಂದ ಮಕ್ಕಳನ್ನು ದುಡಿಮೆಯಿಂದ ಮುಕ್ತಿಗೊಳಿಸುವ ಪ್ರಯತ್ನ ಇತರ ಸಾಮಾಜಿಕ ಕಾರ್ಯಕರ್ತರನ್ನು, ಮಹಿಳಾ, ರೈತ, ಕೃಷಿ ಕೂಲಿಕಾರ ರಂಗದ ಕಾರ್ಯಕರ್ತರನ್ನು ಶಿಕ್ಷಣ ತಜ್ಞರು ಮುಂತಾದವರನ್ನೂ ಒಳಗೊಳ್ಳುತ್ತದೆ.

ಮಗುವೊಂದು ದುಡಿಮೆ ಮಾಡುತ್ತಿದೆಯೆಂದರೆ ಒಂದು ಕುಟುಂಬ ಸಂಕಟದಲ್ಲಿದೆಯೆಂದರ್ಥ. ಸ್ವತಃ ಕಷ್ಟದಲ್ಲದಿದ್ದರೆ ಯಾವ ತಂದೆ-ತಾಯಿಯೂ ಮಕ್ಕಳನ್ನು ದುಡಿಮೆಗೆ ಹಚ್ಚುವುದಿಲ್ಲ, ಆದ್ದರಿಂದ ಬಾಲದುಡಿಮೆಯ ಸಮಸ್ಯೆಯನ್ನು ಎದುರಿಸಬೇಕಾದರೆ ಪ್ರತಿಯೊಂದು ಮಗುವನ್ನು ಕೆಲಸಕ್ಕೆ ಹಚ್ಚಬೇಕಾದ ಪರಿಸ್ಥಿತಿಗಳನ್ನು ಗುರುತಿಸುವುದು ಅತ್ಯಗತ್ಯ. ಇಷ್ಟೇ ಅಲ್ಲ ಬಾಲಕಾರ್ಮಿಕರಿರುವ ಕುಟುಂಬಗಳು ತಮಗೆ ಸಾಕಷ್ಟು ಆದಾಯಗಳಿಸಲಾಗುವಂತೆ ಉದ್ಯೋಗಾವಕಾಶ, ಅವಶ್ಯಕತೆ ಆಧಾರಿತ ಕೂಲಿ, ಭೂ ಸುಧಾರಣೆ ಹಾಗೂ ಇತರ ಬೆಂಬಲ ಕ್ರಮಗಳ ಬಗ್ಗೆಯೂ ಯೋಚನೆಗಳನ್ನು ರೂಪಿಸಬೇಕಾಗುತ್ತದೆ.

ಮಗುವೊಂದು ದುಡಿಮೆ ಮಾಡುತ್ತಿದೆಯೆಂದರೆ ಅದು ಒಂದು ರೋಗಗ್ರಸ್ತ ಸಮಾಜದ ದ್ಯೋತಕ. ಆದ್ದರಿಂದ ಬಾಲ ಕಾರ್ಮಿಕರನ್ನು ಮುಕ್ತಗೊಳಿಸುವ ಪ್ರಯತ್ನದಲ್ಲಿ ನಾವು ಪ್ರತಿಯೊಂದು ಸಾಮಾಜಿಕ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ.

ದೌರ್ಜನ್ಯ ನಿವಾರಿಸಿಕೊಳ್ಳಬೇಕು

ಬಾಲ ಕಾರ್ಮಿಕರ ಕುರಿತ ಅಖಿಲ ಭಾರತ ವರ್ಕ್‌ಶಾಪ್‌ನಲ್ಲಿ ಬಾಲ ಕಾರ್ಮಿಕರ ಸಂಘ ರಚಿಸುವಲ್ಲಿ ಸೂಚನೆ ಬಂತು. ಸಿಐಟಿಯು ಈ ಸೂಚನೆಯನ್ನು ಸ್ವೀಕರಿಸಲು ಸಾಧ್ಯವಿಲ್ಲ. ಮಕ್ಕಳಿಗೆಂದು ಪ್ರತ್ಯೇಕವಾಗಿಯೇ ಯೂನಿಯನ್ ಗಳನ್ನು ಸಂಘಟಿಸಲು ಸಾಧ್ಯವಿಲ್ಲ, ಹಾಗೆ ಮಾಡುವುದೂ ಸಲ್ಲ, ಎಲ್ಲೆಲ್ಲಿ ಬಾಲಕಾರ್ಮಿಕರಿದ್ದಾರೋ ಅವರನ್ನು ಅಲ್ಲಿರುವ ಯೂನಿಯನ್‌ಗಳಿಗೆ ತಗೊಳ್ಳಬೇಕು. ಸಿಐಟಿಯು ದುಡಿಯುವ ಮಹಿಳೆಯ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತದೆಯೇ -ಹೊರತು ಮಹಿಳೆಯರಿಗೆ ಪ್ರತ್ಯೇಕ ಯೂನಿಯನ್‌ನ ವಿಚಾರವನ್ನು ಒಪ್ಪದಿರುವಂತೆ ಬಾಲ ಕಾರ್ಮಿಕರ ಪ್ರಶ್ನೆಯನ್ನು ಕೈಗೆತ್ತಿಕೊಂಡು ಈ ದಿಕ್ಕಿನಲ್ಲಿ ಕಾರ್ಮಿಕ ಆಂದೋಲನದಲ್ಲಿರುವ ದೌರ್ಬಲ್ಯವನ್ನು ನಿವಾರಿಸಿಕೊಳ್ಳಬೇಕು.

ಇದರ ಮೊದಲ ಹೆಜ್ಜೆಯಾಗಿ ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಬೀಡಿ, ಹೋಟೆಲ್ ಕೈಮಗ್ಗ ಹಾಗೂ ಅಗರಬತ್ತಿ ವಲಯದ ಪ್ರತಿಯೊಂದು ಸಂಘವೂ ತಲಾ 30 ಪ್ರಮುಖ ಕಾರ್ಯಕರ್ತರನ್ನು ತರಬೇತಿ ಮಾಡುವ ವರ್ಕ್‌ಶಾಪ್‌ಗಳನ್ನು ಸಂಘಟಿಸಲು, ತರಬೇತಿಯ ನಂತರ ಅಕ್ಟೋಬರ್ 95ರಿಂದ ಮಾರ್ಚ್ 96ರವರೆಗೆ ಪ್ರಚಾರಾಂದೋಲನ ನಡೆಸುವ ತರಬೇತಿ ಪಡೆಯುವ ಕೆಲಸವನ್ನು ಈಗ ಕೈಗೆತ್ತಿಕೊಳ್ಳಬೇಕು. ☐

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಆಗಸ್ಟ್ 21, 1995: ಕಾಂಟ್ರಾಕ್ಟ್ ಕಾರ್ಮಿಕರ ಹಕ್ಕುಗಳಿಗಾಗಿ ಅಖಿಲ ಭಾರತ ಬೇಡಿಕೆ ದಿನಾಚರಣೆ

ಮಾಲಕರು ತಮ್ಮ ಲಾಭಹೆಚ್ಚಿಸಿಕೊಳ್ಳಲು ಶೋಷಣೆಯ ಹೊಸ-ಹೊಸ ವಿಧಾನಗಳನ್ನು ಕಂಡುಕೊಳ್ಳುತ್ತಿರುತ್ತಾರೆ. ಕಾಂಟ್ರಾಕ್ಟ್ ದುಡಿಮೆಯ ವ್ಯವಸ್ಥೆಯ ದುರುಪಯೋಗ ಕೂಡಾ ಇವುಗಳಲ್ಲೊಂದು. ಅನಿಯಮಿತ ಸ್ವರೂಪದ ಕೆಲಸಗಳನ್ನು ಮಾಡಿಸಿಕೊಳ್ಳಲೆಂಬ ಹೆಸರಲ್ಲಿ ತಂದ ಕಾಂಟ್ರಾಕ್ಟ್ ದುಡಿಮೆಯನ್ನು ನಿಯಮಿತಸ್ವರೂಪದ, ಸದಾ ಇರುವ ಕೆಲಸಗಳಿಗೂ ವಿಸ್ತರಿಸಲಾಗಿದೆ. ಲಾಭವೇ ಏಕಮಾತ್ರ ಮಾನದಂಡವೆನ್ನುವ ಹೊಸ ಆರ್ಥಿಕ ನೀತಿಗಳ ಜ್ಯಾರಿಯ ನಂತರ ಈ ದುರುಪಯೋಗ ವಿಪರೀತ ಹೆಚ್ಚಿದೆ. ಈಗ ದೇಶಾದ್ಯಂತ ವಿವಿಧ ಕಾರ್ಖಾನೆ, ಕಛೇರಿಗಳಲ್ಲಿ 2.5 ಕೋಟಿ ಕಾಂಟ್ರಾಕ್ಟ್ ಕಾರ್ಮಿಕರಿದ್ದಾರೆ.ಹೆಚ್ಚು ಅಪಾಯಕಾರಿ ಕೆಲಸಗಳಲ್ಲಿ ಅತ್ಯಂತ ಕಡಿಮೆಕೂಲಿಯಲ್ಲಿ ಮಾನವ ಯೋಗ್ಯವಲ್ಲದ ವಾತಾವರಣದಲ್ಲಿ, ಹೆಚ್ಚಿನ ಸಾಮಾಜಿಕ ಭದ್ರತೆ ಹಾಗೂಕಲ್ಯಾಣ ಸೌಲಭ್ಯಗಳಿಂದ ವಂಚಿತರಾಗಿ ದುಡಿಯುತ್ತಿದ್ದಾರೆ. ಈ ರೀತಿ ವಂಚಿಸಲೆಂದೇ ಕಾಂಟ್ರಾಕ್ಟ್‌ಪದ್ಧತಿಯನ್ನು ತಂದಂತಿದೆ. ಇವರು ಕಾರ್ಮಿಕ ಆಂದೋಲನ ನೀಡುವ ರಕ್ಷಣೆಯಿಂದಲೂ ವಂಚಿತರಾಗಿದ್ದಾರೆ.

ದೇಶದ ಕಾರ್ಮಿಕ ಆಂದೋಲನ, ಮುಖ್ಯವಾಗಿ ಸಾರ್ವಜನಿಕ ವಲಯದ ಕಾರ್ಖಾನೆಗಳಲ್ಲಿರುವ ಕಾರ್ಮಿಕ ಸಂಘಟನೆಗಳು ಮೊತ್ತಮೊದಲ ಬಾರಿಗೆ ಈ ಕಡೆಗೆ ಗಮನ ನೀಡಿವೆ. ಜೂನ್ 10-11ರಂದು ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ ಸಿ.ಪಿ.ಎಸ್.ಟಿ.ಯು.ನ ನಲ್ಲಿ ಆಶ್ರಯದಲ್ಲಿ ಈ ಬಗ್ಗೆ ಮೊತ್ತ ಮೊದಲ ಸಮಾವೇಶ ನಡೆದಿದೆ. ಸಿಐಟಿಯು ಎಐಟಿಯುಸಿ, ಹೆಚ್.ಎಂ.ಎಸ್., ಬೆಂಗಳೂರಿನ ಜೆ.ಎ.ಎಫ್. ಹಾಗೂ ಹೈದರಾಬಾದಿನ ಸಾರ್ವಜನಿಕ ವಲಯ ಸಹಯೋಗ ಸಮಿತಿ ಇವೆ.

ಈ ಸಮಾವೇಶ ಕಾಂಟ್ರಾಕ್ಟ್ ಕಾರ್ಮಿಕರ ಸಮಸ್ಯೆಗಳನ್ನು ಆಳವಾಗಿ ಪರಿಶೀಲಿಸಿ ನಿಯಮಿತ ಕಾರ್ಮಿಕರೊಂದಿಗೆ ಕಾಂಟ್ರಾಕ್ಟ್ ಕಾರ್ಮಿಕರ ಒಂದು ದೇಶವ್ಯಾಪಿ ಐಕ್ಯ ಆಂದೋಲನ ಕಟ್ಟಲು ನಿರ್ಧರಿಸಿತು.

ದೇಶದೆಲ್ಲೆಡೆಯಿಂದ ಬಂದ ಸುಮಾರು 200 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದರು. 52 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ. ಫಂಧೆ, ಎ.ಐ.ಟಿ.ಯು.ಸಿ. ಪ್ರಧಾನ ಕಾರ್ಯದರ್ಶಿ ಎ.ಬಿ. ಬರ್ಧಾನ್,ಗಣ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುನಿಲ್‌ಸೇನ್, ಸಿಐಟಿಯು ಉಪಾಧ್ಯಕ್ಷ ಸಮರ್ ಮುಖರ್ಜಿ, ಕಾರ್ಯದರ್ಶಿ ಕಾಲಿಘೋಷ್, ಪಶ್ಚಿಮ ಬಂಗಾಳ ಹೆಚ್.ಎಂ.ಎಸ್.ಕಾರ್ಯದರ್ಶಿ ಆರ್.ಎನ್.ಗಂಗೂಲಿ, ಬೆಂಗಳೂರಿನ ಜೆ.ಎ.ಎಫ್.ನ ಹೆಚ್. ಮಹದೇವನ್ ಸಮಾವೇಶದಲ್ಲಿ ಮಾತನಾಡಿದವರಲ್ಲಿ ಪ್ರಮುಖರು. ಸಿಐಟಿಯು ಕಾರ್ಯದರ್ಶಿ ಎಸ್. ದೇಬ್‌ರಾಯ್ ಸಮಾವೇಶದ ಹಿನ್ನೆಲೆ ಪ್ರಬಂಧ ಮಂಡಿಸಿದರು.

ಸಮಾವೇಶ ಅಂಗೀಕರಿಸಿದ ಘೋಷಣಾ ಪತ್ರ ಕಾಂಟ್ರಾಕ್ಟ್ ಕಾರ್ಮಿಕರ ಸಮಸ್ಯೆಯ ಮೂಲಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸುತ್ತಾ ಕಾಂಟ್ರಾಕ್ಟ್ ದುಡಿಮೆ (ರದ್ಧತಿ ಮತ್ತು ಹತೋಟಿ) ಕಾನೂನು ಅತ್ಯಂತ ಹೆಚ್ಚು ಉಲ್ಲಂಘನೆಗೊಳಗಾಗಿರುವ ಕಾನೂನು ಎಂದು ಖೇದ ವ್ಯಕ್ತಪಡಿಸಿದೆ. ಕಾನೂನು ರಚಿಸುವಾಗಲೇ ಮಾಲಕರ ಪರವಾಗಿ ಹಲವು ಅಂಶಗಳನ್ನು ಅಸ್ಪಷ್ಟವಾಗಿ ಇಟ್ಟಿರುವ ಈ ಅಪೂರ್ಣ ಕಾನೂನನ್ನು ಕೂಡಾ ಸರಿಯಾಗಿ ಜ್ಯಾರಿ ಮಾಡಲಾಗುತ್ತಿಲ್ಲ, ಈ ಕಾನೂನನ್ನು ದೊಡ್ಡ ಪ್ರಮಾಣದಲ್ಲಿ ಸರಕಾರವೇ ಸ್ವತಃ ಉಲ್ಲಂಘಿಸುತ್ತಿದೆ.

ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರುವ ಕಾಂಟ್ರಾಕ್ಟ್ ಕಾರ್ಮಿಕರ ಸಮಸ್ಯೆಗಳನ್ನು ಸಂಘಟಿತ ವಲಯದ ಕಾರ್ಮಿಕ ಆಂದೋಲನ ಕೈಗೆತ್ತಿಕೊಳ್ಳಲೇಬೇಕಾಗಿದೆ. ಅವರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಹೋರಾಡುವಲ್ಲಿ ಸಕ್ರಿಯ ಪಾತ್ರವಹಿಸಬೇಕಾಗಿದೆ ಎನ್ನುತ್ತಾ ಸಮಾವೇಶದ ಘೋಷಣಾ ಪತ್ರ ನಿಯಮಿತ ಕಾರ್ಮಿಕರಿಗಿಂತ ಹೆಚ್ಚು ಅಪಾಯಕಾರಿ ಕೆಲಸ ಮಾಡಿಯೂ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರುವ ಈ ಕಾರ್ಮಿಕರ ಬೇಡಿಕೆಗಳನ್ನೂ ತಮ್ಮ ಬೇಡಿಕೆಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು, ತಮ್ಮ ಬೇಡಿಕೆಗಳಿಗೆ ಹೋರಾಡುವಾಗ ಈ ಬೇಡಿಕೆಗಳ ಈಡೇರಿಕೆಗಾಗಿಯೂ ಹೋರಾಡಬೇಕು ಎಂದು ಹೇಳಿದೆ. ಹೊಸ ಆರ್ಥಿಕ ನೀತಿಗಳಿಂದ ಹೆಚ್ಚಿರುವ ಶೋಷಣೆಯ ಭಾಗವಾಗಿ ಎಲ್ಲಾ ಕಡೆ ಕಾಂಟ್ರಾಕ್ಟ್ ಕಾರ್ಮಿಕರ ಪ್ರಮಾಣವೂ ದಿನೇ ದಿನೇ ರಭಸದಿಂದ ಹೆಚ್ಚುತ್ತಿರುವ ಸಂದರ್ಭದಲ್ಲಿ ಕಾರ್ಮಿಕ ಆಂದೋಲನ ಈ ಪ್ರಶ್ನೆಯನ್ನು ನಿರ್ಲಕ್ಷಿಸಿದರೆ ತನಗೆ ಕೇಡು ತಂದುಕೊಂಡಂತೆ ಎಂದು ಘೋಷಣಾ ಪತ್ರ ಹೇಳಿದೆ.

ಕಾಂಟ್ರಾಕ್ಟ್ ಕಾರ್ಮಿಕರ ಪರವಾಗಿ ಒಂಭತ್ತು ಬೇಡಿಕೆಗಳನ್ನು ಮುಂದಿಟ್ಟಿರುವ ಸಮಾವೇಶ ಆಗಸ್ಟ್ 21ರಂದು ದೇಶಾದ್ಯಂತ ಎಲ್ಲಾ ಕೈಗಾರಿಕಾ ಘಟಕಗಳಲ್ಲಿ, ಕೇಂದ್ರಗಳಲ್ಲಿ ಅಖಿಲ ಭಾರತ ಕಾಂಟ್ರಾಕ್ಟ್ ಕಾರ್ಮಿಕರ ಬೇಡಿಕೆ ದಿನಾಚರಣೆ ನಡೆಸಲು ತೀರ್ಮಾನಿಸಿದೆ. ಸಿ.ಪಿ.ಎಸ್.ಟಿ.ಯು.ನ ಮುತುವರ್ಜಿಯಿಂದ ಜಂಟಿ ಮತಪ್ರದರ್ಶನಗಳು, ಧರಣಿಗಳು, ರ್‍ಯಾಲಿಗಳು, ಪಂಜಿನ ಮೆರವಣಿಗೆ ಇತ್ಯಾದಿಗಳ ಮೂಲಕ. ಕಾಂಟ್ರಾಕ್ಟ್ ಕಾರ್ಮಿಕರ ಒಂಭತ್ತು ಬೇಡಿಕೆಗಳನ್ನು ಎತ್ತಿ ಹಿಡಿಯಬೇಕು ಎಂದು ಸಮಾವೇಶ ನಿರ್ಧರಿಸಿದೆ.

ಇದಲ್ಲದೆ ಈ ಬೇಡಿಕೆಗಳನ್ನು ಜನಜನಿತಗೊಳಿಸಿ ಬುಡಮಟ್ಟದಲ್ಲಿ ಹೋರಾಟಕ್ಕೆ ಅಣಿಗೊಳಿಸಲು ರಾಜ್ಯಮಟ್ಟದ, ಜಿಲ್ಲಾ ಮಟ್ಟದ, ಕೈಗಾರಿಕಾ ಮಟ್ಟದ ಸಮಾವೇಶಗಳನ್ನು ನಡೆಸಬೇಕು ಎಂದು ಸಮಾವೇಶ ಕರೆ ನೀಡಿದೆ.

ಇಡೀ ಕಾರ್ಮಿಕ ಆಂದೋಲನ, ವಿಶೇಷವಾಗಿ ಸಿ.ಪಿ.ಎಸ್.ಟಿ.ಯು.ನ ಅಂಗಸಂಘಟನೆಗಳು ಕಾಂಟ್ರಾಕ್ಟ್ ಕಾರ್ಮಿಕರ ವಲಯವಾರು, ಉದ್ದಿಮೆವಾರು ಆಂದೋಲನಗಳನ್ನು ಕಟ್ಟಿ ಸಂಸತ್ ಅಧಿವೇಶನದ ವೇಳೆಗೆ ಸಂಸತ್ತಿನ ಎದುರು ಒಂದು ಬೃಹತ್ ರ್‍ಯಾಲಿ ನಡೆಸಲು ಸಿದ್ಧತೆ ನಡೆಸಬೇಕೆಂದೂ ಸಮಾವೇಶ ಕರೆ ನೀಡಿದೆ.

ಬಿ.ಎಸ್.ಪಿ ತನ್ನ ಸಿನಿಕ ಸಮಯ ಸಾಧಕತನಕ್ಕೆ ಭಾರೀ ಬೆಲೆ ತೆರಬೇಕಾದೀತು

-ಸಿಪಿಐ(ಎಂ) ಪೊಲಿಟ್ ಬ್ಯೂರೋ

ಜೂನ್ 2ರಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಉತ್ತರ ಪ್ರದೇಶದ ಬೆಳವಣಿಗೆಗಳ ಬಗ್ಗೆ ಈ ಕೆಳಗಿನ ಹೇಳಿಕೆಯನ್ನು ನೀಡಿದೆ.

"ಇತ್ತೀಚೆಗೆ ಕೆಲವು ಸಮಯದಿಂದ ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಾರ್ಟಿ ಮತ್ತು ಬಿಎಸ್.ಪಿ. ನಡುವೆ ಸೆಳೆತಗಳು ಬೆಳೆದಿದ್ದವು. ಬಿಜೆಪಿ ಈ ಬಿಕ್ಕಟ್ಟನ್ನು ಯಶಸ್ವಿಯಾಗಿ ಬಳಸಿಕೊಂಡು ಬಿಎಸ್.ಪಿಗೆ ಬೆಂಬಲದ ಭರವಸೆ ನೀಡಿ ಸರಕಾರವನ್ನು ಮುರಿದಿದೆ.

1993ರಲ್ಲಿ ಚುನಾವಣೆಗಳಲ್ಲಿ ಎಸ್.ಪಿ.-ಬಿ.ಎಸ್.ಪಿ. ಕೂಟ ಕೋಮುವಾದದ ವಿರುದ್ಧ ಸೆಣಸುವ ಜನಾದೇಶದಿಂದ ಅಧಿಕಾರಕ್ಕೆ ಬಂದಿತ್ತು. ಬಿ.ಎಸ್.ಪಿ. ತನ್ನ ಈ ಸಿನಿಕ ಸಮಯಸಾಧಕ ಕಾರ್ಯಕ್ಕೆ ಭಾರೀ ಬೆಲೆ ತೆರಬೇಕಾಗಿ ಬರುತ್ತದೆ. ಕೋಮುವಾದದ ಅಪಾಯದ ಪ್ರಶ್ನೆಯಿಂದ ದಲಿತ ವಿಭಾಗಗಳೂ ಸೇರಿದಂತೆ ಉತ್ತಪ್ರದೇಶದ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದೀ ಜನಗಳು ಇಂತಹ ನೀತಿಬಾಹಿರ ಕೂಟವನ್ನು ಒಪ್ಪಲಾರರು. ಬಿಜೆಪಿ ಅಧಿಕಾರವನ್ನು ಮತ್ತೆ ಗಿಟ್ಟಿಸಲು ಕಸರತ್ತು ನಡೆಸುತ್ತಿದೆ. ಬಿಜೆಪಿಯ ಕುತಂತ್ರವನ್ನು ಸಿಪಿಐ(ಎಂ) ಬಯಲಿಗೆಳೆಯುತ್ತದೆ."

ತ್ರಿಪುರಾ ಸ್ವಾಯತ್ತ ಮಂಡಳಿ ಚುನಾವಣೆ ನಡೆಸದಿರುವ ಪ್ರಯತ್ನ ಬೇಡ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಎಚ್ಚರಿಕೆ

ಜುಲೈ 8ರಂದು ತ್ರಿಪುರಾ ಬುಡಕಟ್ಟು ಸ್ವಾಯತ್ತ ಜಿಲ್ಲಾ ಮಂಡಳಿಗೆ ನಡೆಯಬೇಕಾಗಿರುವ ಚುನಾವಣೆಗಳು ನಡೆಯದಂತೆ ಮಾಡಲು ತ್ರಿಪುರಾ ರಾಜ್ಯಪಾಲರು(ಆಗ ರೊಮೇಶ್ ಭಂಡಾರಿ ರಾಜ್ಯಪಾಲರಾಗಿದ್ದರು-ಈಗ ಬದಲಾಗಿದ್ದಾರೆ) ಮತ್ತೊಮ್ಮೆ ಪ್ರಯತ್ನಿಸುತ್ತಿರುವುದರ ವಿರುದ್ಧ ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಕ್ಷೇಪ ವ್ಯಕ್ತಪಡಿಸಿದೆ. ಮಂಡಳಿಯ ಕಾರ್ಯಾವಧಿ ಮುಂದಿನ ತಿಂಗಳು ಮುಗಿಯಲಿದೆ. ಆದ್ದರಿಂದ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಮೂಗು ತೂರಿಸದಂತೆ ಹೊಸ ಚುನಾವಣೆಗಳು ನಡೆಯಬೇಕಾದ್ದು ಅತೀ ಅಗತ್ಯ. ಚುನಾಯಿತ ಸಂಸ್ಥೆಗಳಿಗೆ ಸಮಯಕ್ಕೆ ಸರಿಯಾಗಿ ಚುನಾವಣೆ ನಡೆಸಲು ಎಡರಂಗ ಬದ್ಧವಾಗಿದೆ. ಆದರೆ ಕಾಂಗ್ರೆ-ಟಿಯುಜೆಎಸ್‌ನ ಚುನಾವಣೆ ಎದುರಿಸಬಯಸುತ್ತಿಲ್ಲ, ಹಿಂದಿನ ಎಡರಂಗ ಸರಕಾರಈ ಸ್ವಾಯತ್ತ ಮಂಡಳಿಯನ್ನು ರಚಿಸಿತ್ತು. ಆದರೆ ಕಾಂಗ್ರೆ-ಟಿಯುಜೆಎಸ್ ಭಾರಿ ತಪ್ಪುಗಳು ಹಾಗೂ ಭ್ರಷ್ಟಾಚಾರದಿಂದ ಮಂಡಳಿಗೆ ಭಾರೀ ತೊಂದರೆಯಾಗಿದೆ. ಆ ಕೂಟದ ಹಿತಾಸಕ್ತಿ ಕಾಪಾಡಲು ರಾಜ್ಯಪಾಲರು ಮತಕ್ಷೇತ್ರಗಳ ಪುನರ್ವಿಂಗಡಣೆಗೆ ಹೊಸ ಆಯೋಗ ರಚಿಸುವ ಸಲಹೆಯ ನೆಪವೊಡ್ಡಿ ಈ ಕಿಡಿಗೇಡಿತನ ನಡೆಸಿದ್ದಾರೆ. ಈ ಮೂಲಕ ಚುನಾವಣೆಯನ್ನು ಮುಂದೂಡಬೇಕೆಂದು ಕಾಂಗ್ರೆ-ಟಿಯುಜೆಎಸ್ ಬೇಡಿಕೆಯನ್ನು ರಾಜ್ಯಪಾಲರು ಮನ್ನಿಸಿದ್ದಾರೆ.

ರೊಮೇಶ್ ಭಂಡಾರಿ ಮತ್ತೊಮ್ಮೆ ತಾನು ಕಾಂಗ್ರೆ-ಟಿಯುಜೆಎಸ್ ಏಜೆಂಟ್ ಎಂಬುದನ್ನು ಬಯಲು ಮಾಡಿಕೊಂಡಿದ್ದಾರೆ. ಚುನಾವಣೆ ಮುಂದೂಡಬೇಕೆಂದು ಒತ್ತಾಯಿಸಲು ಕೇಂದ್ರ ಮಂತ್ರಿ ಸಂತೋಷ್ ಮೋಹನ್ ದೇಬ್ ಅಗರ್ತಲಾಕ್ಕೆ ಬಂದ ಮೇಲೆ ರಾಜ್ಯಪಾಲರ ಈ ಸಲಹೆ ಬಂದಿದೆ. ತ್ರಿಪುರಾ ಸರಕಾರ ಆ ಸಲಹೆಯನ್ನು ತಿರಸ್ಕರಿಸಿದೆ.

ಚುನಾವಣೆಯನ್ನು ಮುಂದೂಡಿ ಈಗಿನ ಸ್ವಾಯತ್ತ ಮಂಡಳಿಯ ಕಾರ್ಯವನ್ನು ವಿಸ್ತರಿಸಲು ಪ್ರಯತ್ನಿಸಿ ಸಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕ ನೀತಿ-ನಿಯಮಗಳನ್ನು ಉಲ್ಲಂಘಿಸಬೇಡಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ರಾಜ್ಯಪಾಲ ಭಂಡಾರಿ ಹಾಗೂ ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಿದೆ. ರಾಜ್ಯ ಸರಕಾರದ ಸಲಹೆಯ ವಿರುದ್ಧ ಹೋಗಲು ರಾಜ್ಯಪಾಲರಿಗೆ ಹಕ್ಕಿಲ್ಲ ಎಂದು ಪಿ.ಬಿ. ಹೇಳಿದೆ.

ಏರ್ ಹೋಸ್ಟೆಸ್‌ಗಳ ಬೇಡಿಕೆಗೆ ಎಐಡಿಡಬ್ಲ್ಯುಎ ಬೆಂಬಲ

ಹಿರಿಯ ಏರ್ ಹೋಸ್ಟೆಸ್‌ಗಳಿಗೆ ಹೆಚ್ಚಿನ ವೇತನ ಕೊಡುವುದರ ವಿರುದ್ಧ ಭಾರತೀಯ ವಾಣಿಜ್ಯ ಪೈಲಟ್‌ಗಳ ಸಂಘ(ICPA)ನಿಲುವು ತಳೆದಿರುವುದನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ-AIAWA ಖಂಡಿಸಿದೆ. ಪೈಲಟ್‌ಗಳ ಚಳುವಳಿ ಹಿರಿಯ ಏರ್‌ಹೋಸ್ಟೆಸ್‌ಗಳನ್ನು ಇಳಿಸುವ ಆಕ್ಷೇಪಾರ್ಹ ರೂಪ ಪಡೆದಿದೆ. ಇದು ಕೈಗಾರಿಕಾ ವಿವಾದಗಳ ಪರಿಕಲ್ಪನೆಗೇ ಮಾಡಿರುವ ಅಪಹಾಸ್ಯ ಎಂದು AIDWA ಹೇಳಿದೆ. ಏರ್‌ಹೋಸ್ಟೆಸ್‌ಗಳ ಸಂಬಳ ಹೆಚ್ಚಿಸಿದರೆ ಅವರು ಸೀನಿಯರ್‌ಗಳಾಗುತ್ತಾರೆ. ಇದರಿಂದ ಹುಕುಂ ಕೊಟ್ಟು ಪಾಲಿಸುವ ಶೃಂಖಲೆಗೆ ಅಡ್ಡಿಯಾಗುತ್ತದೆ ಎಂಬುದು ಅತ್ಯಂತ ಅಸಂಬದ್ಧ ತರ್ಕ ಎಂದು AIDWA ಅಭಿಪ್ರಾಯಪಟ್ಟಿದೆ.

ಈ ನಿಲುವು ಲೈಂಗಿಕ ಹಿರಿಮೆಯ ಮನೋಭಾವವನ್ನು ಮರೆ ಮಾಚುವ ನಿಲುವು. ಹಿರಿಯ ಏರ್‌ಹೋಸ್ಟೆಸ್‌ಗಳು ಕೆಲವೊಮ್ಮೆ ಎರಡು ದಶಕಗಳಿಗೂ ಹೆಚ್ಚು ಕಾಲ ಮಾಡಿರುವ ಕಠಿಣ ದುಡಿಮೆಗೆ ಸ್ವಲ್ಪವೂ ಗೌರವ ನೀಡದ ನಿಲುಮೆಯಿದು. ವಾಸ್ತವವಾಗಿ ಎಂದೋ ಅವರ ವೇತನ ಹೆಚ್ಚಿಸಬೇಕಿತ್ತು ಎಂದಿರುವ ಎಐಡಿಡಬ್ಲ್ಯುಎ ಏರ್ ಹೋಸ್ಟೆಸ್‌ಗಳ ಬೇಡಿಕೆಯನ್ನು ಬೆಂಬಲಿಸುತ್ತಾ ತನ್ನ ಸೌಹಾರ್ದ ವ್ಯಕ್ತಪಡಿಸಿದೆ.

ಕರ್ನಾಟಕದಲ್ಲಿ ವಿದ್ಯುತ್ ಪ್ರಶ್ನೆ

ಪುಟ 3ರಿಂದ

ನಿಗಮ ಕಾಳಿನದಿ ಹೈಡ್ರೋ ಇಲೆಕ್ಟ್ರಿಕ್‌ಯೋಜನೆಯನ್ನು ಪ್ರಾರಂಭಮಾಡಿತು. ತದನಂತರ ಲಿಂಗನಮಕ್ಕಿಡ್ಯಾಮ್‌ವಿದ್ಯುತ್‌ಯೋಜನೆಯನ್ನು ಪೂರ್ಣಗೊಳಿಸಿತು. 1979ರಲ್ಲಿರಾಯಚೂರುಥರ್ಮಲ್‌ವಿದ್ಯುತ್ ಯೋಜನೆಯನ್ನು ಪ್ರಾರಂಭಿಸಿ ಈಗ ಅಲ್ಲಿ ನಾಲ್ಕು ಘಟಕಗಳು ವಿದ್ಯುತ್ ಉ ತ್ಪಾದನೆ ಮಾಡುತ್ತಿವೆ. ಹೀಗೆ ನಮ್ಮರಾಜ್ಯದಲ್ಲಿ ಶರಾವತಿ ಯೋಜನೆಗಳು ಹಾಗೂ ರಾಯಚೂರುಥರ್ಮಲ್‌ವಿದ್ಯುತ್‌ಕೇಂದ್ರಗಳು ವಿದ್ಯುತ್ ಉತ್ಪಾದಿಸುವ ಪ್ರಮುಖ ಕೇಂದ್ರಗಳಾಗಿವೆ.

ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಮತ್ತು ಅದರ ವಿತರಣೆ ಮಾಡಲಿಕ್ಕೆ ಇಡೀ ದೇಶದಲ್ಲಿಯೇ ಕರ್ನಾಟಕ ಮಾತ್ರ ಪ್ರತ್ಯೇಕವಾದ ಎರಡು ವ್ಯವಸ್ಥೆ ಮಾಡಿದೆಂದು ಹೇಳಿದರೆ ತಪ್ಪಾಗಲಾರದು. ಕರ್ನಾಟಕ ಸರಕಾರವು ಕಾಲಕಾಲಕ್ಕೆ ನಿರ್ಧರಿಸುವ ದರದಲ್ಲಿ ಕರ್ನಾಟಕ ವಿದ್ಯುತ್‌ಶಕ್ತಿ ಮಂಡಳಿಯ ಕೆ.ಪಿ.ಸಿ.ಯಿಂದ ವಿದ್ಯುತ್ತನ್ನು ಕೊಂಡುಕೊಂಡು ಸಾರ್ವಜನಿಕರಿಗೆ ಕೈಗಾರಿಕೆಗಳಿಗೆ ಅದನ್ನು ಪೂರೈಸುತ್ತದೆ. ರಾಜ್ಯ ಸರಕಾರವು ಸಬ್ಸಿಡಿ ರೂಪದಲ್ಲಿಯೇ. ಹಣ ಕೊಟ್ಟು ಸ್ಥಾಪಿಸಿರುವ ಕೆ.ಪಿ.ಸಿ. ಲಾಭ ನಷ್ಟಗಳಿಲ್ಲದ ಆಧಾರದಲ್ಲಿ ವಿದ್ಯುತ್ ಕೊಡಬೇಕೆಂದೂ, ಅದರ ಒಟ್ಟು ಬಂಡವಾಳದ ಮೇಲೆ ಶೇ. 3ರಷ್ಟಕ್ಕಿಂತ ಹೆಚ್ಚಾಗದಂತೆ ಟೆರಿಫ್(ದರಪಟ್ಟಿ)ನ್ನು ಹಾಕತಕ್ಕದ್ದೆಂದು ನಿರ್ಧರಿಸಲಾಗಿತ್ತು. ಕೆ.ಪಿ.ಸಿ.ಯ ಹತ್ತಿರ ಸಾಕಷ್ಟು ಬಂಡವಾಳದ ಅಭಾವದಿಂದಾಗಿ ಎಲ್ಲ ವಿದ್ಯುತ್ ಯೋಜನೆಗಳಿಗೂ ಸರಕಾರವೇ ನೇರವಾಗಿ ಧನಸಹಾಯ ಮಾಡುವ ಪರಿಸ್ಥಿತಿ ಉದ್ಭವಿಸಿದೆ. ಇತ್ತೀಚಿಗಿನವರೆಗೆ ವಿಶ್ವ ಬ್ಯಾಂಕ್ ಕೂಡ ಕೆ.ಪಿ.ಸಿ.ಗೆ ಧನ ಸಹಾಯ ಮಾಡಿತ್ತು. ರಾಜ್ಯ ಸರಕಾರ ರೈತರಿಗೆ ಪುಕ್ಕಟ್ಟೆಯಾಗಿ ವಿದ್ಯುತ್ ನೀಡುವ ಧೋರಣೆಯನ್ನೊಪ್ಪದೆ ತನ್ನ ಧನಸಹಾಯವನ್ನು ನಿಲ್ಲಿಸಿದೆ. ವಿಶ್ವ ಬ್ಯಾಂಕಿನ ಧನ ಸಹಾಯದ ನಿಲುಗಡೆಯಿಂದಾಗಿ 270 ಮೆಗವಾಟ್ ವಿದ್ಯುತ್ ಉತ್ಪಾದಿಸುವ ಕದ್ರಾ-ಕೊಡಸಾಲ ಯೋಜನೆ ಹಾಗೂ 240 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಶರಾವತಿ ಟೇಲ್‌ರೇಸ್ ಯೋಜನೆಗಳು ಸ್ಥಗಿತಗೊಂಡಿವೆ. ಪರಿಸರವಾದಿಗಳ ತಕರಾರು ಕೂಡ ಇದಕ್ಕೆ ಕಾರಣವಾಗಿದೆ. ಈಗೇನೋ ಈ ಯೋಜನೆಗಳು ಮುಂದುವರಿಸಲು ಅಭ್ಯಂತರ ಇಲ್ಲೆಂದು ತಿಳಿದು ಬಂದಿವೆ. ಆದರೆ ಬಂಡವಾಳದ ಅಭಾವ ಅಡ್ಡಿಯಾಗಿದೆಯಂತೆ. 1992-93ರ ಬಜೆಟ್ಟಿನ ಶೇಕಡಾ 23.14ರಷ್ಟು ಅಂದರೆ 690.80 ಕೋಟಿ ವಿದ್ಯುತ್ ಉತ್ಪಾದನೆಗಾಗಿ ಮೀಸಲಿಡಲಾಗಿದೆ. ಕೆ.ಇ.ಬಿ.ಯವರು ಹೈಡಲ್‌ಪವರ್‌ದಿಂದ ಒಂದು ಯೂನಿಟ್ಟಿಗೆ 28 ಪೈಸೆಯಂತೆಯ 'ಥರ್ಮಲ್ ಪವರ್ ದಿಂದ ಯೂನಿಟ್‌ಗೆ 50 ಪೈಸೆಯಂತೆಯೂ ಕೆ.ಪಿ.ಸಿ.ಯಿಂದ ವಿದ್ಯುತ್ ಕೊಂಡುಕೊಳ್ಳುತ್ತಾರೆ.

ವಿದೇಶಿಯರಿಗೆ ದುಂಬಾಲು ಬೀಳುವ ಅಗತ್ಯವಿಲ್ಲ

ಈಗ ಕೇಂದ್ರ ಸರ್ಕಾರದ ಉದಾರೀಕರಣ ನೀತಿಯಿಂದಾಗಿ ರಾಜ್ಯ ಸರಾಕರ ವಿದೇಶಿ ಕಂಪೆನಿಗಳ ಸಹಾಯಕ್ಕೆ ಕೈ ಒಡ್ಡಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಿಐಟಿಯುಗಳಂತೆಯೇ ಕೆ.ಪಿ.ಸಿ.ಯ ಇಂಜಿಯನಿಯರುಗಳ ಸಂಘಟನೆ ಕೂಡ ವಿದ್ಯುತ್ ಕ್ಷೇತ್ರದಲ್ಲಿ ಖಾಸಗೀ ಹಾಗೂ ವಿದೇಶೀ ಬಂಡವಾಳದ ಪ್ರವೇಶವನ್ನು ವಿರೋಧಿಸುತ್ತಿದೆ. ಸರಕಾರ ವಿದೇಶೀ ಕಂಪೆನಿಗಳಿಗೆ ನೀಡುತ್ತಿರುವ ಸವಲತ್ತನ್ನು ಕೆ.ಪಿ.ಸಿ.ಗೂ ಕೊಟ್ಟರೆ ಈ ಯೋಜನೆಗಳನ್ನು ಪೂರ್ಣಗೊಳಿಸಲಿಕ್ಕೆ ಬೇಕಾದ ಬಂಡವಾಳವನ್ನು ತಾವೇ ಸಂಗ್ರಹಿಸುವುದಾಗಿ ಹೇಳಿದ್ದಾರೆ. ಈ ಯೋಜನೆಗಳನ್ನು ಪೂರ್ಣಗೊಳಿಸಿದರೆ 1410 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಶಕ್ತಿ ರಾಜ್ಯದಲ್ಲಿ ಹೆಚ್ಚಾಗುತ್ತದೆ.

ಕೆ.ಪಿ.ಸಿ.ಯ ಕಾರ್ಯವೈಖರಿ ಸಮಾಧಾನಕರವಾಗಿದೆಂದು ಹೇಳುವುದಕ್ಕಿಂತ ಖಾಸಗೀ ಮತ್ತು ವಿದೇಶೀ ಬಂಡವಾದ ಪ್ರವೇಶವನ್ನು ವಿರೋಧಿಸಿ ರಾಜ್ಯಕ್ಕೆ ಬೇಕಾದಷ್ಟು ವಿದ್ಯುತ್ ಉತ್ಪಾದಿಸುವ ಶಕ್ತಿ ತಮ್ಮಲ್ಲಿದೆಂದು ಹೇಳುತ್ತಿರುವುದರಿಂದ ಆಧುನಿಕ ತಂತ್ರಜ್ಞಾನವನ್ನು ವಿದೇಶಗಳಿಂದ ಆಮದು ಮಾಡದೆ ಇಲ್ಲಿಯೇ ಬಂಡವಾಳ ಸಂಗ್ರಹಿಸಿ ನಮ್ಮ ವಿಜ್ಞಾನಿ-ತಂತ್ರಜ್ಞಾನಿಗಳಿಂದಲೇ ಸಾರ್ವಜನಿಕ ಕ್ಷೇತ್ರದಲ್ಲಿಯೇ ನಮ್ಮ ಬೆಳವಣಿಗೆಗೆ ಸಾಕಾಗುವಷ್ಟು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಿದೆಂಬ ಆತ್ಮವಿಶ್ವಾಸ ವ್ಯಕ್ತಮಾಡುತ್ತಿರುವುದು ಪ್ರಶಂಸನೀಯ.

ನರಸಿಂಹರಾಯರೂ, ದೇವೇಗೌಡರೂ ಇದರತ್ತ ಗಮನ ಹರಿಸಿದರೆ ನಮ್ಮವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದಂತಾಗುತ್ತದೆ. ವಿದೇಶೀಯರಿಗೆ ದುಂಬಾಲು ಬೀಳುವ ನೀತಿಗೆ ಆಹ್ವಾನವಿತ್ತಂತಾಗುತ್ತದೆ.ಕೆ.ಇ.ಬಿ.ಯ ಕಾರ್ಯವೈಖರಿ ಅತಿ ಕೆಳಮಟ್ಟಕ್ಕೆ ತಳ್ಳಲ್ಪಟ್ಟಿದೆ. ನಾಗರಿಕ ಪೂರೈಕೆಯ ಜವಾಬ್ದಾರಿಯನ್ನೇ ಅದು ಅರಿತಂತೆ ಕಂಡು ಬರುವುದಿಲ್ಲ. ಕೆ.ಇ.ಬಿ.ಯು ಕೆ.ಪಿ.ಸಿ.ಯಿಂದ ಮಾತ್ರವಲ್ಲ ಅದು ತುಂಗಭದ್ರ ಪವರ್ ಬೋರ್ಡಿನಿಂದಲೂ, ಕೇಂದ್ರ ಗ್ರೀಡ್ ದಿಂದಲೂ ಮಾರ್ಕೆಟ್ ದರದಲ್ಲಿ ವಿದ್ಯುತ್ತನ್ನು ಖರೀದಿಸುತ್ತದೆ. ಕೆ.ಇ.ಬಿ. ವಿತರಣೆ ಮಾಡುವ ವಿದ್ಯುತ್‌ನಲ್ಲಿ ಹೆಚ್ಚಿನಂಶ ಪುಕ್ಕಟೆಯಾಗಿಯೇ ಹೋಗುತ್ತದೆ. ಇದಕ್ಕೆ ಯಾರೂ ಜವಾಬ್ದಾರಿ ವಹಿಸುತ್ತಿಲ್ಲ. ಅದು ರೈತರ ಪಂಪ್‌ಸೆಟ್‌ಗಳಿಗೂ ಹೋಗುತ್ತದೆ. ಕೈಗಾರಿಕೋದ್ಯಮಿಗಳಿಗೂ ಹೋಗುತ್ತದೆ. ರೈತರಿಗೆ ಪುಕ್ಕಟೆ ಒದಗಿಸುವ ವಿದ್ಯುತ್ತಿನ ಜವಾಬ್ದಾರಿ ಸರ್ಕಾರದ್ದಾದರೆ ಖಾಸಗಿಯವರು ಕೈಗಾರಿಕೆಗಳು ಅನಧಿಕೃತವಾಗಿ ಉಪಯೋಗಿಸುವ, ವಿತರಣಾ ತಂತಿಗಳಲ್ಲಿ ಸೋರಿ ಹೋಗುವ ವಿದ್ಯುತ್‌ಗೆಲ್ಲಾ ಕೆ.ಇ.ಬಿ.ಯೇ ಜವಾಬ್ದಾರಿ. ಖಾಸಗೀ ಕಂಪೆನಿಯವರು ವಿದ್ಯುತ್ ಉತ್ಪಾದಿಸಿದರೆ ಅದರ ಬೆಲೆ ಹೆಚ್ಚಾಗುವುದಷ್ಟೇ ಅಲ್ಲ, ಅವರು ಉತ್ಪಾದಿಸುವ ವಿದ್ಯುತ್ತನ್ನು ಕೊಂಡೊಯ್ಯುವ ಸಾಮರ್ಥ್ಯ ಈಗಿನ ಕೆ.ಇ.ಬಿ.ಗೆ ಇಲ್ಲ, ಈಗ ಹಾಕಿರುವ ತಂತಿಗಳ ಮೂಲಕ ಹೆಚ್ಚುವರಿ ವಿದ್ಯುತ್ತನ್ನು ಕೊಂಡೊಯ್ಯಲು ಸಾಧ್ಯವಿಲ್ಲ, ಹಾಗಾಗಿ ಅದನ್ನು ಖಾಸಗಿಯವರಿಗೆ ಒಪ್ಪಿಸುವ ಪರಿಸ್ಥಿತಿ ಉಂಟಾಗುತ್ತದೆ. ವಿದ್ಯುತ್ ಉತ್ಪಾದನೆಗೂ ಖಾಸಗಿಯವರೇ, ಅದರ ವಿತರಣೆಗೂ ಖಾಸಗಿಯವರೇ ಆದರೆ, ಒಂದು ಯೂನಿಟ್ ವಿದ್ಯುತ್ತಿನ ಬೆಲೆ ಎಷ್ಟಾದೀತು!

ಎಲ್ಲರಿಗೂ ಮಾರಕ

ಈಗಿನ ದರದಲ್ಲಿ ಅದು ಯುನಿಟ್ಟಿಗೆ ರೂ.5 ಆಗಬಹುದೆಂದೂ ಕೆಲವು ವರ್ಷಗಳ ನಂತರ ಅದು ಎರಡರಷ್ಟಾಗಬಹುದೆಂಬ ಸಂಶಯ ವ್ಯಕ್ತಮಾಡಲಾಗುತ್ತದೆ.

ಕೈಗಾರಿಕೆಗಳಿಗೆ, ನೀರಾವರಿಗೆ, ಸಾರ್ವಜನಿಕರಿಗೆಲ್ಲ ಅತ್ಯಾವಶ್ಯಕವಾದ ವಿದ್ಯುತ್ ಉತ್ಪಾದನೆ-ವಿತರಣೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿಯೇ ನಿರ್ವಹಿಸಿಕೊಂಡು ಹೋಗದಿದ್ದರೆ ಎಲ್ಲ ವರ್ಗದ ಜನ ಅಪಾರನಷ್ಟಕ್ಕೆ -ಸಂಕಷ್ಟಕ್ಕೆ ತುತ್ತಾಗಬೇಕಾಗುತ್ತದೆ. ಖಾಸಗೀಕರಣ ಬೇಡ, ಸಾರ್ವಜನಿಕ ಕ್ಷೇತ್ರವೇ ಬೇಕೆಂಬ ನೀತಿಯನ್ನು ಸ್ವಾತಂತ್ರ್ಯ ಪಡೆದ ನಂತರ ಅನುಸರಿಸಿಕೊಂಡು ಬಂದ ನೀತಿಯನ್ನೇ ಮುಂದುವರಿಸಿಕೊಂಡು ಹೋಗುವುದು ಅತ್ಯಗತ್ಯ. ಖಾಸಗೀಕರಣ ಅದರಲ್ಲೂ ವಿದೇಶೀ ಬಂಡವಾಳಕ್ಕೆ ಆಮಂತ್ರಣ, ಅವರಿಗೆ ನೀಡುತ್ತಿರುವ ಸವಲತ್ತು ಅವರು ಹೇ ರುವ ದರಗಳೆಲ್ಲ ನಮ್ಮ ದೇಶದ ಕೈಗಾರಿಕೆಗಳಿಗೆ, ರೈತರಿಗೆಲ್ಲ ಮಾರಕವಾಗುವುದರಲ್ಲಿ ಸಂಶಯವಿಲ್ಲ. ವಿದ್ಯುತ್ ಉತ್ಪಾದನೆಯನ್ನು ಖಾಸಗೀಕರಣಗೊಳಿಸುವ ನೀತಿಯನ್ನು ಎಲ್ಲರೂ ವಿರೋಧಿಸಬೇಕು. ದೇವೇಗೌಡ ಸರಕಾರ ಇದರ ಕುರಿತು ಕೈಗೊಂಡಿರುವ ನಿಲುಮೆಯನ್ನು ಕೈಬಿಡಬೇಕೆಂದು ಒತ್ತಾಯಿಸುವ ಚಳುವಳಿ ತೀವ್ರವಾಗಿ ಮುಂದುವರಿದು, ಜನತಾ ಸರಕಾರ ತನ್ನ ನಿಲುಮೆಯನ್ನು ಕೈಬಿಡುವಂತೆ ಮಾಡಬೇಕು. ಜುಲೈ 7ರಂದು ಬೆಂಗಳೂರಿನಲ್ಲಿ ನಡೆಯುವ ವಿದ್ಯುತ್ ಕುರಿತು ಸಮಾವೇಶ ಅಂಥ ಕರೆ ನೀಡಲು, ಖಾಸಗೀಕರಣ ವಿರೋಧಿ ಚಳುವಳಿಗೆ ನಾಂದಿ ಹಾಕಲೆಂದು ಹಾರೈಸುತ್ತೇವೆ.